ಅಧ್ಯಕ್ಷರು – ನಾನು Fundamental ಆಗಿ ಹೇಳುವುದು, ನಾನು ಅವಕಾಶವನ್ನು ಕೊಡುವುದಿಲ್ಲವೆಂದು ರಿಪಿಟೆಡ್ ಆಗಿ ಹೇಳಿದರೂ ಕೂಡ ನೀವು ಮತ್ತೆ ಮತ್ತೆ ಅದನ್ನು violate ಮಾಡಿ, ನೀವು ಎತ್ತಿದ್ದೀರಿ, ನಾನು ವಿರೋಧಪಕ್ಷದ ನಾಯಕರಿಗೆ **"ನೀವು ಕೆಟ್ಟ ಸಂಪ್ರದಾಯವನ್ನು ಹಾಕುತ್ತಿದ್ದೀರಿ, ಬೇಡ"** ಎಂದು ಹೇಳಿದ್ದೇನೆ ಮಾನ್ಯ ವಾಟಾಳ್ ನಾಗರಾಜುರವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟೆ ಈ ಬಗ್ಗೆ ಮಾತನಾಡುವುದಕ್ಕೆ ಮಧ್ಯಾಹ್ನ ಅವಕಾಶವನ್ನು ಕೊಡುತ್ತೇನೆ ನೀವು ಈಗ ಬಜೆಟ್ ಮೇಲೆ ಪ್ರಸ್ತಾಪ ಮಾಡಿ ಎಂದು ರಿಕ್ವೆಸ್ಟ್ ಮಾಡುತ್ತಿದ್ದೇನೆ ಈ ತರಹ ಆದರೆ ಹೇಗೆ? ಬಜೆಟ್ ಮೇಲೆ ಚರ್ಚೆಯಾಗಬೇಕಲ್ಲವೇ ಸ್ವಾಮಿ?

(ಗೊಂದಲ)

ಶ್ರೀ ಬಿ ಶಿವರಾಂ – ಮಾನ್ಯ ಅಧ್ಯಕ್ಷರೆ proposal ನ್ನೇ ಸರ್ಕಾರಕ್ಕೆ ಕಳುಹಿಸಿಲ್ಲವೆಂದರೆ ಹೇಗೆ?

ಅಧ್ಯಕ್ಷರು – ಆಯಿತು, ಶಿವರಾಂರವರೆ, ಅದಕ್ಕಾಗಿ ತಮಗೆ ಯಾವಾಗ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೋ ಕೊಡುತ್ತೇನೆ ಈ ತರಹ ಆದರೆ ಹೇಗೆ?

ಶ್ರೀ ಎನ್ ಧರ್ಮಸಿಂಗ್ – ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ ನಾನು ಆಭಾರಿಯಾಗಿದ್ದೇನೆ ಆದರೆ ಇವತ್ತು ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು ನಮ್ಮ ಪಕ್ಷದ ಉನ್ನತ ಸ್ಥಾನದಲ್ಲಿರುವ ನಾಯಕಿ ಮೇಲೆ ಹಿಂದಿನ ಬಾಗಿಲಿನಿಂದ ಬಂದಂತಹ ಉನ್ನತ ಶಿಕ್ಷಣ ಸಚಿವರು ಆಪಾದನೆ ಮಾಡಿದ್ದಾರೆ

ಅಧ್ಯಕ್ಷರು – ನಾನು ಏನು ಹೇಳುವುದೆಂದರೆ, ಈ ವಿಚಾರದ ಬಗ್ಗೆ ನೀವು ಪದೇ ಪದೇ ಮಾತನಾಡುತ್ತಿದ್ದೀರಿ ಆಮೇಲೆ ಸಾಯಂಕಾಲ ಆ ವಿಚಾರವನ್ನು ಎತ್ತಿ

ಶ್ರೀ ಎನ್ ಧರ್ಮಸಿಂಗ್ – ಮಾನ್ಯ ಶಂಕರಮೂರ್ತಿಯವರು ಉನ್ನತ ಶಿಕ್ಷಣ ಸಚಿವರಾಗಿ

ಶ್ರೀ ಕೆ ಎಸ್ ಈಶ್ವರಪ್ಪ – ಅವರು ಜಾತಿ ವಿಚಾರ ಮಾತನಾಡಿದ್ದಾರಾ?

ಶ್ರೀ ಎನ್ ಧರ್ಮಸಿಂಗ್ – ಅವರು ಕ್ಷಮಾಯಾಚನೆಯನ್ನು ಕೇಳಬೇಕು

ಶ್ರೀ ಕೆ ಎಸ್ ಈಶ್ವರಪ್ಪ – ಬಜೆಟ್ ಭಾಷಣದಲ್ಲಿ ಜಾತಿ ವಿಚಾರವನ್ನು ಪ್ರಸ್ತಾಪ ಮಾಡಬಹುದು

ಶ್ರೀ ಬಿ ಶಿವರಾಂ – ಬಜೆಟ್ ಭಾಷಣದಲ್ಲಿ ಜಾತಿ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬರುತ್ತದೆಯೇ?

(ಗೊಂದಲ)

ಅಧ್ಯಕ್ಷರು – ನಿಮಗೆ ನಿಯಮ ಇಲ್ಲವೇ?

ಶ್ರೀ ಡಿ ಕೆ ಶಿವಕುಮಾರ್ – ಜಾತಿಯ ಬಗ್ಗೆ ಹೇಳಬಹುದೇ?

ಅಧ್ಯಕ್ಷರು – ನೀವು ಹೇಳಿಲ್ಲವೇ

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಉನ್ನತ ಶಿಕ್ಷಣ ಸಚಿವರು ಇಲ್ಲಿ ಬರಬೇಕು ಕ್ಷಮೆ ಯಾಚನೆ ಮಾಡಬೇಕು

(ಗೊಂದಲ)

ಶ್ರೀ ಬಿ ಶಿವರಾಂ – ಯಾವುದೇ ಕಾರಣಕ್ಕೂ ಕೂಡ ಕೇಂದ್ರ ಸರ್ಕಾರಕ್ಕೆ ಕಳುಹಿಸಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ – ಸದನವನ್ನು ಬಹಳ ಘನತೆಯಿಂದ ನಡೆಸಿಕೊಂಡು ಹೋಗುತ್ತಿದ್ದೀರಿ ನಿಯಮಾವಳಿಗಳ ಪ್ರಕಾರ ನಡೆಯಬೇಕೆಂದು ತಾವು ಯಾವಾಗಲೂ ಕೂಡ ಪ್ರಸ್ತಾಪ ಮಾಡುತ್ತಿದ್ದೀರಿ ಶೂನ್ಯವೇಳೆಯಲ್ಲಿ ಈ ವಿಚಾರಗಳನ್ನು ಎತ್ತುವುದಕ್ಕೆ ಆಗುವುದಿಲ್ಲ ಅದು ಇಲ್ಲವೆಂದು ಯಾರು ಹೇಳುತ್ತಾರೆ ಅದಕ್ಕಾಗಿ permission ಕೊಟ್ಟರು ಆದ್ದರಿಂದ ಶೂನ್ಯ ವೇಳೆಯಲ್ಲಿ ಈ ರೀತಿಯ ಚರ್ಚೆಗೆ ಅವಕಾಶವಿಲ್ಲ ಶೂನ್ಯ ವೇಳೆಯಲ್ಲಿ ವಿರೋಧಪಕ್ಷದ ನಾಯಕರು ನಿಮ್ಮ ಪರವಾಗಿ ತಾವು

ಕಳುಹಿಸಿರುವಂತಹ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಈಗ ತಮ್ಮಲ್ಲಿಯೂ ಕೂಡ ಅನೇಕ ಕಡೆಗೆ

ಶ್ರೀ ಡಿ ಕೆ ಶಿವಕುಮಾರ್ – ನಾವು ಬೈಯಿಸಿಕೊಳ್ಳುವುದಕ್ಕೆ ಕುಳಿತಿದ್ದೀವಾ? ಆಗಲ್ಲಾ ಸ್ವಾಮಿ, ಅವರು ಹೇಳಿದ ಹಾಗೆ ಬೈಯಿಸಿಕೊಳ್ಳುವುದಕ್ಕೆ ಆಗುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ – ಈಗ ಸೋನಿಯಾ ಗಾಂಧಿಯವರಾಗಲಿ, ಅಥವಾ ಇನ್ಯಾರೋ ನಾಯಕರು ಆಗಲಿ ಯಾರು ಅಪಾದನೆ ಮಾಡತಕ್ಕದ್ದಲ್ಲ ಈಗ ಗಂಭೀರವಾಗಿ ಚರ್ಚೆ ನಡೆಯುತ್ತಿದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಶಂಕರಮೂರ್ತಿಯವರು ಅಸತ್ಯವಾದುದನ್ನು ಏನು ಹೇಳಿದ್ದಾರೆ ಅದನ್ನು ಸಭೆಗೆ ಹೇಳಿ ಪತ್ರಿಕೆಯನ್ನು ಓದಿ ಅದರಲ್ಲಿ ಅಸತ್ಯವಾದುದನ್ನು, ಸತ್ಯಕ್ಕೆ ದೂರವಾದುದು ಏನಿದೆ ಅದನ್ನು ಹೇಳಿ ಅಲ್ಲಿ ಮುಖ್ಯಮಂತ್ರಿಯವರು, ಸೋನಿಯಾ ಗಾಂಧಿಯವರು ಒಂದೇ ಜನಾಂಗದವರು, ಒಂದೇ ಪಾರ್ಟಿಯವರು ಎಂದು ಹೇಳಿದ್ದಾರೆ ಅದರಲ್ಲಿ ಏನು ಅಪರಾಧ ಇದೆ? ಅದರಲ್ಲಿ ಏನು ಇದೆ ಹೇಳಿ

ಶ್ರೀ ಎನ್ ಧರ್ಮಸಿಂಗ್ – We condemn your statement ಯಡಿಯೂರಪ್ಪನವರೇ ಏನು ಮಾತನಾಡುತ್ತಿದ್ದೀರಿ

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾಗಿ ಘೋಷಣೆಯನ್ನು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು – ಈಗ ಕೇಳಿ,

ಶ್ರೀ ಆರ್ ವಿ ದೇಶಪಾಂಡೆ :– ಹಾಗಾದರೆ ಅಧಿಕಾರ ನಮಗೆ ಇಲ್ಲ

ಶ್ರೀ ಎಂ ಪಿ ಪ್ರಕಾಶ್ – ಅದು ಏನಾದರೂ ಇರಲಿ,

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಶಂಕರಮೂರ್ತಿಯವರನ್ನು ಕರೆಸೋಣ ಇದರ ಬಗ್ಗೆ ಚರ್ಚೆ ಮಾಡೋಣ

(ಗೊಂದಲ)

ಅಧ್ಯಕ್ಷರು – ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡುತ್ತೇವೆ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ಸೂಚನೆಯನ್ನು ಕೊಡಿ ಈಗ ಆಗಲ್ಲ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಬೇರೆ ಸೂಚನೆಯನ್ನು ಕೊಡಿ, ನಾನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ ಇದರ ಬಗ್ಗೆ ಶಂಕರಮೂರ್ತಿಯವರು ಏನು ಮಾತಾಡ್ತಾರೆ? ಈ ತರಹ ಆದರೆ ಏನು? ನಿಮಗೆ ಸಭೆ ನಡೆಸುವ ಬಗ್ಗೆ ಇಷ್ಟವಿಲ್ಲ ನೀವು ವಿರೋಧಪಕ್ಷದ ನಾಯಕರಾಗಿ, ನೀವು ಕೆಟ್ಟ ಸಂಪ್ರದಾಯವನ್ನು ಹಾಕುತ್ತಿದ್ದೀರಿ ಇದು ಸರಿಯಲ್ಲ ಮಾನ್ಯ ಸಂಸದೀಯ ಸಚಿವರು ಸರ್ಕಾರದ ಪರವಾಗಿ ಏನಾದರೂ ಹೇಳುವುದು ಇದೆಯೇ?

ಶ್ರೀ ಎಂ ಪಿ ಪ್ರಕಾಶ್ – ಸನ್ಮಾನ್ಯ ಅಧ್ಯಕ್ಷರೆ, ಯಾವುದಾದರೂ ಪತ್ರಿಕಾ ಹೇಳಿಕೆಯ ಮೇಲೆ ನಾವು ಚರ್ಚೆ ಮಾಡಿರುವಂತಹದ್ದು, ನಿಯಮಾವಳಿಗಳ ಪ್ರಕಾರ ಪತ್ರಿಕಾ ಹೇಳಿಕೆಯನ್ನು ಅಧಾರವಾಗಿಟ್ಟುಕೊಂಡು ಚರ್ಚೆ ಮಾಡುವುದರ ಬಗ್ಗೆ ಅನೇಕ ಬಾರಿ ಸ್ಪೀಕರ್‌ರವರು ತೀರ್ಮಾನವನ್ನು ಕೊಟ್ಟಿದ್ದಾರೆ

ಅಧ್ಯಕ್ಷರು – ನಾನು ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ವೆಲ್‌ನಲ್ಲಿರುವಂತಹ ಎಲ್ಲಾ ಸ್ನೇಹಿತರುಗಳಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಇದನ್ನು ಶೂನ್ಯವೇಳೆಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ ಈ ವಿಚಾರ ಚರ್ಚೆಯಾಗಬೇಕೆಂದರೆ, ಬೇರೆ ಒಂದು ಸೂಚನೆಯನ್ನು ಕಳುಹಿಸಿ ಅದಕ್ಕೆ ನಾನು ಅವಕಾಶವನ್ನು ಮಾಡಿಕೊಡುತ್ತೇನೆ ಈಗ ನಾಯಕರು ಬಜೆಟ್ ಮೇಲೆ ಆರಂಭ ಮಾಡಲಿ ಅದು ಸರಿಯಾದ ಕ್ರಮ ನೀವು ಈ ರೀತಿ ಮಾಡಿದರೆ ಏನಾಗುತ್ತದೆ ಎಂದರೆ, ಸದನವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ ಯಾವುದು ಕೂಡ ಸರಿಯಾಗಿ ನಡೆಯುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ – ಬಹಳ ಮುಖ್ಯವಾಗಿರುವಂತಹ ವಿಷಯಗಳು,

ಅದರಲ್ಲಿ ಬಜೆಟ್ ವಿಷಯದಲ್ಲಿ ನಿನ್ನೆ ಕೂಡ ನಾವು ಮಾತನಾಡಿದ್ದೇವೆ ಬಜೆಟ್ ಬಗ್ಗೆ ಬಹಳ ಚರ್ಚೆ ಆಗಬೇಕಾಗಿದೆ ಒಂದು ಪತ್ರಿಕಾ ಹೇಳಿಕೆಯ ಸತ್ಯಾಸತ್ಯತೆಯ ಬಗ್ಗೆ ಸಂಬಂಧಪಟ್ಟಿರುವವರು ಈ ಬಗ್ಗೆ ಮಾತನಾಡಬೇಕಾಗುತ್ತದೆ ಈ ಬಗ್ಗೆ ಸಂಬಂಧಪಟ್ಟವರನ್ನು ನಾವು ಕೇಳಬೇಕಾಗುತ್ತದೆ ಪತ್ರಿಕಾ ಹೇಳಿಕೆ ಸರಿಯಾದುದೇ? ಅದೇ ರೀತಿಯಾಗಿ ಹೇಳಿದ್ದಾರೆಯೇ? ಈ ತರಹದಲ್ಲಿ ಘೋಷಣೆಗಳನ್ನು ಕೂಗಬಾರದು ಆದ್ದರಿಂದ ದಯವಿಟ್ಟು

(ಸದನದ ಬಾವಿಯಲ್ಲಿ ಧಿಕ್ಕಾರದ ಘೋಷಣೆಯನ್ನು ಕೂಗುತ್ತಿದ್ದರು)

ಗಂಭೀರವಾದ ಚರ್ಚೆಯನ್ನು ಮಾಡುವುದಕ್ಕೆ ವಿರೋಧಪಕ್ಷವಾದ ಕಾಂಗ್ರೆಸಿಗರಿಗೆ ಸುತರಾಂ ಕೂಡ ಮನಸ್ಸು ಇಲ್ಲವೆಂದು ಆಗುತ್ತದೆ ಬಹಳ ಮುಖ್ಯವಾದಂತಹ ವಿಷಯಗಳು ರಾಜ್ಯದ ಜನತೆಗೆ ಸಂಬಂಧಪಟ್ಟಂತಹ ವಿಷಯಗಳು ಚರ್ಚೆಯಾಗಬೇಕಾದುದರಲ್ಲಿ ಜಯಘೋಷವನ್ನು ಕೂಗುವುದು ಮತ್ತು ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟು ಮಾಡುವುದು ಸರಿಯಾದುದಲ್ಲ ಪತ್ರಿಕಾ ಹೇಳಿಕೆಯ ಮೇಲೆ ನೀವು ಇವತ್ತು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಪತ್ರಿಕಾ ಹೇಳಿಕೆಯನ್ನು ನೀಡಿರುವುದು ನಿಜವೋ, ಅಲ್ಲವೋ ಎಂಬ ಬಗ್ಗೆ ಸಂಬಂಧಪಟ್ಟವರನ್ನು ಕರೆಸಿ ಅವರನ್ನು ಕೂಡ ಮಾತನಾಡಿಸುತ್ತೇವೆ ಅಕಸ್ಮಾತ್ ಹೇಳಿಕೆ ನೀಡಿರುವುದು ಸರಿಯಾದುದಲ್ಲವೆಂದರೆ, ಆ ವಿಷಯವನ್ನು ಅಲ್ಲಿಗೆ ಕೈಬಿಡಬಹುದು, ಸರಿಯಾದುದಾಗಿದ್ದರೆ, ಚರ್ಚೆಯಾಗುವಂತಹದ್ದು ಕೂಡ ಆಗಬಹುದು ಈ ಹಿನ್ನೆಲೆಯಲ್ಲಿ ತಾವು ಅವಕಾಶವನ್ನು ಕೊಟ್ಟಿದ್ದೀರಿ ಅದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಶೂನ್ಯ ವೇಳೆಯಲ್ಲಿ ಧರಣಿಗೆ ಬರುವುದು, ಬಾವಿಗೆ ಬೀಳತಕ್ಕಂತಹದ್ದು, ಜಯಘೋಷ ಮಾಡುವಂತದ್ದು, ಸುತರಾಂ ಆಗಿ ಇವತ್ತಿನವರೆಗೂ ನಡೆದಿರುವುದಲ್ಲ ನಮಗೂ ಕೂಡ ಸೋನಿಯಾ ಗಾಂಧಿಯವರ ಬಗ್ಗೆ ಅಭಿಮಾನವಿದೆ ಅಭಿಮಾನವಿದೆ ಎಂದರೆ ಅವರ ಪರವಾಗಿ ಓಟು ಕೇಳುತ್ತೇವೆಂದಲ್ಲ ಒಂದು ಪ್ರಧಾನ ಮಂತ್ರಿ ಪದವಿ ಬಂದಾಗ ರಾಜೀನಾಮೆಯನ್ನು ಕೊಡುತ್ತೇನೆ, ನಾನು ಆಗುವುದಿಲ್ಲವೆಂದು ಹೇಳಿರುವ ಬಗ್ಗೆ ಅವರ ತ್ಯಾಗದ ಬಗ್ಗೆ, ನಾವು ಅಭಿಮಾನವನ್ನು ವ್ಯಕ್ತಮಾಡಿದ್ದೇವೆ ಅದೇ ರೀತಿಯಾಗಿ ಎಲ್ ಕೆ ಅಡ್ವಾಣಿಯವರ ಬಗ್ಗೆಯೂ

ಅಭಿಮಾನ ಪಡುತ್ತೇವೆ, ಹಾಗೂ ಜಿನ್ನಾರವರ ಹೇಳಿಕೆಯು ಬಂದಾಗ ಅದೇ ರೀತಿಯಾಗಿ ವಾಜಪೇಯಿಯವರ ಬಗ್ಗೆ ಅವರ ಮುತ್ಸದ್ದಿತನದ ಬಗ್ಗೆಯೂ ಕೂಡ ನಾವು ಮಾತನಾಡುತ್ತೇವೆ ಶಂಕರಮೂರ್ತಿಯವರು ಸದನಕ್ಕೆ ಬಂದು ಸಹಕರಿಸಿದ ಸಂದರ್ಭದಲ್ಲಿ ಅದನ್ನು ಮಾತನಾಡುತ್ತೇವೆ ಆದರೆ, ಶೂನ್ಯವೇಳೆಯಲ್ಲಿ ಆ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ನಾವು ಏನು ಉತ್ತರವನ್ನು ಕೊಟ್ಟಿದ್ದೇವೆ? ಅವರನ್ನು ಕರೆಸುತ್ತೇವೆ ಕರೆಸಿ ಮಾತನಾಡುವವರೆಗೂ ಕೂಡ ಸಮಯ ನೀಡದಿದ್ದರೆ, ವಿರೋಧ ಪಕ್ಷದ ನಾಯಕರಾಗಿ ನೀವು ಈ ಬಗ್ಗೆ ಮಾರ್ಗದರ್ಶನವನ್ನು ಕೊಡಬೇಕೇ ವಿನಃ ಬಾವಿಯೊಳಗೆ ಬೀಳುತ್ತೀರಿ ಈ ಪತ್ರಿಕಾ ಹೇಳಿಕೆಯನ್ನು ನೀಡಿರುವುದು ನಿಜವಲ್ಲ ಎಂದು ಬಂತು, ಆಗ ಏನು ಹೇಳುತ್ತೀರಿ? ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವುದು ಮಾನ್ಯ ಶಂಕರಮೂರ್ತಿಯವರು, ಅವರ ಅಭಿಪ್ರಾಯ ಏನು ಇದೆ ಎಂದು ಮೊದಲು ಕೇಳೋಣ ಅಲ್ಲಿಯವರೆಗೆ ಸಮಾಧಾನವಾಗಿ ಈ ಕಾರ್ಯಕಲಾಪಗಳಿಗೆ ಅಡ್ಡಿಪಡಿಸಿದಂತೆ ದಯವಿಟ್ಟು ಸಹಕಾರವನ್ನು ಕೊಡಬೇಕು

ಶ್ರೀ ಎನ್ ಧರ್ಮಸಿಂಗ್ :– ಹೇಗೆ ಮಾಡಬೇಕೆಂದು ನೀವೇ ಹೇಳಿ

ಶ್ರೀ ಎಂ ಪಿ ಪ್ರಕಾಶ್ – ಶೂನ್ಯ ವೇಳೆಯಲ್ಲಿ ತಾವು ಅಥವಾ ರಮೇಶ್‌ಕುಮಾರ್‌ರವರು ಹೇಳಲಿ, ಇದರಲ್ಲಿ ಚರ್ಚೆಗೆ ಅವಕಾಶವಿದೆಯೇ?

ಶ್ರೀ ಎನ್ ಧರ್ಮಸಿಂಗ್ – ಮತ್ತೆ ಏಕೆ ಅವಕಾಶವನ್ನು ಕೊಟ್ಟರು?

ಶ್ರೀ ಎಂ ಪಿ ಪ್ರಕಾಶ್ – ಆದರೆ ತಾವು mention ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ ನೀವೂ ಆ ವಿಚಾರವಾಗಿ

ಅಧ್ಯಕ್ಷರು – ಯಾರಿಗೂ ಕೊಟ್ಟಿಲ್ಲ

(ಗೊಂದಲ)

ಅಧ್ಯಕ್ಷರು – ತಾವು ಮಾತನಾಡುತ್ತಿದ್ದೀರಿ, ಅದಕ್ಕೆ

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಗೃಹ ಸಚಿವರು ಈ ಬಗ್ಗೆ ಪಕ್ಷವಾಗಿರಲಿ, ಹಿರಿಯರ ಬಗ್ಗೆ ಗೌರವ ಇರಲಿ

ಶ್ರೀ ಎಂ ಪಿ ಪ್ರಕಾಶ್ – ನಿಮಗೆ ಗೌರವವಿಲ್ಲ ದೇಶಪಾಂಡೆಯವರೆ, ಕಾರ್ಯಕಲಾಪ ಮಾಡುವುದಕ್ಕೆ ನಿಮಗೆ ಎದೆಗಾರಿಕೆ ಇಲ್ಲ ಎದೆಗಾರಿಕೆ ಇಲ್ಲದೇ ಇರುವದರಿಂದ ಈ ರೀತಿ ಮಾಡುತ್ತಿದ್ದೀರಿ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – ಸೋನಿಯಾಗಾಂಧಿ ಬಗ್ಗೆ ಗೌರವವಿದೆ ಎಂದು ಹೇಳಿದ್ದೀರಿ

ಶ್ರೀ ಎಂ ಪಿ ಪ್ರಕಾಶ್ – ಈಗಲೇ ಕರೆಸಿ ಎಂದು ಹೇಳುವುದಕ್ಕೆ ಅಧಿಕಾರ ಇದೆಯೇ? ನೀವು ಈಗಲೇ ಕರೆಸಿ ಎಂದು ಹೇಳುತ್ತಿರಲ್ಲ ಈಗಲೇ ಕರೆಸಿ ಮಾತನಾಡಿ ಅಂದರೆ ಏನು?

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ – ಸೋನಿಯಾ ಗಾಂಧಿಯ ಬಗ್ಗೆ ಗೌರವವಿದೆ, ಗೌರವವಿದ್ದರೆ statement ನ್ನು condemn ಮಾಡಿ ಜಾತಿಯ ಮೇಲೆ ಏತಕ್ಕಾಗಿ ಮಾತನಾಡಬೇಕು? Why is he making statements?

ಶ್ರೀ ಎಂ ಪಿ ಪ್ರಕಾಶ್ – ಶೂನ್ಯ ವೇಳೆಯಲ್ಲಿ ನೀವು ಏನು ಮಾತನಾಡುತ್ತಿದ್ದೀರಿ?

ಶ್ರೀ ಆರ್ ವಿ ದೇಶಪಾಂಡೆ – you condemn the statement ಶಂಕರಮೂರ್ತಿಯವರು ಬೇಕಾದರೆ ಮಧ್ಯಾಹ್ನ ಬರಲಿ you condemn the statement

ಶ್ರೀ ಎಂ ಪಿ ಪ್ರಕಾಶ್ – ಅವರು ಹೇಳುವುದಕ್ಕೆ ಅವಕಾಶವನ್ನು ಕೊಡಬೇಕಲ್ಲವೇ? ಅದು ಬಿಟ್ಟು ಬಾವಿಗೆ ಬೀಳುವುದು ಸರಿಯಲ್ಲ ತಾವು ನಿಯಮಾವಳಿಗಳ ಪ್ರಕಾರ ಎತ್ತಿದ್ದೀರಿ, ಅದಕ್ಕಾಗಿ ಬಾವಿಗೆ ಬೀಳಬೇಕೆ? ಚರ್ಚೆ ಮಾಡುವುದಕ್ಕೆ ಬರಬೇಕೆ? ಈ ಬಗ್ಗೆ ಘೋಷಣೆಯನ್ನು ಕೂಗಬೇಕೆ? ಘೋಷಣೆಯನ್ನು ಕೂಗಿದರೆ ಗಂಟಲು ಜಾಸ್ತಿ ಇದೆ ಎಂದು ಗೊತ್ತಾಗಿ ಬಿಡುತ್ತದೆಯೇ?

ಶ್ರೀ ಆರ್ ವಿ ದೇಶಪಾಂಡೆ – ಹಾಗಲ್ಲ ಸಾರ್

ಶ್ರೀ ಎಂ ಪಿ ಪ್ರಕಾಶ್ – ಇನ್ನೇನು ಸಾರ್ ಇದು

ಶ್ರೀ ಆರ್ ವಿ ದೇಶಪಾಂಡೆ – ಇದು ಜೋರಲ್ಲ ನಿಮ್ಮ ಭಾಷೆ ನಮಗೆ ಬರುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ – ನಾವು ಅವರನ್ನು ಕರೆಸುತ್ತೇವೆ ಪತ್ರಿಕಾ ಹೇಳಿಕೆ ಸರಿ ಇದೆಯೋ ಅಥವಾ ತಪ್ಪು ಇದೆಯೋ ಅದರ ಬಗ್ಗೆ ಚರ್ಚೆ ಮಾಡೋಣ

ಶ್ರೀ ಆರ್ ವಿ ದೇಶಪಾಂಡೆ – O K

ಅಧ್ಯಕ್ಷರು – ನೀವುಗಳು ನಿಮ್ಮ ಸ್ಥಾನಗಳಿಗೆ ಹೋಗಿ ದಯಮಾಡಿ

ಶ್ರೀ ಎನ್ ಧರ್ಮಸಿಂಗ್ – ಸೋನಿಯಾ ಗಾಂಧಿಯವರ ಮೇಲೆ ವಿನಃಕಾರಣ ಹೇಳಿಕೆಯನ್ನು ಕೊಡುವುದು ಸರಿಯಲ್ಲ

(ಗೊಂದಲ)

ಅಧ್ಯಕ್ಷರು – ಏಕೆ ಈ ರೀತಿಯಾಗಿ ಮಾಡುತ್ತಿದ್ದೀರಿ ನೀವೆಲ್ಲರೂ ಆರು ಸಾರಿ ಗೆದ್ದು ಬಂದಿರುವವರು

ಶ್ರೀ ಆರ್ ವಿ ದೇಶಪಾಂಡೆ – ಈ ಬಗ್ಗೆ ತಾವು ಹೇಳಿ

ಅಧ್ಯಕ್ಷರು – ನೀವು ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ನಾನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ ಅವರನ್ನು ಕರೆಸೋಣ ಅವರು ಏನು ಹೇಳುತ್ತಾರೆಂದು ಕೇಳೋಣ

ಶ್ರೀ ಡಿ ಕೆ ಶಿವಕುಮಾರ್ – ಕರೆಸುತ್ತೀರೆಂದು ಹೇಳುತ್ತೀರಿ ಯಾವಾಗ?

ಅಧ್ಯಕ್ಷರು – ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ ನೀವು ಒಂದು ಸೂಚನೆಯನ್ನು ಕೊಡಿ ನೀವು ಸುಮ್ಮನೆ ಏತಕ್ಕೆ ಕೂಗಾಡುತ್ತಿದ್ದೀರಿ?

ಶ್ರೀ ಎನ್ ಧರ್ಮಸಿಂಗ್ – ಯಾವುದರ ಮೇಲೆ ಮಾಡಿದ್ದಾರೆ, ಎಲ್ಲಿ ಮಾಡಿದ್ದಾರೆ

ಅರಗ ಜ್ಞಾನೇಂದ್ರ – ಚರ್ಚೆ ಮಾಡೋಣ ಬನ್ನಿ

ಅಧ್ಯಕ್ಷರು – ಇದೇ ಒಂದು ಸಂಪ್ರದಾಯವಾಗಿ ಬಿಡುತ್ತದೆ

(ಈ ಹಂತದಲ್ಲಿ ಶ್ರೀನಿವಾಸಗೌಡರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು – ಶ್ರೀನಿವಾಸಗೌಡರೆ, ನೀವು ಏನೆಂದರೆ ದೊಡ್ಡ ಗಂಟಲು ಇದೆ ಎಂದು ಬಾಯಿಗೆ ಏನು ಬರುತ್ತದೆಯೋ ಅದನ್ನೆ ಮಾತನಾಡುತ್ತೀರಿ ನಾನು ರೀಪಿಟೆಡ್ ಆಗಿ ಹೇಳುತ್ತಿದ್ದೇನೆ ಅವರನ್ನು ಕರೆಸುತ್ತೇನೆ ನೀವುಗಳು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಎಂದರೆ ನೀವುಗಳು ಕೇಳುತ್ತಿಲ್ಲವಲ್ಲ

ಶ್ರೀ ಎನ್ ಧರ್ಮಸಿಂಗ್ – ಏನು ಮಾತನಾಡುತ್ತಿದ್ದೀರಿ?

ಅಧ್ಯಕ್ಷರು – ಏನಾಗಿದೆ ಅಂದರೆ, ನಮ್ಮ ಹಳ್ಳಿಯಲ್ಲಿ ಹೇಳುತ್ತಾರೆ, ಜುಟ್ಟು ಹಿಡಿದುಕೊಂಡು ಹಡೆದಂಗೆ ಎಂದು ಆ ತರಹ ನಿಮ್ಮ ಕಥೆಯಾಗಿದೆ ಈ ರೀತಿ ಮಾಡಿದರೆ ಹೇಗೆ ಆಗುತ್ತದೆ? ನಾನು ಸೂಚನೆ ಕೊಟ್ಟು ಅವರನ್ನು ಕರೆಸುತ್ತೇನೆ ತಮ್ಮ ಸ್ಥಾನಗಳಿಗೆ ಹೋಗಿ ಎಂದರೆ ಕೇಳುತ್ತಿಲ್ಲವಲ್ಲಾ ನಂಬಿಕೆ ಇರಬೇಕು ಪರಸ್ಪರ ನಂಬಿಕೆ ಇಲ್ಲದೆ ಇದ್ದರೆ ಹೇಗೆ? ಈ ತರಹ ಆದರೆ ಹೇಗೆ ತಾವು ಹೇಳಬೇಕು ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ

(ಸಭೆಯು 12 ಗಂಟೆ 07 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 10 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸಭೆಯು ಮತ್ತೆ ಮಧ್ಯಾಹ್ನ 12 49 ಗಂಟಗೆ ಸಮಾವೇಶಗೊಂಡಿತು
(ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು – ಈಗ ರಮೇಶ್ ಕುಮಾರ್ ಅವರು ಏನು ಮಾತನಾಡಿದ್ದಾರೆ ಎನ್ನುವುದನ್ನು ನಾನು ನೋಡಿದ್ದೇನೆ ಅದರಲ್ಲಿ ಆಕ್ಷೇಪಾರ್ಹವಾದ ಪದಗಳೇನೂ ಇಲ್ಲ ಆದ್ದರಿಂದ ಆ ವಿಚಾರವನ್ನು ಮುಕ್ತಾಯ ಮಾಡಲಾಗಿದೆ ಈಗ ಏನು ಶಂಕರಮೂರ್ತಿಯವರ ಬಗ್ಗೆ ಒಂದು ಚರ್ಚೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿತ್ತು, ಅದನ್ನು ಬೇರೆ ನಿಯಮಾವಳಿಗಳ ಪ್ರಕಾರ ಚರ್ಚೆ ಮಾಡೋಣ

ಶ್ರೀ ಮಲ್ಲಿಕಾರ್ಜುನ ಖರ್ಗೆ – Zero Hour ನಲ್ಲಿ ಏಕೆ ಕೊಟ್ಟಿತ್ತು ಎಂದರೆ, ಒಬ್ಬರು Cabinet ಸಚಿವರು ಏನು ಮಾತನಾಡಬೇಕು, ಏನು ಮಾತನಾಡಬಾರದು ಎನ್ನತಕ್ಕಂಥಾದ್ದು at least ವಿವೇಚನೆ ಇಟ್ಟುಕೊಂಡು ಹೇಳಬೇಕು

ಅಧ್ಯಕ್ಷರು – ನೀವೆಲ್ಲರೂ ಹೊರಗಡೆ ಹೋದ ಮೇಲೆ ಶಂಕರಮೂರ್ತಿಯವರು ಬಂದರು ಆದರೆ, ಅಷ್ಟರೊಳಗೆ ತಾವೆಲ್ಲರೂ ಹೊರಗಡೆ ಹೋಗಿದ್ದಿರಿ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಇಲ್ಲ, ಅವರು ನಿಮಾನ್ಸ್‌ಗೆ ಹೋಗಿದ್ದರೆಂದು ನನಗೆ ಗೊತ್ತಾಯಿತು

ಶ್ರೀ ಕೆ ಎಸ್ ಈಶ್ವರಪ್ಪ – ಅಧ್ಯಕ್ಷರೆ, ಇವರಿಗೆ ಬಾಯಿಗೆ ಬಂದಂತೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ ಇವರಿಗೆ ಹುಚ್ಚು ಹಿಡಿದಿದೆ ಎಂದು ಹೇಳಬೇಕಷ್ಟೇ

(ಗೊಂದಲ)

ಶ್ರೀ ಕೆ ಎಸ್ ಈಶ್ವರಪ್ಪ – ಮೊದಲು ಇವರನ್ನು ಹುಚ್ಚಾಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿ

ಅಧ್ಯಕ್ಷರು – ಖರ್ಗೆಯವರೆ, ಅದು ಅಲ್ಲಿಗೆ ಮುಕ್ತಾಯವಾಗಿದೆ ನೀವು ಸೂಚನೆ ಕೊಡಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡೋಣ ಶಂಕರಮೂರ್ತಿಯವರು ಏನು ಹೇಳಬೇಕೋ ಹೇಳುತ್ತಾರೆ ಆದುದರಿಂದ, ಚರ್ಚೆಯಾಗಲಿ

(ಗೊಂದಲ)

ಶ್ರೀ ಕೆ ಎಸ್ ಈಶ್ವರಪ್ಪ .– ನೀವು ಬೇಕಾದಷ್ಟು ಚರ್ಚೆ ಮಾಡಿ ಅದು ಬಿಟ್ಟು ಬೇಕಾದಂತೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಇವರು ಆಡಿದ್ದೆಲ್ಲವೂ ಇಲ್ಲಿ ಆಟವಾಗುವುದಿಲ್ಲ ಇವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ

ಅಧ್ಯಕ್ಷರು – ಇಲ್ಲಿಗೆ ಆ ವಿಚಾರವನ್ನು ಮುಕ್ತಾಯ ಮಾಡಿದ್ದೇನೆ ಯಾವುದಾದರೂ ಸೂಚನೆ ಕಳುಹಿಸಿ ನಾನು ಅದಕ್ಕೆ ಒಂದು date ಕೊಡುತ್ತೇನೆ ಬಜೆಟ್ ಮೇಲೆ ಚರ್ಚೆ ಆರಂಭವಾಗಬೇಕಾಗಿತ್ತು, ಅದನ್ನು ಈಗ ಆರಂಭಿಸೋಣ ಈಗ ವಿರೋಧ ಪಕ್ಷದ ನಾಯಕರು ಪ್ರಾರಂಭಿಸಬೇಕು

(ಇ) ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಉಪಕುಲಪತಿಗಳ ವಿರುದ್ಧ ನಡೆದಂತಹ ಪ್ರತಿಭಟನೆ ಬಗ್ಗೆ –

ಶ್ರೀ ಹೆಚ್ ಎಂ ವಿಶ್ವನಾಥ್ – ಅಧ್ಯಕ್ಷರೆ, ನಾನು ಒಂದು ಪತ್ರ ಕೊಟ್ಟಿದ್ದೆ ಒಂದೇ ನಿಮಿಷದಲ್ಲಿ ನಾನು ಮಾತನಾಡುತ್ತೇನೆ

ಅಧ್ಯಕ್ಷರು – ನಾಳೆ ಅವಕಾಶ ಕೊಡೋಣ ಈಗಾಗಲೇ ತೀರ್ಮಾನವಾಗಿದೆ ಈಗ ಆರಂಭ ಮಾಡಬೇಕು ನಾನು ತಮಗೆ ನಾಳೆ ಅವಕಾಶ ಮಾಡಿಕೊಡುತ್ತೇನೆ

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) – ಮಾನ್ಯ ಅಧ್ಯಕ್ಷರೆ, ನಿನ್ನೆ ಬೆಂಗಳೂರಿನಲ್ಲಿರುವ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿಶ್ವವಿದ್ಯಾನಿಲಯದ ಒಬ್ಬ ಉಪಕುಲಪತಿಗಳ ವಿರುದ್ಧ ಪ್ರತಿಭಟನೆ ಮಾಡುವಂತಹ ಸಂದರ್ಭದಲ್ಲಿ, ಅದು ಹಿಂಸಾಚಾರಕ್ಕೆ ತಿರುಗಿ, ಲಾಠಿ ಚಾರ್ಜ್ ಆಗಿ ವಿದ್ಯಾರ್ಥಿಗಳ ಮೇಲೆ, ಬಹಳ ದೊಡ್ಡ ಹಲ್ಲೆಯಾಗಿ, 8–9 ವಿದ್ಯಾರ್ಥಿಗಳ ಬಂಧನವಾಗಿದ್ದು, ಅವರು ಜೈಲಿನಲ್ಲಿದ್ದಾರೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಶಿಕ್ಷಣ ಕ್ಷೇತ್ರ ಬಹಳ ಮಹತ್ವವಾದುದು ನಮ್ಮ ಸರ್ಕಾರದ ವತಿಯಿಂದ ಇರಬಹುದು, ಸಮಾಜದಲ್ಲಿಯೂ ಇರಬಹುದು ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿಯ ಘಟನೆಗಳು ನಡೆಯುವಂಥಾದ್ದು ಯಾವುದೇ ಸರ್ಕಾರಕ್ಕೆ ಆಗಬಹುದು, ಸಮಾಜಕ್ಕೆ ಆಗಬಹುದು, ಇದು ಶೋಭೆ ತರುವುದಿಲ್ಲವೆಂಬುದು ನಮಗೆಲ್ಲರಿಗೂ ಗೊತ್ತಿದೆ ದುರ್ದೈವವೆಂದರೆ, ಅಲ್ಲಿ VTU Vice Chancellor ಬಗ್ಗೆಯೂ ಗೊಂದಲ ಅವರು ನಿಯಮಾವಳಿ ಮೀರಿ ಮುಂದುವರೆಯುತ್ತಿರುವಂತಹ ವಾತಾವರಣ ವಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಬಗ್ಗೆಯೂ ಗೊಂದಲ ಅದೇನೇ ಇದ್ದರೂ,

ಅದರ ಬಗ್ಗೆ ನಾನು ವಿವರವಾಗಿ ಪ್ರಸ್ತಾಪಿಸುವುದಕ್ಕೆ ಬಯಸುವುದಿಲ್ಲ ಆದರೆ, ಈ ಸಂದರ್ಭದಲ್ಲಿ

ಅಧ್ಯಕ್ಷರು – ಅಂತಹವರನ್ನೆಲ್ಲಾ ಏಕೆ Vice Chancellor ಗಳನ್ನಾಗಿ ಮಾಡುತ್ತೀರಿ? ನೀವು ವಿಚಾರದ ಬುಡಕ್ಕೆ ಹೋಗಿ ಇಲ್ಲವೆಂದರೆ, ಅದು ತಿರುಗಿ ತಿರುಗಿ ನಿಮ್ಮತ್ತಲೇ ಬರುತ್ತದೆ ಬೇರೆ ಯಾರಾದರೂ, ಯೋಗ್ಯತೆಯುಳ್ಳವರನ್ನು Vice Chancellor ಗಳನ್ನಾಗಿ ಮಾಡಿ

ಶ್ರೀ ವಿಶ್ವೇಶ್ವರ ಹೆಗಡೆ – ಡಾ॥ ಪಿ ಎಸ್ ಪ್ರಭಾಕರ್‌ರವರು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಅಲ್ಲಲ್ಲಿ, ಅವರನ್ನು ಈ ಸರ್ಕಾರವೇ ಮಾಡಿದ್ದು ಆ Vice Chancellor ಬಹಳ ದೊಡ್ಡ fraud ಅವರ ಮೇಲೆ ಹಲವಾರು enquiries ನಡೆಯುತ್ತಿವೆ

ಶ್ರೀ ವಿಶ್ವೇಶ್ವರ ಹೆಗಡೆ – ಅಧ್ಯಕ್ಷರೆ, ನಾನು ಈಗ specific ಆಗಿ ಮಾತನಾಡುತ್ತಿರುವುದು, ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳ ಅವ್ಯವಹಾರ, ಭ್ರಷ್ಟಾಚಾರ ಕುರಿತಂತೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು ವಿಶೇಷವಾಗಿ ಸ್ನಾತ್ತಕೋತ್ತರ ಪರೀಕ್ಷೆಯ ಸಂದರ್ಭದಲ್ಲಿ ಅಲ್ಲಿ ಅವ್ಯವಹಾರವಾಯಿತೆಂದು ತನಿಖೆಯಿಂದ ದೃಢಪಟ್ಟು, 16 ವಿದ್ಯಾರ್ಥಿಗಳನ್ನು ಹೊರಗಡೆ ಹಾಕಿರುವುದು ನಮಗೆಲ್ಲರಿಗೂ ಗೊತ್ತಿದೆ ಅದರಲ್ಲಿ ಇದೇ ಉಪ ಕುಲಪತಿಗಳು involve ಆಗಿದ್ದಾರೆಂದು ಬೇರೆ ಬೇರೆ ತನಿಖೆಯ ವರದಿಗಳಿವೆ ಅಲ್ಲಿನ Registrar ಅವರನ್ನು suspend ಮಾಡಿದ್ದಾರೆ ಈಗ ಅವರು ಘಟಿಕೋತ್ಸವ ಸಮಾರಂಭದಲ್ಲೂ ಭಾಗವಹಿಸಬಾರದೆಂದು ವಿದ್ಯಾರ್ಥಿ ಪರಿಷತ್ತಿನ ವಿದ್ಯಾರ್ಥಿಗಳು Vice Chancellor ಎದುರುಗಡೆ ಹೇಳುವುದಕ್ಕೆ ಹೋದರು ಮೊದಲು ಏನು ಮಾಡಿದರು ಎಂದರೆ, ಶನಿವಾರದ ದಿವಸ ರಾಜ್ಯಪಾಲರ ಹತ್ತಿರ ಹೋದರು ರಾಜ್ಯಪಾಲರ ಹತ್ತಿರ ಹೋದಾಗ, ಈ ಉಪ ಕುಲಪತಿಗಳು ಗೂಂಡಾಗಳನ್ನು ಕಳುಹಿಸಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದರು ಅವತ್ತು ವಿದ್ಯಾರ್ಥಿಗಳ ಮೇಲೆ ಹಲ್ಲೆಯಾಗಿದ್ದರಿಂದ ಅವರು ಆಸ್ಪತ್ರೆ ಸೇರಿದರು ಅದಾದ ನಂತರ ಅದನ್ನು ಪ್ರತಿಭಟಿಸುವುದಕ್ಕೆ ನಿನ್ನೆ

ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಎದುರುಗಡೆ ವಿದ್ಯಾರ್ಥಿ ಪರಿಷತ್ತಿನವರೆಲ್ಲರೂ ಹೋರಾಟ ಮಾಡುವುದಕ್ಕೆ ಹೋದರೆ, ನಿನ್ನೆಯೂ ವಿದ್ಯಾರ್ಥಿಗಳ ಮೇಲೆ ಮತ್ತೆ ಹಲ್ಲೆಯಾಯಿತು ಇದೇ ಪ್ರಭಾಕರ್ ಬಗ್ಗೆ ನೀವೆಲ್ಲರೂ ಹೇಗೆ CBI ನಿಂದ ರಕ್ಷಣೆ ಪಡೆದುಕೊಳ್ಳುತ್ತೀರೆಂಬುದು ನನಗೆ ಗೊತ್ತಿದೆ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು – ಯಾರ ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ?

(ಗೊಂದಲ)

ಶ್ರೀ ಧರ್ಮಸಿಂಗ್ –`ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಲ್ಲ ಅವರು Zero Hour ನಲ್ಲಿ raise ಮಾಡಿದ್ದಾರೆ ಆದರೆ, ABVP ವ್ಯವಸ್ಥಿತವಾಗಿ ಎಲ್ಲಾ ಕಡೆಗೂ ಪ್ರತಿಭಟನೆ ಮಾಡುತ್ತಿದ್ದಾರೆ ಬಿಜಾಪುರದಲ್ಲಿ ಸೈದಾ ಅಖ್ತರ್ ಇದ್ದಾರೆ ಸೈದಾ ಅಖ್ತರ್ ಅಲ್ಪಸಂಖ್ಯಾತ ಮಹಿಳೆ ಅಲ್ಲಿ ಆಕೆಯ ಮೇಲೆ ವ್ಯವಸ್ಥಿತವಾದ ಆಪಾದನೆ ಜರುಗುತ್ತಿವೆ ಇಲ್ಲಿ ಪ್ರಭಾಕರ್‌ರವರು ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿದವರು ನಮ್ಮ ಕಾಲದಲ್ಲಿ ಅವರನ್ನು Vice Chancellor ಮಾಡಿದ್ದು ಇವತ್ತು ಎಲ್ಲಾ ಕಡೆಗೂ ABVP ಪ್ರತಿಭಟನೆ ಮಾಡಿದಂತಾಗುತ್ತದೆ

ಶ್ರೀ ವಿಶ್ವೇಶ್ವರ ಹೆಗಡೆ – ತನಿಖೆಯಾಗಿ ಅವರು ಆರೋಪಿಗಳೆಂದು ಸಾಬೀತಾಗಿದೆ

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ – ಮಾಡಿರುವುದು ತಪ್ಪು, ಭ್ರಷ್ಟಾಚಾರವನ್ನು ಭ್ರಷ್ಟಾಚಾರವೆಂದು ಹೇಳಲಿ ಜಾತಿಯನ್ನು ಬೆಂಬಲಿಸುವುದಲ್ಲ ಯಾರು ತಪ್ಪು ಮಾಡಿದ್ದಾರೋ, ತಪ್ಪು ಎಂದು ಹೇಳಲಿ ಅದಕ್ಕೆಲ್ಲಾ ಜಾತಿಯನ್ನು ಏಕೆ ತರುತ್ತೀರಿ? ಈ ಸದನದ ಮೂಲಕ ನೀವು ತಪ್ಪನ್ನು ಜಾತಿಯ ಮೂಲಕ ಮುಚ್ಚಿಹಾಕುವುದಕ್ಕೆ ಹೋಗಬೇಡಿ ಈ ರೀತಿ ಆಗಿರುವುದು ಸರಿಯಲ್ಲ ಅಧ್ಯಕ್ಷರೆ, ಈಗ ವಿದ್ಯಾರ್ಥಿಗಳೇನು ಜೈಲಿನಲ್ಲಿದ್ದಾರೆ, ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಅವರುಗಳ ಮೇಲೆ

ಕೇಸುಗಳನ್ನು ಹಾಕಿ ಮುಂದೆ ಅವರು ಸದಾ ಪೊಲೀಸ್ ಸ್ಟೇಷನ್‌ಗೆ, ಕೋರ್ಟಿಗೆ ಅಲೆದಾಡದೇ ಇರುವಂತಹ ಸ್ಥಿತಿ ತರಬೇಕು ವಿದ್ಯಾರ್ಥಿಗಳು ಈ ರೀತಿ ಯಾವುದೋ ಒಂದು ವಿಷಯಕ್ಕೆ ಹೋರಾಟ ಮಾಡಿದಂಥ ಸಂದರ್ಭದಲ್ಲಿ ಆ ವಿಚಾರಗಳನ್ನು ರಚನಾತ್ಮಕವಾಗಿ Positive ಆಗಿ ತೆಗೆದುಕೊಳ್ಳಬೇಕೆನ್ನುವಂತಹ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತಿದ್ದೇನೆ

ಶ್ರೀ ರಾಮಲಿಂಗಾರೆಡ್ಡಿ – ಅವರ್ಯಾರೂ ವಿದ್ಯಾರ್ಥಿಗಳಲ್ಲ, ಅವರೆಲ್ಲರೂ ABVP ಕಾರ್ಯಕರ್ತರು

ಶ್ರೀ ಎಂ ಪಿ ಪ್ರಕಾಶ್ – ಸನ್ಮಾನ್ಯ ಅಧ್ಯಕ್ಷರೆ, ನೇರವಾಗಿ ಪರೀಕ್ಷೆಯಲ್ಲಿ ಅಂಕಗಳನ್ನು ಕೊಡತಕ್ಕಂಥ ವಿಷಯದಲ್ಲಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವ ಸಂದರ್ಭದಲ್ಲಿ ಅನೇಕ ಅವ್ಯವಹಾರಗಳಾಗಿವೆ ಮತ್ತು ಭ್ರಷ್ಟಾಚಾರವಾಗಿವೆ ಎನ್ನತಕ್ಕಂಥ ವಿಷಯದ ಬಗ್ಗೆ ಈಗಾಗಲೇ ಕೆಲವು ತನಿಖಾ ವರದಿಗಳು ಕೂಡ ಬಂದಿವೆ ಮಾನ್ಯ ರಾಜ್ಯಪಾಲರು ಕುಲಪತಿಗಳಾಗಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು ಇದೆ ಈಗ ನಮ್ಮ ಹತ್ತಿರ ಕಡತ ಬಂದಿದೆ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಬೇಕೆನ್ನುವುದರ ಬಗ್ಗೆ ಸರ್ಕಾರ ಕೂಡಲೇ ನಿರ್ಣಯ ಮಾಡುತ್ತದೆ ಇನ್ನು ABVP ಕಾರ್ಯಕರ್ತರು ಚಳವಳಿ ಮಾಡಿರತಕ್ಕಂಥಾದ್ದು, ಧರಣಿ ಮಾಡತಕ್ಕಂಥ ವಿಷಯದಲ್ಲಿ ಅವರೇನಾದರೂ ಅವಸರಪಟ್ಟಿದ್ದರೆ, ಅವರನ್ನು ಈಗ ಬಿಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇರುವುದಿಲ್ಲ ನಿಯಮಾವಳಿ ಪ್ರಕಾರ ಅವರು ಜಾಮೀನಿನ ಮೇಲೆ ಹೊರಗೆ ಬರಬೇಕಾಗುತ್ತದೆ ನಂತರ, ಯಾರ ಮೇಲಾದರೂ ಸತ್ಯಾಸತ್ಯತೆಯ ವಿಚಾರಗಳು ಬಂದಾಗ ಪ್ರಥಮ ವರ್ತಮಾನ ಪತ್ರಿಕೆ ಬೇರೆ, ಅವರ ಮೇಲೆ ಆರೋಪ ಪಟ್ಟಿ ಹಾಕತಕ್ಕಂಥಾದ್ದು ಬೇರೆ, ಆ ಸಂದರ್ಭದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ ಒಟ್ಟಿನಲ್ಲಿ ಕುಲಪತಿಗಳಿಂದ ಅನೇಕ ಉನ್ನತಾಧಿಕಾರಿಗಳವರೆಗೂ ಕೂಡ ಪರೀಕ್ಷೆಯಲ್ಲಿ ಮಾಡಿರತಕ್ಕಂಥ ಅವ್ಯವಹಾರಗಳ ಬಗ್ಗೆ ನಡೆದ ನಿಷ್ಪಕ್ಷಪಾತವಾದ ಕೆಲವು ತನಿಖೆಯಲ್ಲಿ ನನಗೆ ವರದಿ ಬಂದಿದೆ ಆದರೆ, ನಾನಿನ್ನೂ ಕಡತವನ್ನು ಪರಿಶೀಲಿಸುವ ಹಂತದಲ್ಲಿದ್ದೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಯಾರೇ ಭ್ರಷ್ಟ Vice Chancellor ಇರಲಿ, ಅಧಿಕಾರಿ ಇರಲಿ, ನೀವು ನಿರ್ದಾಕ್ಷಿಣ್ಯವಾಗಿ action ತೆಗೆದುಕೊಳ್ಳಿ ಇಲ್ಲಿ ಜಾತಿ ಪ್ರಶ್ನೆ ಇಲ್ಲ

(ಗೊಂದಲ)

ಶ್ರೀ ಸಿ ಟಿ ರವಿ – ಇವತ್ತು ಮಾತನಾಡಿರೆಂದು ಉಪಾಧ್ಯಕ್ಷರೇ ನಿನ್ನೆ ಹೇಳಿದ್ದರು,

ಶ್ರೀ ಎ ಎಸ್ ಬಸವರಾಜು – ಅಧ್ಯಕ್ಷರೆ, ಅರಸೀಕರೆ ಕಗ್ಗೊಲೆಯಾಗಿದೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ್ ಖರ್ಗೆ – ಇಲ್ಲಿ ಯಾರು ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಕೊಡಿ ಅವರು ಭ್ರಷ್ಟರಾಗಿದ್ದರೆ, dismiss ಮಾಡಿ, ಮನೆಗೆ ಕಳಿಸಿ, ಜೈಲಿಗೆ ಹಾಕಿ ಅದಕ್ಕೆ ಯಾರೂ ಅಡ್ಡ ಬರುವುದಿಲ್ಲ ಆದರೆ, ABVP ಯವರು ವಿಶಿಷ್ಟವಾಗಿ ವಿಜಾಪುರ ಮತ್ತು ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯಕ್ಕೆ, ಇಂಥಾದ್ದಕ್ಕೆ target ಮಾಡಿ ಏನು ಮಾಡುತ್ತಿದ್ದಾರೆ, ಇದರ ಕಾರಣವನ್ನು ಕೂಡ ತಾವು ಹುಡುಕಬೇಕು ಅಂದರೆ, at least ಮುಂದೆ ನ್ಯಾಯವಾಗಿ ಅನೇಕ ವಿದ್ಯಾರ್ಥಿಗಳು agitate ಮಾಡುತ್ತಾರೆ ಅವರ ಮೇಲೆ ಆಪಾದನೆ ಬರಬಾರದು ಇವರು ಯಾವ ದೃಷ್ಟಿಯಿಂದ ಮಾಡುತ್ತಿದ್ದಾರೋ, ಅದನ್ನೂ ಬಹಿರಂಗಪಡಿಸಿ, ಅಥವಾ ಅವರು ಮಾಡಿದಂತಹ ಅನ್ಯಾಯವನ್ನು ಕೂಡ ಹೊರಗೆ ಹಾಕಿ ಜೈಲಿಗೆ ಕಳುಹಿಸಿ

ಶ್ರೀ ಎಂ ಪಿ ಪ್ರಕಾಶ್ – ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಈ ವಿದ್ಯಾರ್ಥಿ ಷರತ್ತುಗಳನ್ನು ಮಾಡಿ ಇಂಥ ಆಪಾದನೆಗಳನ್ನು ನಾವು ಅವರ ಮೇಲೆ ಮಾಡುವುದು, NSUI ಅವರು ನಮ್ಮ ಮೇಲೆ ಮಾಡತಕ್ಕದ್ದು, SFI ಮೇಲೆ ಇನ್ಯಾರೋ ಆಪಾದನೆ ಮಾಡುವುದು, ನಮ್ಮಲ್ಲಿ ವಿದ್ಯಾರ್ಥಿ ಪರಿಷತ್ತು ಎಂದು ಇಟ್ಟುಕೊಂಡಿದ್ದೇವೆ, ಅದರ ಮೇಲೆ ಮಾಡುವುದು, ಈ ರೀತಿಯಾಗುತ್ತಿದೆ ರಾಜಕೀಯ ಪಕ್ಷಗಳ frontal organization ಆಗಿ ಪರಿವರ್ತನೆಗೊಂಡಾಗ ಇಂತಹ

ಆಪಾದನೆಗಳಾಗುತ್ತದೆ ಯಾರಾದರೂ ಕೂಡ ವಿದ್ಯಾರ್ಥಿಗಳಾದಂತಹವರು ಎಲ್ಲಿ ಇಂಥ ಅವ್ಯವಹಾರಗಳಾಗಿರುತ್ತವೆ ಅಲ್ಲಿ ಅವರ ಜಾತಿ, ತತ್ವ, ನಂಬಿಕೆಗಳನ್ನು ಮುಂದಿಟ್ಟುಕೊಳ್ಳದೇ ಆ ಅವ್ಯವಹಾರಗಳ ವಿರುದ್ಧ ನಿಷ್ಪಕ್ಷಪಾತವಾಗಿ ಎಲ್ಲರ ವಿರುದ್ಧವೂ ಕ್ರಮ ಜರುಗಿಸಬೇಕೆಂಬ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಒಪ್ಪುತ್ತೇನೆ ಆದರೆ, ಇದು ಕೇವಲ ಏ ಬಿ ವಿ ಪಿ ಗೆ ಮಾತ್ರ ಸೀಮಿತವಾಗಿಲ್ಲ ಅದು ಎಲ್ಲಾ ಪಕ್ಷಗಳ frontal organization ಗೂ ಸೀಮಿತವಾಗುತ್ತದೆ

(ಗೊಂದಲ)

ಅಧ್ಯಕ್ಷರು – ದಯಮಾಡಿ ಎಲ್ಲರೂ ಸಹಕರಿಸಬೇಕು

ಶ್ರೀ ಸಿ ಟಿ ರವಿ – ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಕೇಳಿದಾಗ ನಾಳೆ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ

ಅಧ್ಯಕ್ಷರು – ಈಗ ಬಜೆಟ್ ಮೇಲೆ ಚರ್ಚೆ ಆರಂಭವಾಗಲಿ ನಾಳೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ ದಯಮಾಡಿ ನೀವು ಕುಳಿತುಕೊಳ್ಳಿ

(ಈ) ಅರಸೀಕೆರೆ ತಾಲ್ಲೂಕಿನಲ್ಲಿ ಮಾಲೇಕಲ್ ತಿರುಪತಿಯಲ್ಲಿ ಆದ ಕೊಲೆಯ ಬಗ್ಗೆ

ಶ್ರೀ ಎ ಎಸ್ ಬಸವರಾಜ್ (ಅರಸೀಕೆರೆ) – ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿನಲ್ಲಿ ಸುಮಾರು 2 ಕಿಲೋಮೀಟರ್ ಹತ್ತಿರದಲ್ಲಿ ಮಾಲೇಕಲ್ ತಿರುಪತಿ ಇದೆ ಅಲ್ಲಿ ಶನಿವಾರದ ದಿವಸ ಬೆಳಗಿನಜಾವ ಕಗ್ಗೊಲೆಯಾಗಿದೆ ಹುಂಡಿಯನ್ನು ಒಡೆಯಲು ಬಂದಿರತಕ್ಕ ವ್ಯಕ್ತಿಗಳು ಬೈರಪ್ಪ ಮತ್ತು ಗಂಗಣ್ಣ ಎಂಬುವರಿಬ್ಬರನ್ನೂ ಕೊಲೆ ಮಾಡಿ ಹುಂಡಿಯನ್ನು ಒಡೆಯಲು ಆಗದೆಯೇ ಹೊರಟುಹೋಗಿದ್ದಾರೆ ಆವತ್ತಿನ ರಾತ್ರಿ ಕ್ರಿಕೆಟ್ ಮ್ಯಾಚ್ ಇತ್ತು ರಾತ್ರಿ 3 ಗಂಟೆಯವರೆಗೆ ಎಲ್ಲರೂ ಬಾಗಿಲು ಹಾಕಿಕೊಂಡು ಕ್ರಿಕೆಟ್ ನೋಡುತ್ತಿರುವ ಸಂದರ್ಭದಲ್ಲಿ ಅವರು ದೇವಸ್ಥಾನಕ್ಕೆ ನುಗ್ಗಿ ಆ ಕಗ್ಗೊಲೆಯನ್ನು ಮಾಡಿ ಅಲ್ಲಿದ್ದ ಹುಂಡಿಯನ್ನು ಒಡೆಯಲು ಆಗದೆಯೇ ವಾಪಸ್ ಹೋಗಿದ್ದಾರೆ ಆದ್ದರಿಂದ ಅಲ್ಲಿಗೆ ಇವತ್ತು ಒಂದು ಪೊಲೀಸ್ ಔಟ್‌ಪೋಸ್ಟ್‌ನ್ನು ಮಾಡಿಕೊಡಬೇಕು ಇವತ್ತಿನ ದಿವಸ ಕಾವಲುಗಾರರು ಯಾರೂ ಬರುವುದಿಲ್ಲ ಅಲ್ಲಿಗೆ ಪೊಲೀಸ್‌ನವರನ್ನು ಹಾಕಿಕೊಡಬೇಕು ಮತ್ತು ಮೃತರ

ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಸರ್ಕಾರದಿಂದ ಕೊಡಬೇಕೆಂದು ಮನವಿ ಮಾಡಿದ್ದೇನೆ ನಿನ್ನೆ ದಿವಸ ಮುಜರಾಯಿ ಇಲಾಖೆಯ ಸಚಿವರಾದ ನಾಗರಾಜ್ ಶೆಟ್ಟಿಯವರು ಬಂದಿದ್ದರು ಅವರು 50 ಸಾವಿರ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಅಧ್ಯಕ್ಷರೆ, ಅಲ್ಲಿ ಔಟ್ ಪೋಸ್ಟ್ ಪೊಲೀಸ್ ರಾಣೆ ಮಾಡಬೇಕೆಂದು ಪ್ರಸ್ತಾವನೆ ಮಾಡಿದ್ದಾರೆ ಈ ವರ್ಷದ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವಿದೆ ಎಂಬುದು ಪ್ರಾಯಶಃ ಏಪ್ರಿಲ್ ಅಥವಾ ಮೇ ನಲ್ಲಿ ಪೂರ್ಣ ವಿವರ ಸಿಗುತ್ತದೆ ಅದಾದ ಮೇಲೆ ಸಹಾನುಭೂತಿಯಿಂದ ಅವರ ಬೇಡಿಕೆಯನ್ನು ನೆರವೇರಿಸಲು ಪ್ರಯತ್ನ ಮಾಡುತ್ತೇವೆ ಮತ್ತು ಮೃತರ ಕುಟುಂಬದವರಿಗೆ ಪರಿಹಾರವಾಗಿ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ ಅದಕ್ಕಾಗಿ ಧಾರ್ಮಿಕದತ್ತಿ ಎಂಬ ಇಲಾಖೆ ಇರುವುದರಿಂದ ಈ ವಿಚಾರವನ್ನು ಧಾರ್ಮಿಕದತ್ತಿ ಇಲಾಖೆಯ ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಪರಿಹಾರವನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ

ಅಧ್ಯಕ್ಷರು – ಈಗ ಬಜೆಟ್ ಮೇಲೆ ಚರ್ಚೆ ಮಾನ್ಯ ವಿರೋಧ ಪಕ್ಷದ ನಾಯಕರು

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) – ನಾವು ಯಾರ ಮುಂದೆ ಹೇಳಬೇಕು? ಯಾರು ಬಜೆಟ್ ಮಂಡನೆ ಮಾಡಿದ್ದಾರೆ ಅಂದರೆ ಉಪಮುಖ್ಯಮಂತ್ರಿಯವರಿಲ್ಲ, ಮುಖ್ಯಮಂತ್ರಿಯವರಿಲ್ಲ ಇದೇನಿದು?

ಅಧ್ಯಕ್ಷರು – ದಯಮಾಡಿ, ಮೇಲ್ಮನೆಯಲ್ಲಿ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ನಲ್ಲಿ ಚರ್ಚೆಯಾಗಿದೆ ಉಪಮುಖ್ಯಮಂತ್ರಿಯವರು 5 ನಿಮಿಷದಲ್ಲಿ ಬರುತ್ತಾರೆ

ಶ್ರೀ ಎನ್. ಧರ್ಮಸಿಂಗ್ – ಮೊದಲೇ ಶುರುಮಾಡಿದರೆ ಹೇಗೆ? 5 ನಿಮಿಷದಲ್ಲಿ ಬಾರದಿದ್ದರೆ? ಅವರು ಎಲ್ಲಿದ್ದಾರೆ?

ಅಧ್ಯಕ್ಷರು – ಪಾರ್ಲಿಮೆಂಟರಿ ಸಚಿವರಿದ್ದಾರೆ

ಶ್ರೀ ಎನ್ ಧರ್ಮಸಿಂಗ್ – ಅವರು ಬರಲೇ ಬೇಕು ಅವರು ಬರಲಿ

ಅಧ್ಯಕ್ಷರು – 5 ನಿಮಿಷದಲ್ಲಿ ಬರುತ್ತಾರೆ 5 ನಿಮಿಷದಲ್ಲಿ ಕರೆಸುತ್ತೇನೆ

ಶ್ರೀ ಎನ್ ಧರ್ಮಸಿಂಗ್ – 16ನೇ ತಾರೀಖು ಅವರು ಬಜೆಟ್ ಮಂಡನೆ ಮಾಡಿದರು

ಅಧ್ಯಕ್ಷರು – 5 ನಿಮಿಷದಲ್ಲಿ ಬರುತ್ತಾರೆ ದಯಮಾಡಿ ಆರಂಭ ಮಾಡಿ

ಶ್ರೀ ಕೆ ಶ್ರೀನಿವಾಸಗೌಡ – Finance Minister, Finance Secretary ಇಲ್ಲ ಆದ್ದರಿಂದ ಅವರು ಹೇಗೆ ಮಾತನಾಡುತ್ತಾರೆ?

ಶ್ರೀ ಎಂ ಪಿ ಪ್ರಕಾಶ್ – Finance Secretary ಕಾಂಬ್ಳೆಯವರಿದ್ದಾರೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ – ಮಾನ್ಯ ಪ್ರಕಾಶರವರೇ, ಬಾಕಿ ಸಮಯದಲ್ಲೇ ಯಡಿಯೂರಪ್ಪನವರು ಮುಖ್ಯಮಂತ್ರಿಯವರ ಮಾತನ್ನೇ ಕೇಳುವುದಿಲ್ಲ! ಈಗ Parliamentary Ministerರವರ ಮಾತನ್ನು ಕೇಳುತ್ತಾರೆಯೇ? ಪಾಪ ಅವರು ಬರೆದುಕೊಂಡು ಅವರಿಗೆ ಹೇಳಿದರೂ ಕೇಳುವುದಿಲ್ಲ ಆದ್ದರಿಂದ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಕನಿಷ್ಟ ಪಕ್ಷ ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರು ಇರಬೇಕು ನಾವು ಈ ರೀತಿ ಎಂದೂ ನೋಡಿಲ್ಲ ಈ ರೀತಿ ಈ ಹೌಸ್‌ನಲ್ಲಿ ಎಂದೂ ಆಗಿಲ್ಲ

ಶ್ರೀ ಎಂ ಪಿ ಪ್ರಕಾಶ್ :– ವಿಧಾನ ಪರಿಷತ್ತಿನ ಸಭಾನಾಯಕರಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೆಲಸ ಮಾಡಿದ್ದಾರೆ (ಗೊಂದಲ) ಪೂರಕ ಅಂದಾಜುಗಳ ವಿಚಾರದಲ್ಲಿ ಪರಿಷತ್ತಿನಲ್ಲಿ ಚರ್ಚೆ ನಡೆದಿದೆ (ಗೊಂದಲ) ಅಲ್ಲಿಂದ ಇಲ್ಲಗೆ ನೇರವಾಗಿ ಬರುತ್ತಾರೆ ತಾವು ಹೇಳಿದ ಮಾತನ್ನು ಒಪ್ಪುತ್ತೇನೆ ವಿರೋಧ ಪಕ್ಷದ ನಾಯಕರು, ಹಿರಿಯ ಸದಸ್ಯರು ಮಾತನಾಡುವಾಗ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇರಬೇಕಾಗುತ್ತದೆ ಮುಖ್ಯಮಂತ್ರಿಗಳು ಸಭಾಧ್ಯಕ್ಷರಿಗೆ ಈ ಬಗ್ಗೆ ಪತ್ರ ಕೊಟ್ಟಿದ್ದಾರೆ

ಅಧ್ಯಕ್ಷರು – ಉಪ ಮುಖ್ಯಮಂತ್ರಿಗಳು ಬರುವವರೆಗೆ ನಿಮ್ಮದೇನಿದೆ ಕೇಳಿ ಅದೇನು ಪ್ರಸ್ತಾಪ ಮಾಡಿಬಿಡಿ ಅಷ್ಟರೊಳಗೆ ಅವರು ಬರುತ್ತಾರೆ

(ಊ) ಹಂಪಿಯಲ್ಲಿ ನಡೆಯುತ್ತಿರುವ ಭೂಗತ ಚಟುವಟಿಕೆಗಳ ಬಗ್ಗೆ

ಶ್ರೀ ಸಿ ಟಿ ರವಿ (ಚಿಕ್ಕಮಗಳೂರು) – ವಿಶ್ವ ಪರಂಪರೆಯ ಪಟ್ಟಿಯಲ್ಲಿರುವ ಹಂಪಿಯಲ್ಲಿ ನಡೆಯುತ್ತಿರತಕ್ಕಂಥ ಭೂಗತ ಚಟುವಟಿಕೆಗಳು, ಅವ್ಯವಹಾರ, ಮಾದಕ ವಸ್ತುಗಳ ಮಾರಾಟ, ಸಾಗಾಟ ಇತ್ಯಾದಿಗಳ ಬಗ್ಗೆ ನಿನ್ನೆ ಮತ್ತು ಇವತ್ತಿನ ಮುದ್ರಣದಲ್ಲಿ ವಿಜಯಕರ್ನಾಟಕ ಪತ್ರಿಕೆಯು ಒಂದು investigation report ಮಾಡಿದೆ ಈ investigation report ನಮ್ಮನ್ನು ಭಯಭೀತರನ್ನಾಗಿಸುತ್ತದೆ ಮತ್ತು ಒಂದು ಸಂಸ್ಕೃತಿಯ, ಪರಂಪರೆಯ ಹಿನ್ನೆಲೆಯ ತಾಣವಾಗಿರತಕ್ಕಂಥ ಹಂಪಿಯಲ್ಲಿ ನಡೆಯುತ್ತಿರತಕ್ಕಂಥದ್ದು, ಅಲ್ಲಿ ಅಕ್ರಮವಾಗಿ ತಲೆ ಎತ್ತಿರುವಂತಹ ಹೋಟೆಲ್‌ಗಳು, ಅಲ್ಲಿ ಎಲ್ಲ ರೀತಿಯ ಅನೈತಿಕ ಚಟುವಟಿಕೆಗಳು ನಡೆಯುತ್ತಿರತಕ್ಕಂಥದ್ದು, ವಿದೇಶೀಯರ ಮೋಜಿನ ಹೆಸರಿನಲ್ಲಿ ನಡೆಯುತ್ತಿರತಕ್ಕಂತಹ ಅನೈತಿಕ ಚಟುವಟಿಕೆಗಳು ಅವ್ಯಾಹತವಾಗಿ, ಬಹಿರಂಗವಾಗಿ ನಡೆಯುತ್ತಿರತಕ್ಕಂಥ ಮಾದಕ ವಸ್ತುಗಳ ದಂಧೆ ಅದೂ ಸ್ವತಃ ಗೃಹ ಸಚಿವರೇ ಉಸ್ತುವಾರಿ ಸಚಿವರಾಗಿರುವಂಥ ಜಿಲ್ಲೆಯೊಳಗಡೆ, ಅವರ ಮೂಗಿನ ಅಡಿಯಲ್ಲಿ ನಡೆಯುತ್ತಿರತಕ್ಕಂಥ ಈ ರೀತಿಯ ಚಟುವಟಿಕೆಗಳು ನಮ್ಮ ರಾಜ್ಯವನ್ನು ಅಪಾಯಕ್ಕೆ ದೂಡಿದೆ ಮತ್ತು ಐತಿಹಾಸಿಕ ಪರಂಪರೆ ಹೊಂದಿರುವ ಹಂಪಿಯೂ ಕೂಡ ಪ್ರತಿನಿತ್ಯ ಅತಿಕ್ರಮಣಕ್ಕೆ ಒಳಗಾಗುತ್ತಿರತಕ್ಕಂಥದ್ದರ ಬಗ್ಗೆ ಒಂದು ವಿಸ್ತೃತವಾದಂಥ ಲೇಖನ ಇದೆ ಈ ಲೇಖನವನ್ನು ಗೃಹ ಸಚಿವರು ಗಮನಿಸಿದ್ದಾರೆಂದು ನಾನು ಭಾವಿಸಿದ್ದೇನೆ ಹಾಗಾಗಿ, ಈ ಬಗ್ಗೆ ಸರ್ಕಾರ ಯಾವ ರೀತಿ ಇದನ್ನು ತಡೆಯಲಿಕ್ಕೆ ಏನು ಕ್ರಮ ಕೈಗೊಂಡಿದೆ? ಮತ್ತು ಅಲ್ಲಿರತಕ್ಕಂಥ ಅತಿಕ್ರಮಣಗಳನ್ನು ತಡೆಯಲಿಕ್ಕೆ, ಅಕ್ರಮವಾಗಿ ತಲೆ ಎತ್ತಿರತಕ್ಕಂಥ ಹೋಟೆಲ್‌ಗಳನ್ನು ನಿಲ್ಲಿಸಲಿಕ್ಕೆ, ಮೋಜಿನ ಹೆಸರಿನಲ್ಲಿ ನಡೆಯುತ್ತಿರತಕ್ಕಂಥ ಅಶ್ಲೀಲತೆಗಳನ್ನು ತಡೆಗಟ್ಟಲಿಕ್ಕೆ, ಮಾದಕ ವಸ್ತು ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲಿಕ್ಕೆ ಯಾವ ರೀತಿಯ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) – ಹಂಪಿಯ ಪರಿಸರದಲ್ಲಿ ಈ ತರಹದ ಮಾದಕ ದ್ರವ್ಯಗಳು, ವಿಲಾಸಿ

ಜೀವನ ಮಾಡುವಂಥ ವಿದೇಶೀಯರು, ಅವರಿಂದ ದಾರಿ ತಪ್ಪಿರುವ ನಮ್ಮ ಯುವಕರು, ಇವರೆಲ್ಲರೂ ಕೂಡ ಗೋವಾ, ಗೋಕರ್ಣ ಮತ್ತು ಹಂಪಿಗೆ ಬರುತ್ತಾರೆ ಈ ವಿಚಾರಗಳ ಬಗ್ಗೆ ಬಹಳ ವರ್ಷಗಳಿಂದ ಹೋರಾಟ ನಡೆಯುತ್ತಿದೆ ಆದರೆ, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲವೇ ಕೆಲವು ಹೋಟೆಲ್‌ಗಳನ್ನು ಮಾತ್ರ ಕೆಡವಿದ್ದಾರೆ ಉಳಿದಿರತಕ್ಕಂಥದ್ದು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕಬ್ಬಿನ ಗದ್ದೆಗಳಲ್ಲಿ resortಗಳನ್ನು ಮಾಡಿಕೊಂಡಿದ್ದಾರೆ ಅವುಗಳನ್ನು ತೆಗೆಯಲಿಕ್ಕಾಗಿ ಕೊಪ್ಪಳದ ಜಿಲ್ಲಾಧಿಕಾರಿಗಳಿಗೆ ಮತ್ತು ವರಿಷ್ಠ ಪೊಲೀಸ್ ಅಧಿಕಾರಿಗಳಿಗೆ ನಾವು ಸೂಚನೆ ಕೊಟ್ಟಿದ್ದೇವೆ ಈಗ ಅವರೆಲ್ಲರ ಮೇಲೆ ನಾವು ಕ್ರಮ ಕೈಗೊಂಡಿದ್ದಾರೆ ಕೆಲವನ್ನು ಈಗ ಧ್ವಂಸಗೊಳಿಸುತ್ತಿದ್ದಾರೆ ಇದರ ಜೊತೆಗೆ, ಮುಖ ಮಂಟಪದ ಮುಂದೆ ಇರತಕ್ಕಂಥ ರಥ ಬೀದಿಯಲ್ಲಿ ಆ ಎಲ್ಲ ಅಂಗಡಿ ಮುಂಗಟ್ಟುಗಳನ್ನು ತೆಗೆಸುವಂಥ ಕೆಲಸವನ್ನು ಕೂಡ ಈಗ ಮಾಡುತ್ತಿದ್ದಾರೆ ಇದರ ಜೊತೆಗೆ, ಅಲ್ಲಿ ಮೊದಲಿನಿಂದಲೂ ಕೂಡ ಇಂಥ ವಿಧ್ವಂಸಕ ಕೃತ್ಯಗಳಿಗೆ ಪ್ರಚೋದನೆ ಕೊಡತಕ್ಕಂಥ ರೀತಿಯ ಸಂಶಯಾಸ್ಪದ ವ್ಯಕ್ತಿಗಳು ಕಾಶ್ಮೀರ ಮೂಲದವರು ಅಂಗಡಿಯನ್ನು ತೆರೆದಿದ್ದರು ಎಲ್ಲ ಕಾಶ್ಮೀರ ಮೂಲದವರೂ ಈ ತರಹ ತಪ್ಪು ಮಾಡಿದ್ದಾರೆಂದು ಹೇಳುವುದಕ್ಕೆ ನಾನು ತಯಾರಿಲ್ಲ ಒಬ್ಬ ಭಯೋತ್ಪಾದಕ ಆ ಮೂಲದಿಂದ ಬಂದಂಥವನು ಹಂಪಿಯ ಪರಿಸರದಲ್ಲೇ ಇದ್ದ ಆತ ಕೊಟ್ಟಂಥ ಮಾಹಿತಿಯ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಿಕ್ಕೆ ಪ್ರಾರಂಭ ಮಾಡಿದ ಮೇಲೆ ಸ್ವಇಚ್ಛೆಯಿಂದಲೇ ಅಲ್ಲಿಂದ ಬಹಳ ಜನ ವಾಪಸ್ ಹೋಗುತ್ತಿದ್ದಾರೆ ಶುಚಿತ್ವವನ್ನು ಕಾಪಾಡದಂಥ ಏನು ಹೋಟೆಲ್‌ಗಳಿವೆ, ಅವುಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಅಲ್ಲಿಯ ಗ್ರಾಮ ಪಂಚಾಯತಿಯವರಿಗೆ ಕೂಡ ತಿಳಿಸಿದ್ದೇವೆ Notice ಅನ್ನು ಕೂಡ ಕೊಟ್ಟಿದ್ದಾರೆ ಹಂಪಿ ಅಭಿವೃದ್ಧಿ ಪ್ರಾಧಿಕಾರದವರು ಅವುಗಳನ್ನು ಮುಚ್ಚುವ ಪ್ರಯತ್ನ ಮಾಡಿದಾಗ ಕೆಲವರು High Court ಗೆ ಹೋಗಿ stay order ತಂದಿದ್ದಾರೆ ಆದರೆ, ತಾವು ಹೇಳಿದಂತೆ, ಕೆಲವು ಅಹಿತಕರ ಘಟನೆಗಳ ಪೈಕಿ ಅಲ್ಲಿ ದರ್ಗಾ ಮಾಡಿದ್ದಾರೆ ಮತ್ತೊಂದು ಎಂದು ಆ ಲೇಖನದಲ್ಲಿ ಬಂದಿರುವುದನ್ನು ಹೇಳಿದ್ದೀರಿ ಆದರೆ, ಅವರಿಗೆ ಬಹುತೇಕವಾಗಿ ಕೆಲವರಿಗೆ ತಮ್ಮದೇ ಆದಂಥ ಅಭಿಪ್ರಾಯಗಳಿರಬಹುದು ಕಟಿಗೆ

ಅಹಮದ್‌ಖಾನ್ ಎನ್ನುವವರು ಒಬ್ಬ ದಂಡನಾಯಕರಾಗಿದ್ದರು ಬಹಮನಿ ಅರಸರ ಕಡೆಗೆ ಎಷ್ಟು ಮಂದಿ ಮುಸ್ಲಿಂರಿದ್ದರೋ ಅಷ್ಟೇ ಪ್ರಮಾಣದಲ್ಲಯೂ ಕೂಡ ವಿಜಯನಗರದ ಅರಸರ ಕಾಲದಲ್ಲಿ ಮುಸ್ಲಿಂ ಯೋಧರೂ ಕೂಡ ಇದ್ದರು ಸೂರ್ಯ ಚಂದ್ರರು ಇರುವವರೆಗೂ ನಮ್ಮ ರಾಯರಿಗೆ ಒಳ್ಳೆಯದಾಗಲಿ ಎಂದು ಛತ್ರ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ನಾನು ಮಾಡಿದ್ದೇನೆಂದು ಕಟಿಗೆ ಅಹಮದ್‌ಖಾನ್‌ರವರು ಕಟ್ಟಿಸಿರತಕ್ಕಂಥ ಛತ್ರವಿದೆ, ಬಾವಿ ಇದೆ, ಶಿಲಾ ಶಾಸನಗಳೂ ಕೂಡ ಇವೆ ಆದ್ದರಿಂದ ಬಹಳ ಸೌಹಾರ್ದಯುತವಾದಂಥ ವಾತಾವರಣ ಅಲ್ಲಿತ್ತು ಇತ್ತೀಚೆಗೆ ಬಂದಿರತಕ್ಕಂಥ ಅನೇಕ ವರದಿಗಳ ಪ್ರಕಾರ ಮುಸ್ಲಿಮರು ಬಂದ ಮೇಲೆ, ಅಲ್ಲಿ ಅವರು ಬಂದು ಧ್ವಂಸ ಮಾಡುವುದಕ್ಕಿಂತ ಪೂರ್ವದಲ್ಲೇ ನಮ್ಮವರು ಯಾವ ರೀತಿ ಧ್ವಂಸ ಮಾಡಿದರು, ಸೋತ ಸುದ್ದಿ ಬಂದ ತಕ್ಷಣವೇ ಏನೆಲ್ಲಾ ಆಯಿತು, ಎಷ್ಟು ಪ್ರಮಾಣದಲ್ಲಿರತಕ್ಕಂಥ ಸಂಪತ್ತನ್ನು ಚಂದ್ರಗಿರಿಗೆ ಮತ್ತು ಪೆನುಗೊಂಡಕ್ಕ ತೆಗೆದುಕೊಂಡು ಹೋದರೆನ್ನತಕ್ಕಂಥದ್ದು ಈಗ ಪುರಾವೆಗಳ ಮೂಲಕವಾಗಿ ಹೊರಗಡೆಗೆ ಬರುತ್ತಿದೆ ಆದ್ದರಿಂದ ಒಂದೇ ದೃಷ್ಟಿಕೋನದಿಂದ ಅದನ್ನು ನೋಡತಕ್ಕದ್ದಲ್ಲ ಈಗಾಗಲೇ ಅಲ್ಲಿ Police Station ಅನ್ನು ಸ್ಥಾಪನೆ ಮಾಡಿದ್ದೇವೆ ಇಲ್ಲಿಯವರೆಗೂ ಪುರಾತತ್ವ ಇಲಾಖೆಯವರು ಅಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡಲು ಅವಕಾಶ ಕೊಡುತ್ತಿರಲಿಲ್ಲ ಆದರೆ ಅಲ್ಲಿ Police Station ಮಾಡಲಿಕ್ಕೆ ಅವರು ಅವಕಾಶ ಮಾಡಿಕೊಟ್ಟಿದ್ದಾರೆ ಈಗಾಗಲೇ ಅಲ್ಲಿಗೆ Police Station ಮಂಜೂರಾತಿಯಾಗಿರುವುದರಿಂದ, ಅದನ್ನು ಅಲ್ಲಿ ಸ್ಥಾಪನೆ ಮಾಡುತ್ತೇವೆ ಅಬಕಾರಿ ಇಲಾಖೆಯವರಿಂದ ಈಗಾಗಲೇ ಅಲ್ಲಿ ಬಹಳ ಸಲ ಅವರ ಮೇಲೆ ನಾವು ರೈಡ್‌ಗಳನ್ನು ಮಾಡಿಸಿದ್ದೇವೆ ಅಲ್ಲಿ ಯಾವುದೇ ಸಾರಾಯಿ ಅಥವಾ ಮದ್ಯದ ಅಂಗಡಿಗಳನ್ನು ತೆರೆಯಲು ಲೈಸೆನ್ಸ್ ನೀಡಿಲ್ಲ ಅದಕ್ಕೆ ಅಲ್ಲಿ ಅವಕಾಶ ಮಾಡಿಕೊಟ್ಟಿಲ್ಲ ಕಮಲಾಪುರ ಮೊದಲಾದ ನಗರ ಪ್ರದೇಶಗಳಲ್ಲಿ ಅಥವಾ ಪುರಸಭೆ ವ್ಯಾಪ್ತಿಯಲ್ಲಿ ಹೋಗಿ ಬರಬಹುದು ಆ ಕಾರಣಕ್ಕಾಗಿ, ಆ ಲೇಖನದಲ್ಲಿ ಕೆಲವು ಒಳ್ಳೆಯ ಸಂಗತಿಗಳಿವೆ, ಕೆಲವು ತಪ್ಪಾಗಿರತಕ್ಕದ್ದು ಇವೆ ಅಲ್ಲಿಯ ಸ್ಥಳೀಯ ಸ್ವಾಮಿಗಳೆಲ್ಲರೂ ಕಲೆತು, ಸುಮಾರು ನೂರಕ್ಕಿಂತ ಹೆಚ್ಚು ಸ್ವಾಮಿಗಳು

ಮತ್ತು ಸಾರ್ವಜನಿಕರು ಕಲೆತು, ಹಂಪಿಯಿಂದ ಹೊಸಪೇಟೆಯವರೆಗೂ ಪಾದಯಾತ್ರೆಯನ್ನು ಮಾಡಿದರು ಈಗ ಚರಸ್ ಇತ್ಯಾದಿಗಳ ವಿಚಾರದಲ್ಲಿ ಬಹಳ ಬಿಗಿಯಾದ ಕ್ರಮವನ್ನು ಕೊಪ್ಪಳ ಮತು ಬಳ್ಳಾರಿ ಜಿಲ್ಲಾಧಿಕಾರಿಗಳು ಕೈಗೊಳ್ಳುತ್ತಿದ್ದಾರೆ ಪುರಾತತ್ವ ಇಲಾಖೆಯಿಂದಲೂ ಸಹ ಕೆಲವೊಂದು ಸಲ ಇಂತಹ ಘಟನೆಗಳು ಆಗಬಾರದೆಂದು ಬಹಳ ಸ್ಪಷ್ಟವಾಗಿರತಕ್ಕಂಥ ಉದ್ದೇಶವನ್ನು ಹೊಂದಿದ್ದಾರೆ ಈಗ ಉದಾಹರಣೆಗೆ ಹೇಳುವುದಾದರೆ, ಹಜಾರ್ ರಾಮಸ್ವಾಮಿ ದೇವಾಲಯದಲ್ಲಿ ಕೆಲವು ಮುಸಲ್ಮಾನರು ನಮಾಜನ್ನು ಮಾಡಿದರು ಎಂದು ಪತ್ರಿಕೆಯೊಂದರಲ್ಲಿ ಹೇಳಿಕೆ ಬಂದಿತ್ತು ಅದರ ಬಗ್ಗೆ ದಾಖಲೆಗಳನ್ನು ಕೊಡುತ್ತೇವೆಂದು ಕೆಲವೊಂದು ಫೋಟೋಗಳನ್ನು ಕೊಟ್ಟರು ಆ ಫೋಟೋಗಳೆಲ್ಲವೂ ಕೂಡ ಹಿಂಭಾಗದಿಂದ ತೆಗೆಯಲ್ಪಟ್ಟಿದ್ದವು ಮುಂಭಾಗದಿಂದ ತೆಗೆಯಲ್ಪಟ್ಟ ಫೋಟೋಗಳು ಅದರಲ್ಲಿ ಒಂದೂ ಇರಲಿಲ್ಲ ಇದ್ದಂತಹ ಫೋಟೋಗಳಲ್ಲೂ ಕೂಡ ಕೇವಲ 7 ಜನ ಮಾತ್ರ ಇದ್ದರು ಆಮೇಲೆ ನಾವು ಪುರಾತತ್ವ ಇಲಾಖೆಯ ಕಾವಲುಗಾರ ಮತ್ತು ಪುರಾತತ್ವ ಇಲಾಖೆಯನ್ನು ಆ ಬಗ್ಗೆ ಕೇಳಿದರೆ, ಅಂತಹ ಯಾವುದೇ ಘಟನೆಯೂ ಕೂಡ ಇಲ್ಲಿ ನಡೆದಿಲ್ಲ ಎಂಬ ವರದಿಯನ್ನು ಅವರು ಕೊಟ್ಟರು ಪುರಾತತ್ವ ಇಲಾಖೆ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ಆದ್ದರಿಂದ ಈ ವಿಚಾರಗಳಲ್ಲಿ ನಾವು ಭಾವೋದ್ವೇಗಕ್ಕೆ ಒಳಗಾಗದೆ, ಈ ಪುರಾತತ್ವ ಇಲಾಖೆಯವರು ಮತ್ತು ನಾವೆಲ್ಲರೂ ಸೇರಿ, ಅಲ್ಲಿ ಸಾರ್ವಜನಿಕ ಶಾಂತಿಯನ್ನು ಕಾಪಾಡತಕ್ಕದ್ದು ಕೋಮು ಗಲಭೆಗೆ ಅವಕಾಶವಿಲ್ಲದಂತೆ ನೋಡಿಕೊಳ್ಳತಕ್ಕದ್ದು, ಮಾದಕ ದ್ರವ್ಯಗಳು ಮತ್ತು ದುಶ್ಚಟಗಳಿಗೆ ಒಳಗಾಗದಂತೆ ನೋಡಿಕೊಳ್ಳತಕ್ಕ ಅಗತ್ಯವಿದೆ ಗೋವಾ, ಗೋಕರ್ಣ ಹಾಗೂ ಹಂಪಿ ಈ circuit ನಲ್ಲಿ ಬರತಕ್ಕಂಥ ಯಾತ್ರಾರ್ಥಿಗಳು ವಿಲಾಸಿ ಜೀವನಕ್ಕಾಗಿಯೇ ಬರುತ್ತಾರೆ ಮತ್ತು ಕೆಳ ಮಧ್ಯಮ ವರ್ಗದ ಜನ ಮಾತ್ರ ಬರುತ್ತಾರೆ ಅಲ್ಲಿ ಯುರೋಪ್‌ನಿಂದ ಬರತಕ್ಕಂಥ ಜನ, ಯಾರೂ ಕೂಡ ಗಂಭೀರವಾದ ಅಧ್ಯಯನಶೀಲರಲ್ಲ, ಶಿಲ್ಪಕಲೆ ಬಗ್ಗೆ ಗ್ರೊತ್ತಿರತಕ್ಕಂಥವರಲ್ಲ, ಇತಿಹಾಸ ಗೊತ್ತಿರತಕ್ಕಂಥವರಲ್ಲ ಇಲ್ಲಿ ಗಾಂಜಾ, ಚರಸ್ ಮೊದಲಾದವುಗಳನ್ನು ಕಲ್ಲು ಬಂಡೆಗಳ ನಡುವೆ ಕುಳಿತು ಸೇವಿಸಿ ಈ ದ್ವೀಪಗಳಲ್ಲಿ ಸುಖವಾಗಿ ಬದುಕಬಹುದು ಎಂಬ ಕಾರಣಕ್ಕಾಗಿಯೇ ಅಲ್ಲಿಗೆ ಬಹಳ ಜನ ಬರುತ್ತಿದ್ದಾರೆ ಅಲ್ಲಿ ಬಹಳಷ್ಟು

ಕೊಲೆ, ಸುಲಿಗೆಗಳು ಆಗುತ್ತಿದ್ದವು ಈಗ 2–3 ವರ್ಷಗಳಿಂದ ಅವು ನಿಂತಿವೆ ನಾನೂ ಕೂಡ ಹೋಗಿ ಪೊಲೀಸರ ತರಹ ಅಲ್ಲಿನ ಹೋಟೆಲ್‌ಗಳನ್ನೆಲ್ಲಾ ಚೆಕ್ ಮಾಡಿದೆ ನಾನು ಪೊಲೀಸ್ ಸ್ಟೇಷನ್‌ಗೂ ಕೂಡ ಹೋಗಿ ದಾಖಲೆಗಳನ್ನೆಲ್ಲಾ ಚೆಕ್ ಮಾಡಿ ಬಂದಿದ್ದೇನೆ ಆದ್ದರಿಂದ ತಾವು ಹೇಳಿರುವುದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ನಾನು ಸದನಕ್ಕೆ ಮಾತು ಕೊಡುತ್ತಿದ್ದೇನೆ

ಶ್ರೀ ಸಿ ಟಿ ರವಿ – ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವ ಕೆಲಸ ಯಾವಾಗ ಮುಗಿಯುತ್ತದೆ? ಅಲ್ಲಿ ಈಗ 60ಕ್ಕೂ ಹೆಚ್ಚು ಅನಧಿಕೃತ ಕಟ್ಟಡಗಳಿವೆ ಎಂದು ಇಲ್ಲಿ ಪೂರ್ಣ ವರದಿಯನ್ನು ಕೊಟ್ಟಿದ್ದಾರೆ ಅವುಗಳನ್ನೆಲ್ಲಾ ಯಾವಾಗ ತೆರವುಗೊಳಿಸುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ – ಕಾನೂನಿನ ಪ್ರಕಾರ ಹಂಪಿ ಪ್ರಾಧಿಕಾರದ ಅಧ್ಯಕ್ಷರು ಅವರಿಗೆ ನೋಟೀಸ್ ಅನ್ನು ಕೊಟ್ಟಿದ್ದಾರೆ ಹಂಪಿಯ ಪಂಚಾಯಿತಿಯವರೂ ಕೂಡ ನೋಟೀಸ್ ಅನ್ನು ಕೊಟ್ಟಿದ್ದಾರೆ ಕೆಲವರು ಮಾತ್ರ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ ಅದರ ಬಗ್ಗೆ ತತ್‌ಕ್ಷಣದಲ್ಲಿ ನನಗೆ ವಿವರಗಳು ಗೊತ್ತಿಲ್ಲ ಆದರೆ ಖಂಡಿತವಾಗಿಯೂ ಕೂಡ ಅತಿಕ್ರಮಣ ಮಾಡಿರತಕ್ಕವರ ಮೇಲೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ

(ಊ) ಆರಾಧನಾ ಯೋಜನೆಯಡಿಯಲ್ಲಿ ತಾಲ್ಲೂಕು ಕಚೇರಿಗಳಲ್ಲಿದ್ದ 1992ನೇ ಇಸವಿಯಿಂದ 2005–06 ರವರೆಗೆ ಇದ್ದ ಹಣವನ್ನು ವಾಪಸ್ ಪಡೆದಿರುವ ಬಗ್ಗೆ

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) – ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸರ್ಕಾರದವರು ಆದೇಶವೊಂದನ್ನು ಹೊರಡಿಸಿ, ಆರಾಧನಾ ಯೋಜನೆ ಅಡಿಯಲ್ಲಿ 1992ನೇ ಇಸವಿಯಿಂದ 2005–06ರವರೆಗೆ ಏನು ಹಣ, ಆಯಾಯ ತಾಲ್ಲೂಕು ಕಚೇರಿಗಳಲ್ಲಿ ಇತ್ತೋ, ಆ ಹಣವನ್ನೆಲ್ಲಾ ಸರ್ಕಾರದವರು ಪೂರ್ತಿಯಾಗಿ ವಾಪಸ್ ಪಡೆಯುವಂತಹ ಕೆಲಸ ಮಾಡಿದೆ ಇದರಿಂದ ರಾಜ್ಯದ 27 ಜಿಲ್ಲೆಗಳಿಂದ ಸುಮಾರು 20 75 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರದವರು ವಾಪಸ್ ಪಡೆದಿದ್ದಾರೆ ದಯಮಾಡಿ ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ, ಈ ಹಣವನ್ನು ಬಳಸಿಲ್ಲ ಸರಿ, ಆದರೆ ಅದನ್ನು ವಾಪಸ್ ಪಡೆಯಬೇಡಿ ನಮಗೆ

ಇನ್ನೂ ಹದಿನೈದು ದಿವಸಗಳ ಟೈಮ್ ಕೊಡಿ ಅಷ್ಟರೊಳಗೆ ನಾವು ಈ ಪೂರ್ಣ ಹಣವನ್ನು ಕೊಡುವಂತಹ ಕೆಲಸ ಮಾಡುತ್ತೇವೆ ಏಕೆಂದರೆ, ಒಂದು ವರ್ಷಕ್ಕೆ 5 ಲಕ್ಷ ರೂಪಾಯಿಗಳ ಹಣ ಕೂಡ ಒಂದು ತಾಲ್ಲೂಕಿಗೆ ಬರುವುದಿಲ್ಲ ನಾವು ದೊಡ್ಡ ಸಂಖ್ಯೆಯಲ್ಲಿರುವ ದೇವಸ್ಥಾನಗಳಿಗೆ, ಚರ್ಚ್‌ಗಳಿಗೆ ಮತ್ತು ಮಸೀದಿಗಳಿಗೆ ಹಣ ಕೊಡಬೇಕೆಂದರೆ ನೀವು ಅದಕ್ಕಾಗಿ ಕೊಡುವಂತಹ ಹಣ ಸಾಕಾಗುವುದಿಲ್ಲ ನಮ್ಮ ಜಿಲ್ಲೆಯೊಂದರಿಂದಲೇ ಸುಮಾರು 50 ಲಕ್ಷ ರೂಪಾಯಿಗಳಷ್ಟು ಹಣ ವಾಪಸ್ ಹೋಗುತ್ತಿದೆ ಅದರಲ್ಲೂ ನಮ್ಮ ತಾಲ್ಲೂಕ್‌ವೊಂದರಿಂದಲೇ 15 ಲಕ್ಷ ರೂಪಾಯಿಗಳು ಹೋಗುತ್ತಿದೆ ದಯಮಾಡಿ ಇದನ್ನು ವಾಪಸ್ ನಮಗೆ ಬಿಡುಗಡೆ ಮಾಡಿಕೊಟ್ಟರೆ, ಈ ಹಣವನ್ನು ನಾವು 15 ದಿವಸದೊಳಗೆ ಖರ್ಚು ಮಾಡುತ್ತೇವೆ ಸರ್ಕಾರದವರು ತಮ್ಮ ಆದೇಶವನ್ನು ರದ್ದುಪಡಿಸಿ, ಅಲ್ಲೇ ಹಣವನ್ನು ಬಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಜಿ ಚಂದ್ರಣ್ಣ (ದೇವನಹಳ್ಳಿ) – ಮಾನ್ಯ ಅಧ್ಯಕ್ಷರೆ, ಅನೇಕ ಕಡೆಗಳಲ್ಲಿ ಸಮಿತಿಗಳೇ ರಚನೆಯಾಗಿಲ್ಲ ಆ ಕೆಲಸ ಕೂಡ ಆಗಬೇಕಾಗಿದೆ ಈ ಹಿನ್ನೆಲೆಯಲ್ಲಿ ಹಣ ಮಂಜೂರು ಮಾಡುವುದು ಮತ್ತು ವಾಪಸ್ ತೆಗೆದುಕೊಳ್ಳುವುದು ಎಂದರೆ, ಅದೊಂದು ಸ್ವಲ್ಪ ವ್ಯತ್ಯಾಸವಾಗುತ್ತದೆ ದಯಮಾಡಿ ಈ ಹಣವನ್ನು ವಾಪಸ್ ತೆಗೆದುಕೊಳ್ಳಬಾರದು ಅದನ್ನು ಅಲ್ಲೇ ಉಳಿಸಬೇಕೆಂದು ನಾನೂ ಕೂಡ ಒತ್ತಾಯಿಸುತ್ತೇನೆ

ಶ್ರೀ ಹೆಚ್ ನಿಂಗಪ್ಪ (ಕುಣಿಗಲ್) – ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಆದೇಶವನ್ನು ಮಾಡಿರತಕ್ಕದ್ದು ಹಣವನ್ನು ಖರ್ಚು ಮಾಡಿಲ್ಲವೆಂಬ ಕಾರಣಕ್ಕೆ ಹಣ ಖರ್ಚು ಮಾಡಬೇಕಾದರೆ ಆರಾಧನಾ ಸಮಿತಿಗಳೇ ರಚನೆಯಾಗಿರಲಿಲ್ಲ ಈ ಸಮಿತಿಗಳು ರಚನೆಯಾಗಿಲ್ಲ ಎಂಬ ಕಾರಣಕ್ಕಾಗಿಯೇ ಹಣ ಖರ್ಚಾಗಿಲ್ಲ ಕರ್ನಾಟಕ ರಾಜ್ಯದಲ್ಲಿ ಬಿಡುಗಡೆಯಾಗಿದ್ದಂತಹ ಸುಮಾರು 20 ಕೋಟಿ ರೂಪಾಯಿಗಳಷ್ಟು ಹಣವನ್ನು ವಾಪಸ್ ಪಡೆಯತಕ್ಕಂಥ ಆದೇಶ ಸರ್ಕಾರದಿಂದ ಹೊರಬಿದ್ದಿದೆ ಆದ್ದರಿಂದ ಇವತ್ತು ಬಹಳ ತೊಂದರೆಯಾಗುತ್ತಿದೆ ಏನೊಂದು ಹಣ ಆಯಾ ತಾಲ್ಲೂಕಿನಲ್ಲಿ ಅಥವಾ ಆಯಾ ಕ್ಷೇತ್ರದಲ್ಲಿತ್ತೋ, ಅದನ್ನು ವಾಪಸ್

ಮಾಡಿ ಮತ್ತೆ ಮರು ಆದೇಶ ಮಾಡಲಿಕ್ಕೆ ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಸೂಚನೆ ಕೊಡಬೇಕೆಂದು ನಾನು ಇವತ್ತು ತಮ್ಮ ಮುಖೇನ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಎಂ ಮಹದೇವ (K.R.ನಗರ) – ಮಾನ್ಯ ಸಚಿವರ ಗಮನಕ್ಕೆ ನಾನು ತರಬಯಸುವುದೇನೆಂದರೆ, ಆರಾಧನಾ ಸಮಿತಿಗಳು ರಚನೆಯಾಗಿಲ್ಲವೆಂಬ ಕಾರಣಕ್ಕಾಗಿ ತಹಶೀಲ್ದಾರ್‌ರವರು ಹಣವನ್ನು ಬಿಡುಗಡೆ ಮಾಡಲಿಕ್ಕೆ ಒಪ್ಪುತ್ತಿಲ್ಲ ಆದರೆ ಸಮಿತಿಯ ಅಧ್ಯಕ್ಷರು ಶಾಸಕರೇ ಆಗಿರಬೇಕೆಂದು ಸುತ್ತೋಲೆ ಕೂಡ ಇದೆ Because of lack of members ಇದನ್ನು ಉಪಯೋಗ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ Members formation ಆಗದಿದ್ದರೂ ಸಹ, ಕನಿಷ್ಟ ಶಾಸಕರು ಹಾಗೂ ತಹಶೀಲ್ದಾರ್‌ರವರು ಕುಳಿತು ಇದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ, ಇನ್ನು 15 ದಿವಸಗಳಲ್ಲಿ ಈ ಹಣವನ್ನು ನಾವು ಉಪಯೋಗ ಮಾಡುತ್ತೇವೆ.

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಅಧ್ಯಕ್ಷರೆ, ಅದರಲ್ಲಿ ಇನ್ನೊಂದು ತೊಂದರೆ ಇದೆ ನಾವು ಅವರಿಗೆ 20–25 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ನಿಮ್ಮ ಡಿ ಸಿ ಯವರು ಅದಕ್ಕೆ estimate ಮಾಡಿಸಿಕೊಂಡು ಬನ್ನಿ ಎಂದು ಹೇಳುತ್ತಾರೆ 4 ಲಕ್ಷ ರೂಪಾಯಿಗಳಿಗೆ ಬಿಲ್ಡಿಂಗ್‌ವೊಂದನ್ನು ಕಟ್ಟಲು estimate ಮಾಡಿದ್ದರೆ, ಆ estimates ಅನ್ನು ತಂದು ಇವರಿಗೆ ಕೊಡುವುದಕ್ಕೆ 5% ನಂತೆ estimate ಮಾಡುವವನು ಕಮಿಷನ್ ತೆಗೆದುಕೊಂಡಿರುತ್ತಾನೆ 20 ಸಾವಿರ ರೂಪಾಯಿಗಳು ಬರೀ estimates ತಂದು ಕೊಡುವುದಕ್ಕೆ ವೆಚ್ಚವಾಗುತ್ತದೆ ಈ ತೊಂದರೆಯಿಂದ ಆ ಹಣ ಹಾಗೆಯೇ ಉಳಿದಿದೆ 25 ಸಾವಿರ ರೂಪಾಯಿಗಳನ್ನು ಕೊಟ್ಟು estimate ಮಾಡಿಸಿ 2–3 ಲಕ್ಷ ರೂಪಾಯಿಗಳ ವೆಚ್ಚದ ಬಿಲ್ಡಿಂಗ್ ಕಟ್ಟಲಿಕ್ಕೆ ಹೊರಟರೆ, ಇವರು ಅದಕ್ಕೆ ಹಣವನ್ನು ಸರಿಯಾಗಿ ರಿಲೀಸ್ ಮಾಡುವುದಿಲ್ಲ ಆ ಕಾರಣದಿಂದಲೂ ಅಲ್ಲಿ ದುಡ್ಡು ಉಳಿದಿದೆ ನಾವು ಮಂಜೂರು ಮಾಡಿಕೊಟ್ಟರೂ ಸಹಿತ, ಆ ಹಣವನ್ನು ಇವತ್ತಿನವರೆಗೂ ರಿಲೀಸ್ ಮಾಡಿಲ್ಲ ಎರಡು ವರ್ಷಗಳಿಂದ ಅವುಗಳು ಹಾಗೆಯೇ ಬಿದ್ದಿವೆ ಹಲವಾರು ಸಲ ಡಿ ಸಿ ಆಫೀಸ್‌ಗೆ ಓಡಾಡುವಂತೆ ಮಾಡಿ ಆ ಹಣವನ್ನು ತೆಗೆದುಕೊಳ್ಳದಂತೆ ಮಾಡಿದ್ದಾರೆ ಆ ಕಾರಣದಿಂದ ಅದನ್ನೂ ಕೂಡ

ಸರಳೀಕರಣ ಮಾಡಿದರೆ, ಅದು ಸರಿಯಾಗುತ್ತದೆ ದಯವಿಟ್ಟು ಆ ರೊಕ್ಕವನ್ನು ಮತ್ತೆ ವಾಪಸ್ ತೆಗೆದುಕೊಳ್ಳಬಾರದು ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಜಿ ಚಂದ್ರಣ್ಣ – ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ಪ್ರತ್ಯೇಕವಾದ ಚರ್ಚೆಯನ್ನೇ ಮಾಡಲು ಅವಕಾಶ ಕೊಡಿ ಈ ವಿಚಾರ ಬಹಳ ಗಂಭೀರವಾಗಿದೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) – ಮಾನ್ಯ ಅಧ್ಯಕ್ಷರೆ, ಈ ವಿಚಾರ ಮುಜರಾಯಿ ಇಲಾಖೆ ಉಸ್ತುವಾರಿ ಹೊತ್ತಿರುವ ಮಾನ್ಯ ನಾಗರಾಜಶೆಟ್ಟಿಯವರ ವ್ಯಾಪ್ತಿಗೆ ಬರುತ್ತದೆ ಈ ವಿಷಯವನ್ನು ನಾನು ಅವರ ಗಮನಕ್ಕೆ ತಂದು, ಇಲ್ಲೇನು ತೊಂದರೆಗಳಾಗಿವೆಯೋ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ ಆರಾಧನಾ ಸಮಿತಿಗೆ ಹಣವನ್ನೇನು ಮಂಜೂರು ಮಾಡಲಾಗಿರುತ್ತದೆಯೋ, ಆ ಹಣ lapse ಆಗುವುದಿಲ್ಲ ಈಗೇನು 20 ಕೋಟಿ ರೂಪಾಯಿಗಳ ಹಣ ವಾಪಸ್ ಪಡೆಯಲಾಗಿದೆ ಎಂದು ಹೇಳುತ್ತಿದ್ದಾರೋ, ಅದು ಆರಾಧನಾ ಸಮಿತಿಗೆ ಅಲಾಟ್ ಮಾಡಿದಂತಹ ಹಣವಲ್ಲ ಅದು ಮುಜರಾಯಿ ಇಲಾಖೆಯಿಂದ ನೇರವಾಗಿ ಕೆಲವೊಂದು ದೇವಸ್ಥಾನದ ಟ್ರಸ್ಟ್‌ಗಳಿಗೆ ಕೊಟ್ಟಿರುವಂತಹ ಹಣವಾಗಿದೆ ಆರಾಧನಾ ಸಮಿತಿಗೆ ಕೊಟ್ಟಿರುವಂಥಾದ್ದು lapse ಆಗುವುದಿಲ್ಲ ಎಲ್ಲೆಲ್ಲಿ ಆರಾಧನಾ ಸಮಿತಿಗಳು ಆಗಿಲ್ಲವೋ ಅಂತಹ ಕಡೆಗಳಲ್ಲಿ ಆದಷ್ಟು ಬೇಗನೆ ಅದನ್ನು constitute ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

(ಗೊಂದಲ)

ಅಧ್ಯಕ್ಷರು – ಆಯಿತು, ಅದರ ಬಗ್ಗೆ ಸ್ಪಷ್ಟವಾಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ

(ಗೊಂದಲ)

ಶ್ರೀ ಹೆಚ್ ಎಂ ವಿಶ್ವನಾಥ್ – ಮಾನ್ಯ ಅಧ್ಯಕ್ಷರೆ, ಇವರು ತಮ್ಮ ಆದೇಶದಲ್ಲಿ ಸ್ಪಷ್ಟವಾಗಿ ಹಾಗೆಯೇ ಕೊಟ್ಟಿದ್ದಾರೆ "ಆರಾಧನಾ ಹಣವನ್ನು ವಿತರಣೆ ಮಾಡಲು

ಅವಕಾಶವಿದ್ದರೂ ಸಹ, ಯೋಜನೆ ಅಡಿಯಲ್ಲಿ ಮಂಜೂರಾದ ಅನುದಾನ ಹಾಗೂ ಅನುದಾನದ ಮೇಲೆ ಸಂಗ್ರಹವಾದ ಬಡ್ಡಿ ಹಣ 1999 ರಿಂದ 2005–06ರ ಅವಧಿಯಲ್ಲಿ ಅನುಬಂಧ – 1 ರಲ್ಲಿರುವಂತೆ ಬಳಕೆಯಾಗದೇ ಉಳಿದಿದ್ದನ್ನು ಸರ್ಕಾರ ಗಮನಿಸಿ, ಈ ಮೊತ್ತವನ್ನು ರದ್ದುಪಡಿಸಿ ಹಿಂದಕ್ಕೆ ಪಡೆಯಲು ಆದೇಶಿಸಿದೆ' ಎಂದು ಇದೆ ಆರಾಧನಾ ಸಮಿತಿಯ ಹಣವೆಂದು ನೀವು ಆದೇಶದಲ್ಲಿ ಕೊಟ್ಟಿದ್ದೀರಿ

ಶ್ರೀ ಜಗದೀಶ್ ಶೆಟ್ಟರ್ – ಆ ಬಗ್ಗೆ ನಾನು verify ಮಾಡಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ – ಸುಮ್ಮನೆ ಏನೇನೋ ಹೇಳುವುದಕ್ಕೆ ಹೋಗಬೇಡಿ ಹಣವನ್ನು ವಾಪಸ್ ಪಡೆದುಕೊಂಡಿರುವ ಆದೇಶವನ್ನು ರದ್ದುಪಡಿಸುತ್ತೇವೆ ಎಂಬ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ಇಲ್ಲಿ ಕೊಡಬೇಕು

(ಗೊಂದಲ)

ಅಧ್ಯಕ್ಷರು :– ಸರ್ಕಾರದಿಂದ ಹಣವೇನು ಮಂಜೂರಾಗಿ ಬಂದಿದೆಯೋ, ಅದು ಮತ್ತೆ ವಾಪಸ್ ಹೋಗುತ್ತಿದೆ ಎಂಬ ಭಾವನೆ ಎಲ್ಲರಲ್ಲಿ ಇದೆ ಅದು ವಾಪಸ್ ಹೋಗಿಲ್ಲದಿದ್ದರೆ ಪರವಾಗಿಲ್ಲ ಇಲ್ಲದಿದ್ದರೆ ಆ ಬಗ್ಗೆ ಏನಾದರೂ ಕ್ರಮವೊಂದನ್ನು ತೆಗೆದುಕೊಂಡು ಹಣ ವಾಪಸ್ ಪಡೆಯದಂತೆ ಸೂಚನೆ ಕೊಡಿ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ – ಆ ಆದೇಶವನ್ನು ರದ್ದು ಮಾಡಿದ್ದೇವೆ ಆ ಹಣವನ್ನು ನಾವು ಮತ್ತೆ ವಾಪಸ್ ತೆಗೆದುಕೊಳ್ಳುವುದಿಲ್ಲ ಎಂದು ನೀವು ಸರ್ಕಾರದ ಪರವಾಗಿ ಹೇಳಿಕೆ ಕೊಟ್ಟು ಬಿಡಿ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ನಾಗರಾಜ್‌ಶೆಟ್ಟರನ್ನು ಕರೆಸಿ ಅವರ ಕಡೆಯಿಂದ ಹೇಳಿಸುತ್ತೇನೆ

ಡಾ॥ ಹೆಚ್ ಸಿ ಮಹದೇವಪ್ಪ (ಟಿ ನರಸೀಪುರ) .– ಮಾನ್ಯ ಅಧ್ಯಕ್ಷರೆ, ಮುಜರಾಯಿ ಇಲಾಖೆಯಲ್ಲಿ ದೇವರ ಹೆಸರಿನಲ್ಲಿ ಕಲೆಕ್ಟ್ ಆದಂತಹ ಹಣದ

ಶೇಕಡ 18 ರಷ್ಟನ್ನು SC/ST welfare ಗಾಗಿ ಖರ್ಚು ಮಾಡುವಂತೆ ಮಾನ್ಯ ಕಂದಾಯ ಸಚಿವರು ವ್ಯವಸ್ಥೆ ಮಾಡಬೇಕು ದೇವಸ್ಥಾನದ ಹಣ ಏನಿರುತ್ತದೋ, ಅದರಲ್ಲಿ ಶೇಕಡ 18 ರಷ್ಟು ಹಣವನ್ನು SC/ST welfare ಗೋಸ್ಕರ ಖರ್ಚು ಮಾಡುವಂತೆ ಮಾಡಬೇಕು ದಯವಿಟ್ಟು ಆ ರೀತಿ ಮಾಡಲು ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕು ತಮಿಳುನಾಡಿನಲ್ಲಿ ಎಲ್ಲಾ untouchables, backward classes ದೇವಸ್ಥಾನಗಳಿಗೆ ಪ್ರಾತಿನಿಧ್ಯ ಕೊಡುತ್ತೇವೆಂದು ಅಲ್ಲಿನ ಸರ್ಕಾರ ಹೇಳಿ, ಅದರಂತೆ ಮಾಡುತ್ತಿದೆ ದೇವಸ್ಥಾನದಿಂದ ಪ್ರತಿಯೊಂದು ಬಾಬ್ತಿನಿಂದ ಬಂದಂತಹ ಹಣದಲ್ಲಿ ಶೇಕಡ 18 ರಷ್ಟನ್ನು SC/ST welfare ಗೆ ಖರ್ಚು ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕು ಎಂದು ಸರ್ಕಾರವನ್ನು ತಮ್ಮ ಮುಖೇನ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಶ್ರೀ ಜಿ ಚಂದ್ರಣ್ಣ – ಆರಾಧನಾ ಯೋಜನೆ ಇರುವುದು ಅದಕ್ಕೇ ಅಲ್ಲವೇ? ಅದಕ್ಕಾಗಿಯೇ ಆರಾಧನಾ ಸಮಿತಿಗಳು ಇದೆ ಅದಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ನಾವು ಇಲ್ಲಿ ಹೇಳುತ್ತಿದ್ದೇವೆ ಈಗಾಗಲೇ ಬಿಡುಗಡೆ ಮಾಡಿದ ಹಣವನ್ನು ವಾಪಸ್ ತೆಗೆದುಕೊಳ್ಳಬಾರದು ಆ ಹಣವನ್ನು ಸಮಿತಿಗಳ ಮುಖಾಂತರ ಕೊಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ ಮಾನ್ಯ ನಾಗರಾಜ ಶೆಟ್ಟರವರು ಸಮಿತಿಗಳನ್ನು ಏತಕ್ಕಾಗಿ ಮಾಡಿಲ್ಲವೆಂಬ ಬಗ್ಗೆ ಇಲ್ಲಿ ಉತ್ತರಿಸಬೇಕು

ಅಧ್ಯಕ್ಷರು .– ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರವೊಂದನ್ನು ಹೇಳಿಬಿಡಿ

ಶ್ರೀ ಹೆಚ್ ಎಂ ವಿಶ್ವನಾಥ್ – ನಮಗೆ ಈ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದಂತಹ ಉತ್ತರ ಬೇಕಾಗಿದೆ

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದು original ಆಗಿ ನಿಮ್ಮ ಖಾತೆಗೆ ಬರುತ್ತದೆ ಬಹಳ ಜನರನ್ನು ಮಂತ್ರಿಗಳನ್ನಾಗಿ ಮಾಡಲಿಕ್ಕೆ ಹೋಗಿ, ಯಾರ್‍ಯಾರಿಗೋ ಯಾವ್ಯಾವುದೋ ಖಾತೆಗಳನ್ನು ಕೊಟ್ಟು ಬಿಟ್ಟಿದ್ದಾರೆ ಆ ಹಣವನ್ನು ಮತ್ತೆ ವಾಪಸ್ ತೆಗೆದುಕೊಳ್ಳುವುದಿಲ್ಲ ಎಂಬ ಉತ್ತರವನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರೇ ಹೇಳಬೇಕು

(ಗೊಂದಲ)

ಶ್ರೀ ಎಂ ಮಹದೇವ (K.R.ನಗರ) – ಎಲ್ಲಾ ತಾಲ್ಲೂಕುಗಳಲ್ಲಿ ಆರಾಧನ ಸಮಿತಿ ರಚನೆಯಾಗಿಲ್ಲ, ಕೆಲವು ಕಡೆ ಆಗಿದೆ, ಕೆಲವು ಕಡೆ ಆಗಿಲ್ಲ ತಹಸೀಲ್ದಾರ್ ಸಮಿತಿ ರಚನೆಯಾಗದೆ, We are not empowered to spend the money ಎಂದು ಹೇಳುತ್ತಾರೆ ಸಮಿತಿಗೆ ಶಾಸಕರು ಅಧ್ಯಕ್ಷರು, ಸೆಕ್ರೆಟರಿ, ಸದಸ್ಯರಿಲ್ಲದ ಕಾರಣ ಆರಾಧನ ಸಮಿತಿಗೆ ಹಣ ಬಿಡುಗಡೆಯಾಗುತ್ತಿಲ್ಲ, ಖರ್ಚಾಗುತ್ತಿಲ್ಲ ದಯವಿಟ್ಟು, ಸಮಿತಿ ಯಾವಾಗಲಾದರೂ ರಚನೆಯಾಗಲಿ, year ending ಇದೆ, ಇದನ್ನೆಲ್ಲಾ ಉಪಯೋಗಿಸಿಕೊಳ್ಳುವುದಕ್ಕೆ, ತಹಸೀಲ್ದಾರ್ ಮತ್ತು ನಾವೆ ಕುಳಿತು ಈ ಹಣ ಖರ್ಚು ಮಾಡುವುದಕ್ಕೆ ಒಂದು ಕಾರ್ಯಕ್ರಮ ಮಾಡುವುದಕ್ಕೆ, ಹಣ ಬಿಡುಗಡೆ ಮಾಡುವ ಬಗ್ಗೆ ಒಂದು ನಿರ್ದಿಷ್ಟ ಉತ್ತರ ಸಚಿವರಿಂದ ಬೇಕು ಎಲ್ಲಾ ಶಾಸಕರಿಗೂ ಇದೇ ಸಮಸ್ಯೆ ಇದೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು) – ಸನ್ಮಾನ್ಯ ಅಧ್ಯಕ್ಷರೆ, ಮುಜರಾಯಿ ಮಂತ್ರಿಗಳಿಗೆ ಈ ಎಲ್ಲಾ ಮಾಹಿತಿಯನ್ನು ಕೊಟ್ಟು, ಅವರಿಂದ ಉತ್ತರವನ್ನು ಕೊಡಿಸುತ್ತೇನೆ

ಡಾ॥ ಹೆಚ್ ಸಿ ಮಹಾದೇವಪ್ಪ – ಸರ್, ಆ ರೀತಿ ಮಾಡಬೇಕೆಂದು instruction ಇದೆ, ನಾನು ಹೇಳಿದ್ದರ ಬಗ್ಗೆ ಸ್ವಲ್ಪ ಹೇಳಿ, ಮಾನ್ಯ ಕಂದಾಯ ಸಚಿವರಿಗೆ ಗೊತ್ತಿದೆ, ಆ ರೀತಿ instruction ಇದೆ, ದಯವಿಟ್ಟು, ನೀವು ಅದನ್ನು ಹೇಳಿಬಿಡಿ

ಶ್ರೀ ಜಗದೀಶ್ ಶೆಟ್ಟರ್ – ಎಲ್ಲೆಲ್ಲಿ SC/ST ಕಾಲೋನಿ ಇದ್ದಾವೋ, ಅಲ್ಲಿಯ ದೇವಸ್ಥಾನಗಳಿಗೆ ಆದ್ಯತೆ ಕೊಡಬೇಕೆಂದು ಆರಾಧನ ಸಮಿತಿಯಲ್ಲಿ specific instruction ಇದೆ, ಅದರ ಪ್ರಕಾರ ನಾನು instruction ಕೊಡಿಸುತ್ತೇನೆ

ಅಧ್ಯಕ್ಷರು – ಈಗ ನಮ್ಮ ಹಣಕಾಸಿನ ಸಚಿವರು ಬಂದ ಹಾಗೆ ಆಗಲಿಲ್ಲ, ಆದುದರಿಂದ ಈಗ ಸದನವನ್ನು ಎರಡುವರೆ ಗಂಟೆಗೆ ಮುಂದೂಡಲಾಗಿದೆ

(ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರುವಂತೆ ಸದನವನ್ನು ಮಧ್ಯಾಹ್ನ 2 ಗಂಟೆ 21 ನಿಮಿಷಕ್ಕೆ ಮುಂದೂಡಲಾಯಿತು)

3 ನಿಯಮ 69ರ ಅಡಿಯಲ್ಲಿ ಚರ್ಚೆ

ವಿಷಯ – ಗಣಿ ಹಗರಣದ ಬಗ್ಗೆ ತನಿಖೆ ನಡೆಸುತ್ತಿರುವ ಭಟ್ ಆಯೋಗವನ್ನು ರದ್ದುಪಡಿಸಿರುವ ಬಗ್ಗೆ

(ಸದನವು ಪುನಃ ಮಧ್ಯಾಹ್ನ 3 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು – ಮಾನ್ಯ ಉಪ ಮುಖ್ಯಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಕುಳಿತಿದ್ದಾರೆ ಅದಕ್ಕೋಸ್ಕರ ಈಗ Rule 69ರ ಅಡಿಯಲ್ಲಿ ಬರುವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ ಮಾನ್ಯ ಮಂತ್ರಿಗಳು ಬೆಳಿಗ್ಗೆ ಆ ಸದನದಿಂದ ಇಲ್ಲಿಗೆ ಬರಲಿಲ್ಲವೆಂದು ನಾನು 10 ನಿಮಿಷ ಮೊದಲೇ ಭೋಜನಕ್ಕೆ adjourn ಮಾಡಿದೆ ಏಕೆಂದರೆ, ಅಷ್ಟೊತ್ತಿಗೆ ಬರುತ್ತಾರೆಂದು ತಿಳಿದಿದ್ದೆ ಈಗ ಏನಾಗಿದೆ ಎಂದರೆ ಪೂರಕ ಅಂದಾಜುಗಳ ಮೇಲೆ ಚರ್ಚೆ ಇನ್ನೇನು ಕೊನೆಯ ಹಂತದಲ್ಲಿದೆ, ಉತ್ತರ ಕೊಡಬೇಕಾಗಿದೆ ಎಂದು ಅವರು ವಿಧಾನಪರಿಷತ್ತಿನಲ್ಲಿ ಇದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಗುರುಮಿರಕಲ್) – ಮಾನ್ಯ ಅಧ್ಯಕ್ಷರೆ, ಆ ಮನೆಯಲ್ಲ supplementary budget ಇರಬಹುದು, budget ಇರಬಹುದು, ಬೇರೆ ವಿಷಯ ಇರಬಹುದು ಆ ಮನೆಯ leader ಅಲ್ಲಿ reply ಕೊಡುತ್ತಾರೆ But, ಅವರ ಕರ್ತವ್ಯವೇನೆಂದರೆ, ಕೆಳಮನೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇರಲೇಬೇಕು ಅದನ್ನು ಬಿಟ್ಟು ಅವರು ಯಾವಾಗಲೂ ಆ ಮನೆಯಲ್ಲಿದ್ದಾರೆ ಎಂದರೆ, ಈ ಮನೆಯ ಮಹತ್ವ ಏನೂ ಇಲ್ಲವೆಂದ ಹಾಗೆ ಆಗುತ್ತದೆ ಇರುವುದೇ ಈ ಮನೆಯ ಮಹತ್ವ. ಇದರಿಂದ ಆ ಮನೆ ಇದೆ ನಾನು ವಿಷಯದ ಬಗ್ಗೆ ಮಾತನಾಡುತ್ತೇನೆ ಮಾತನಾಡುವುದಿಲ್ಲವೆಂದು ಹೇಳುವುದಿಲ್ಲ But, ಹಾಗೆಯೇ day by day ನಮ್ಮ Assembly ಯ ಘನತೆ ಗೌರವ ಕುಸಿಯುತ್ತಿದೆ, ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಸನ್ಮಾನ್ಯ ಅಧ್ಯಕ್ಷರೆ, ಈಗ Rule 69ರ

ಕೆಳಗೆ ಈ ಗಣಿ ಲಂಚದ ಹಗರಣದ ಬಗ್ಗೆ ಮಾತನಾಡಬೇಕೆಂದು ನಾನು ಇವತ್ತು ಇಲ್ಲಿ ನಿಂತಿದ್ದೇನೆ Sudden ಆಗಿ ಈ ವಿಷಯ ಬಂತು ಏಕೆಂದರೆ, ಬಜೆಟ್ ಮಂಡಿಸಿದಂಥ ಉಪ ಮುಖ್ಯಮಂತ್ರಿಗಳು ಈಗ ಸದನದಲ್ಲಿ ಇಲ್ಲ ಮತ್ತು ಇನ್ನೊಂದು ವಿಶೇಷವೇನೆಂದರೆ, ಯಾರ ವಿರುದ್ಧ ನಮ್ಮ ಆಪಾದನೆ ಇದೆ, ಅವರೂ ಕೂಡ ಸದನದಲ್ಲಿ ಇಲ್ಲ ಮುಖ್ಯಮಂತ್ರಿಗಳು, ಈ 150 ಕೋಟಿ ರೂ ಗಳ ಗಣಿ ಹಗರಣದ ಲಂಚದಲ್ಲಿ involve ಇದ್ದಾರೆ, ಅದಕ್ಕೆ CBI enquiry ಆಗಬೇಕೆಂದು ಏನು ಕೇಳಿಕೊಳ್ಳಬೇಕೆಂದು ನಿಂತಿದ್ದೇವೆ, ಅವರು ಇಲ್ಲಿ ಇಲ್ಲ ಬಜೆಟ್ ಬಗ್ಗೆ ಪ್ರಸ್ತಾಪ ಮಾಡಿ ಉತ್ತರ ಕೊಡತಕ್ಕಂಥವರು, ಇಲ್ಲ ಇಂಥ ಒಂದು ಪರಿಸ್ಥಿತಿಯಲ್ಲಿ ನಾವಿದ್ದೇವೆ ಏನೇ ಹೇಳಿ, ಕೇಳಿ, Parliamentary Affairs Minister ಒಬ್ಬರಿಗೇ ಹೇಳಿ ಎನ್ನತಕ್ಕಂಥ ಒಂದು ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ ಇನ್ನು ಸರಿಯಲ್ಲ ನಿಜವಾಗಲೂ ನಮ್ಮ ಈ ಸದನಕ್ಕೆ ಘನತೆ ತರುವುದಿಲ್ಲ ಆದರೆ, ಇನ್ನು ಮೇಲಾದರೂ ಕೂಡ ಶ್ರೀ ಎಂ ಪಿ Prakash ರವರು senior Minister ಇದ್ದಾರೆ, ಅವರಿಗೆ ಇದರ ಬಗ್ಗೆ ಎಲ್ಲ ಗೊತ್ತಿದೆ, ನಾವು ಹೆಚ್ಚಿಗೆ ಹೇಳಬೇಕಾದ್ದಿಲ್ಲ ನಮಗೆ ಈ ಸದನದಲ್ಲಿ ಬಂದು ಹೆಚ್ಚಿನ ವರ್ಷವಾದರೂ ಕೂಡ ಅವರಿಗಿರತಕ್ಕಂಥ ಒಂದು ಹಿನ್ನೆಲೆ ಮತ್ತು Parliamentary Democracy ಬಗ್ಗೆ ಆಳವಾಗಿ ಅಭ್ಯಾಸ ಮಾಡಿದ್ದು ನೋಡಿದಾಗ ಬಹುಶಃ ಅವರು ಇದನ್ನು ಸಹಿಸದೇ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ ಆದರೂ ಕೂಡ ಅಧಿಕಾರಕ್ಕಾಗಿ ಎಲ್ಲ ಸಹಿಸಿಕೊಂಡು ಅವರೂ ನಡೆದಿದ್ದಾರೆ ಈಗ ನಾವೇನೂ ಮಾಡುವುದಕ್ಕಾಗುವುದಿಲ್ಲ ಅನಿವಾರ್ಯವಾಗಿ ಇವತ್ತು ನಾವು ಮಾತನಾಡಬೇಕಾಗಿದೆ ಇನ್ನು ಮುಂದೆ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ ಇವತ್ತು Bhat Commission ಅನ್ನು ಸರ್ಕಾರದವರು abolish ಮಾಡಿದರು ಯಾವ ಕಾರಣಕ್ಕಾಗಿ ತೆಗೆದು ಹಾಕಿದರು? ಅಂದರೆ, ಭಟ್‌ರವರಿಗೆ ಸರ್ಕಾರದಿಂದ ಏನು ನೆರವು ಕೊಡಬೇಕಾಗಿತ್ತೋ, ಆ ನೆರವು ಸಿಗಲಿಲ್ಲವೆನ್ನತಕ್ಕಂಥ ಒಂದು ಆತಂಕದಿಂದ ಭಟ್‌ರವರು ರಾಜೀನಾಮೆ ಕೊಟ್ಟರು ಅವರು ಸ್ಪಷ್ಟವಾಗಿ, "ನನಗೆ office ಕೊಡುವುದಕ್ಕೆ ಒಂದು ತಿಂಗಳು ಮಾಡಿದರು, staff ಕೊಡುವುದಕ್ಕೆ ಒಂದು ತಿಂಗಳು ಮಾಡಿದರು ಮತ್ತು ಉಳಿದ ಸೌಲಭ್ಯಗಳನ್ನು ಕೊಡುವುದಕ್ಕೆ ಒಂದು ತಿಂಗಳು ಮಾಡಿದರು ಹೀಗಾಗಿ ನನಗಿರತಕ್ಕಂಥ ಮೂರು

ತಿಂಗಳು ಇದೇ ರೀತಿಯಾಗಿ ಕಳೆದು ಹೋದವು" ಎನ್ನುವ ಮಾತನ್ನು ಅವರು ಹೇಳಿ, ರಾಜ್ಯಪಾಲರಿಗೆ ಇದನ್ನು ಹೇಳಿಕೊಂಡು ಅಂತಿಮವಾಗಿ ಅವರು ಮನೆಗೆ ಹೋಗಬೇಕೆನ್ನತಕ್ಕಂಥ ನಿರ್ಣಯವನ್ನು ತೆಗೆದುಕೊಂಡು ಹೋಗಿದ್ದಾರೆ ಅವರನ್ನು appoint ಮಾಡುವಾಗ ನಾವು ಹೇಳಿದ್ದೇವೆ Enquiry Commission ಅನ್ನು appoint ಮಾಡತಕ್ಕಂಥದ್ದು ಸರಿಯಲ್ಲ, ಕಾರಣ, ಇದರಿಂದ ಸತ್ಯಾಂಶ ಹೊರಗೆ ಬರುವುದಕ್ಕೆ ಸಾಧ್ಯವಿಲ್ಲ, ಸತ್ಯಾಂಶ ಹೊರಗೆ ಬರಬೇಕಾದರೆ ಜನಾರ್ಧನ ರೆಡ್ಡಿ ಹೇಳಿದಂಥ ಮಾತನ್ನು ನೀವು ಕೂಲಂಕಷವಾಗಿ, ಆಳವಾಗಿ investigation ಮಾಡಬೇಕಾಗಿದ್ದರೆ ಇದಕ್ಕೆ CBI enquiry ಬೇಕಾಗಿದೆಯೇ ಹೊರತು ಬೇರೆ ಯಾವ enquiry ಪ್ರಯೋಜನವಾಗುವುದಿಲ್ಲವೆನ್ನುವ ಸ್ಪಷ್ಟವಾದ ಮಾತನ್ನು ಹೇಳಿದ್ದರೂ ಕೂಡ ಅವರು ಕೇಳಲಿಲ್ಲ Enquiry ಯಿಂದ ಕೇವಲ investigation ಆಗತಕ್ಕಂಥ ಸಾಧ್ಯತೆ ಇತ್ತು ಅದು ಒಂದು ಕೇವಲ facts finding committee ಇದ್ದ ಹಾಗೆ, ಒಂದು ಸಾರಿ ಒಂದು report ಅನ್ನು ತಯಾರು ಮಾಡಿದ ಮೇಲೆ, suo-moto ಅದರ ಮೇಲೆ action ತೆಗೆದುಕೊಳ್ಳತಕ್ಕಂಥ ಅಧಿಕಾರ Bhat ರವರಿಗೆ ಇರಲಿಲ್ಲ ಕೇವಲ ಭಟ್‌ರವರು investigation ಮಾಡಿ ಎಲ್ಲರಿಗೆ ಕೇಳಿ ವಿಚಾರಿಸಿ, ಅವರ affidavit ಅನ್ನು ತೆಗೆದುಕೊಂಡು, ತಮಗೆ ತಿಳಿದಂಥ ಸಾರಾಂಶದಿಂದ ಅಥವಾ ಇರತಕ್ಕಂಥ evidence ನಿಂದ ಅಥವಾ ಅವರಿಗೆ ಬೇಕಾದವರಿಂದ evidence ತೆಗೆದುಕೊಂಡು, affidavit ತೆಗೆದುಕೊಂಡು ವಿಚಾರಣೆ ಮಾಡಿ ಒಂದು report ಅನ್ನು ಸರ್ಕಾರಕ್ಕೆ ಕೊಡಬೇಕಾಗಿತ್ತು ಸರ್ಕಾರಕ್ಕೆ ಕೊಟ್ಟ ಮೇಲೆ ಸರ್ಕಾರ ಅದನ್ನು ನೋಡಿ, ಇಲ್ಲ ಅದನ್ನು ಸ್ವೀಕಾರ ಮಾಡಬೇಕೋ ಅಥವಾ ತಿರಸ್ಕಾರ ಮಾಡಬೇಕೋ ಅಥವಾ ಅದನ್ನು ವಿಚಾರ ಮಾಡತಕ್ಕಂಥ ಯೋಗ್ಯತೆ ಇದೆಯೋ, ಇಲ್ಲವೋ ಎಂದು ಅದನ್ನು ನೋಡಿ ಆಮೇಲೆ ನಿರ್ಣಯವನ್ನು ತೆಗೆದುಕಕೊಳ್ಳತಕ್ಕಂಥದ್ದು ಇತ್ತು ಅದರೊಳಗೆ ಏನಾದರೂ criminal activities ಕಂಡರೆ ಅಥವಾ bribery ಕಂಡರೆ ಅದನ್ನು ಅವರು ಗುರುತಿಸಿ, indict ಮಾಡಿದರೆ ಆಗ ಅದರ ಮೇಲೆ ನೀವು case file ಮಾಡಿ ಎಂದು cabinet ನಿರ್ಣಯ ತೆಗೆದುಕೊಂಡು ಕಳುಹಿಸಬಹುದು ಅಂದರೆ ಹತ್ತಾರು ವರ್ಷ ಈ ಪ್ರಕ್ರಿಯೆ ನಡೆಯುತ್ತದೆ ಈಗ ಎಷ್ಟೋ committee report ಗಳಿವೆ ತಮಗೆ ಗೊತ್ತಿರುವ ಹಾಗೆ, ಸದಾಶಿವ

ಕಮಿಟಿ ರಿಪೋರ್ಟ್ ಇರಬಹುದು, ರಾಮಚಂದ್ರ ರಿಪೋರ್ಟ್ ಇರಬಹುದು, ವೈದ್ಯನಾಥನ್ ರಿಪೋರ್ಟ್ ಇರಬಹುದು, ಇಂಥ ಹತ್ತಾರು ರಿಪೋರ್ಟ್‌ಗಳಲ್ಲಿ ಕೆಲವು ಆಚರಣೆಯಲ್ಲಿಯೇ ಬಂದಿಲ್ಲ, ಕೆಲವನ್ನು ಸ್ವೀಕಾರ ಸಹ ಮಾಡಿಲ್ಲ, ಕೆಲವನ್ನು ತಿರಸ್ಕಾರ ಸಹ ಮಾಡಲಿಲ್ಲ ಇಂಥ ಸ್ಥಿತಿಯಲ್ಲಿರುವಾಗ ನಾನು ಭಟ್ ಕಮಿಶನ್ ಮಾಡಿದ್ದೇನೆ "ಎಲ್ಲರೂ ಕೂಡ ಬಂದು ಇಲ್ಲಿ ನೀವು ಹೇಳಬೇಕು, ನಿಮಗೆ ಧೈರ್ಯ ಇದ್ದರೆ ಹೇಳಿ, ನಾನಂತೂ ಲಂಚ ತೆಗೆದುಕೊಂಡಿಲ್ಲ" ಎಂದು ಹೇಳತಕ್ಕಂಥವರು ಏಕೆ ಹೆದರಬೇಕು? ಈ ಮಾತನ್ನು ನಾವು ಪ್ರಸ್ತಾಪ ಮಾಡತಕ್ಕಂಥ ಪ್ರಯತ್ನ ಮಾಡಿದಾಗ ನಮ್ಮನ್ನು blackmail ಮಾಡತಕ್ಕಂಥ ಪ್ರಯತ್ನ ನಡೆಯಿತು ಜನಾರ್ಧನ ರೆಡ್ಡಿಯವರ allegation ಅನ್ನು ಕೇವಲ ಬೂಟಾಟಿಕೆಗೋಸ್ಕರ ಎಲ್ಲೋ ಹೇಳಿ ಬಿಟ್ಟಿಲ್ಲ ಮೇಲ್ಮನೆಯಲ್ಲೂ ಕೂಡ ಇದನ್ನು ಪ್ರಸ್ತಾಪ ಮಾಡಿದರು, High Court ನಲ್ಲಿ ಪ್ರಸ್ತಾಪ ಮಾಡಿದರು, Supreme Court ನಲ್ಲೂ ಪ್ರಸ್ತಾಪ ಮಾಡಿದರು ನೀವು ನಿಷ್ಪಕ್ಷಪಾತವಾಗಿ ನಡೆದುಕೊಳ್ಳತಕ್ಕಂಥ ಶಕ್ತಿ ನಿಮ್ಮಲ್ಲಿಲ್ಲ

ಶ್ರೀ ಎನ್ ಚಲುವರಾಯಸ್ವಾಮಿ – ಸ್ವಾಮಿ, ನಿಮ್ಮಂಥವರೇ ಹೀಗೆಲ್ಲ ಸದನದಲ್ಲಿ ಮಾತನಾಡುವುದಕ್ಕೆ ನಿಂತುಕೊಂಡುಬಿಟ್ಟರೆ ನಾವು ಏನು ಉತ್ತರವನ್ನು ಹೇಳುವುದೋ ಗೊತ್ತಾಗುತ್ತಿಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ತಮ್ಮಂಥವರು ಎಂದರೆ ಏನು?

ಶ್ರೀ ಎನ್ ಚಲುವರಾಯಸ್ವಾಮಿ – ನೀವು ಬಹಳ popular ಸ್ವಾಮಿ ಈ ಸದನದಲ್ಲಿಯೇ ನೀವು ಹಿರಿಯರು ಸ್ವಾಮಿ 8 ಸಲ ಗೆದ್ದು ಬಂದಿರುವವರು ನೀವು ನಮಗೆಲ್ಲ ನೀವು ಪಾಠ ಹೇಳಬೇಕು ನಿಮಗೆ ನಿಮ್ಮ ಬಗ್ಗೆ ಗೊತ್ತಿದೆಯೋ, ಇಲ್ಲವೋ ಗೊತ್ತಿಲ್ಲ ನಿಮ್ಮ ಬಗ್ಗೆ ನಮಗೆ ಬಹಳ respect ಇದೆ ನಿಮ್ಮ ಬಗ್ಗೆ ಬಹಳ ಗೌರವವಿದೆ ಜನಾರ್ಧನ ರೆಡ್ಡಿ house ನಲ್ಲಿ ಹೇಳಿದರೆಂದು ಹೇಳಿದಿರಿ House ನಲ್ಲಿ ಸಭಾಧ್ಯಕ್ಷರು, ಸಭಾಪತಿಗಳು ಕೇಳಿಕೊಂಡರು do not proceed ಅಂತ ಅವರು ಅದನ್ನು ಪಾಲಿಸಲೇ ಇಲ್ಲ, High Court ಮುಂದೆ reject ಆಗಿದೆ, Supreme Court ಮುಂದೆ reject ಆಗಿದೆ, ಅವರು U L Bhat ಮುಂದೆ ಹೋಗಲಿಕ್ಕೆ ಆಗಲಿಲ್ಲ ಲೋಕಾಯುಕ್ತಕ್ಕೆ ವಹಿಸಲಾಗಿದೆ ಎನ್ನುತ್ತೀರಿ

ಲೋಕಾಯುಕ್ತಕ್ಕೆ ಹೋಗಲಿ ನೀವೂ ಹೋಗಿ, ಅವರೂ ಹೋಗಲಿ, ಕೊಡಲಿ, ಸದನದಲ್ಲಿ ಕೊಡಲಿ, ಬೇಡವೆಂದು ಯಾರು ಹೇಳುತ್ತಾರೆ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಆಯಿತು, ಹೋಗುತ್ತೇವೆ, Thank you ನಮಗೆ ತಿಳುವಳಿಕೆ ಇರಲಿಲ್ಲ ತಿಳುವಳಿಕೆಯನ್ನು ಈಗ ಅವರು ಕೊಟ್ಟಿದ್ದಾರೆ

ಶ್ರೀ ಎನ್ ಚಲುವರಾಯಸ್ವಾಮಿ – ನಿಮಗೆ ತಿಳುವಳಿಕೆ ಕೊಡುವಷ್ಟು ಮಟ್ಟಕ್ಕೆ ಮಾತನಾಡಲಿಕ್ಕೆ ನಾನು ತಯಾರಿಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ನಮ್ಮ ಅನಿಸಿಕೆಯನ್ನು ನಾವು ಹೇಳುತ್ತೇವೆ ಇದು ಸರಿ ಇಲ್ಲ ಎಂದು ನೀವು ಬೇಕಾದರೆ ಅದನ್ನು ತಿರಸ್ಕಾರ ಮಾಡಿ ಸರಿಯಿಲ್ಲವೆಂದು ಹೇಳಿ ನನ್ನ ಅನಿಸಿಕೆ ಇಷ್ಟೆ ಅವರು ಜವಾಬ್ದಾರಿಯುತ ಶಾಸಕರು ಅದನ್ನು ಆ House ನಲ್ಲಿ ಕೂಡ ಹೇಳಿದ್ದಾರೆ ನಾನು prove ಮಾಡುತ್ತೇನೆ ಎನ್ನತಕ್ಕಂಥ challenge ತೆಗೆದುಕೊಂಡಿದ್ದಾರೆ High Court ನಲ್ಲಿ ಕೂಡ ಏನಾಗಿದೆ? High Court ನಲ್ಲಿ ಆಪಾದನೆ ತಿರಸ್ಕಾರವಾಗಿಲ್ಲ High Court ನಲ್ಲಿಯೂ ಕೂಡ ಇದರ ಬಗ್ಗೆ ಒಂದು ವಿಚಾರಣೆ ನಡೆದು, ಕೊನೆಗೆ ಇದನ್ನು Supreme Court ನಲ್ಲಿ ಏನು case ಹಾಕಿದ್ದರು ಇವೆರಡೂ ಕಡೆ ಇರುವುದರಿಂದ legal hurdle ಬಂತೇ ಹೊರತಾಗಿ ತಿರಸ್ಕಾರ ಎನ್ನತಕ್ಕಂಥ ಪ್ರಶ್ನೆ ಬರಲಿಲ್ಲ Alright ತಿರಸ್ಕಾರವೇ ಆಯಿತೆಂದು ತಿಳಿದುಕೊಳ್ಳಿ ಮತ್ತೆ ನಿಮ್ಮ ಮೇಲೆ ಇದ್ದಂಥ charges prove ಮಾಡುವುದಕ್ಕೋಸ್ಕರ ಅಥವಾ disprove ಮಾಡುವುದಕ್ಕೋಸ್ಕರ ನೀವು ಲೋಕಾಯುಕ್ತದಲ್ಲಾದರೂ ಅದನ್ನು reference ಮಾಡಿದ್ದೀರಾ? ಅಥವಾ ಲೋಕಾಯುಕ್ತಕ್ಕೆ Chief Minister ರವರ ಮೇಲೆ action ತೆಗೆದುಕೊಳ್ಳತಕ್ಕಂಥ ಅಧಿಕಾರವಿದೆಯೇ? ಅಂದಾಗ ಕಣ್ಣೊರೆಸುವ ತಂತ್ರವನ್ನು ನೀವೇಕೆ ಮಾಡುತ್ತಿದ್ದೀರಿ? Accused has no choice to choose his judge ಯಾರಾದರೊಬ್ಬರು accused ಇದ್ದು ನನಗೆ ಇಂಥ enquiry ಆಗಬೇಕು, ಎಂದು ಹೇಳುತ್ತಾನೆಯೇ? Accused ಗೆ ಏನು ಮಾಡಬೇಕೆಂದು ನಾವು ಕುಳಿತಿದ್ದೇವೆ ಅವರೂ ಕೇಳಿದ್ದಾರೆ ನಾನು ಬಿ ಜೆ ಪಿ ನಾಯಕರನ್ನು ಕೂಡ ಮೆಚ್ಚಬೇಕು ಪಾಪ, ಅವರು ಹೇಳಿದ್ದಾರೆ ಮೊನ್ನೆ ಟಿ ವಿ ಯಲ್ಲಿ ಕೂಡ ಸದಾನಂದಗೌಡರು

ಹೇಳುತ್ತಿದ್ದರು ಏನೆಂದರೆ, ನಾನು ಮೊದಲನೇ ಮನುಷ್ಯ, ಒಬ್ಬ ಅಧ್ಯಕ್ಷನಾಗಿ ಹೇಳಿದ್ದೇನೆ ಏನೆಂದರೆ, ಇದು ನಿಷ್ಪಕ್ಷಪಾತವಾಗಿ enquiry ಆಗಬೇಕು ಎಂದು ಹೇಳಿದರು ಭಟ್‌ರವರ ಕಡೆಯಿಂದ enquiry ಆಯಿತು ಏನಾಯಿತು? ಅವರಿಗೆ ಸಹಕರಿಸಲಿಲ್ಲ, ಅದಕ್ಕೇ ಹೋದರು ನಾವಂತೂ ಮೊದಲೇ ಬೇಡವೆಂದು ಹೇಳಿದ್ದೇವೆ ನಾವು ನಿಮ್ಮ ಮುಂದೆ ಬರುವುದಕ್ಕೆ ಸಾಧ್ಯವಿಲ್ಲವೆಂದು open ಆಗಿ ಅವರಿಗೆ letter ಬರೆದಿದ್ದೇವೆ ನಾವು ನಿಮ್ಮ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ ನಿಮ್ಮ ಮುಂದೆ affidavit ಹಾಕುವ ಹಾಗಿಲ್ಲ ಕಾರಣವೇನೆಂದರೆ, ಏನು CBI ಕೆಲಸ ಮಾಡುತ್ತದೆ ಆ ಕೆಲಸವನ್ನು ನೀವು ಮಾಡುವುದಕ್ಕೆ ನಿಮಗೆ ಅಧಿಕಾರವಿಲ್ಲ ಆ ಅಧಿಕಾರ ನಿಮಗಿಲ್ಲವೆಂದಾಗ ಕೇವಲ ಒಂದು facts finding committee report ತೆಗೆದುಕೊಂಡು ನಾವು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಅದಕ್ಕೋಸ್ಕರ ಇದನ್ನು ನೀವು CBI ಕಡೆಯಿಂದ enquiry ಮಾಡುವುದಕ್ಕೆ ಅವರಿಗೆ ವಹಿಸಿಕೊಟ್ಟರೆ CBI is not only an investigating agency but it is also an agency to prosecute ಅದಕ್ಕೆ prosecute ಮಾಡುವ ಅಧಿಕಾರವೂ ಇದೆ, investigation ಮಾಡುವ ಅಧಿಕಾರವೂ ಇದೆ ಮತ್ತು ಅದರ jurisdiction wider ಇದ್ದ ಕಾರಣ ನೀವು CBI ಗೆ refer ಮಾಡಿ ಎಂದು ಹರ ಹಿಡಿದರೂ ಕೂಡ ನಮ್ಮ ಮೇಲೆಯೇ ಗೂಬೆ ಕೂರಿಸುವ ಪ್ರಯತ್ನ ಬಂತು, blackmail ಮಾಡುವ ಪ್ರಯತ್ನ ಬಂತು, photo ಗಳನ್ನು ತಂದು produce ಮಾಡುವವರೆಗೆ ಹೋದರು ಅದು ಇರಲಿ ಬಿಡಿ ಆದರೆ, ನೋಡೋಣ ಸಮಯ ಬಂದಾಗ ಯಾವ್ಯಾವುದು ಬರುತ್ತದೋ ಆವಾಗ ಅದನ್ನು ಹೇಳೋಣ ಆದರೆ, ಈಗ ನಾವು ಕೇಳತಕ್ಕಂಥದ್ದು ಕಾನೂನಿನ ಪ್ರಕಾರ ಸರಿ ಇದೆ ಕಾನೂನಿನ ಪ್ರಕಾರ ಏನು? ಇವತ್ತು ಲೋಕಾಯುಕ್ತಕ್ಕೆ ಅಧಿಕಾರ ಇದೆಯೇ? ಮಾನ್ಯ ಮುಖ್ಯಮಂತ್ರಿ ಮೇಲೆ ನೇರವಾಗಿ ಏನಾದರೂ terms of reference ನಲ್ಲಿ ಈಗೀಗ ಅವರ ಮೇಲೆ action ತೆಗೆದುಕೊಳ್ಳುವುದಕ್ಕೆ ಏನಾದರೂ ಅದರಲ್ಲಿ ಒಂದು reference ಇದೆಯೇ ಎಂದು ನೋಡಿದರೆ ಅದೂ ಇಲ್ಲ ಅದಕ್ಕೂ ನಾವು ಒಪ್ಪುವುದಿಲ್ಲ ನಾವು ಕೇಳಿದ್ದೇ CBI enquiry ಆಗಬೇಕೆಂದು ಆದರೂ ಕೂಡ ಜನರಿಗೆ ತಿಳಿಸುವುದಕ್ಕೋಸ್ಕರ ಅಥವಾ ಕಣ್ಣೊರೆಸುವುದಕ್ಕೋಸ್ಕರ

ಶ್ರೀ ಎನ್ ಚೆಲುವರಾಯಸ್ವಾಮಿ – ಸರ್ ಎರಡು ಮೂರು incident refer ಮಾಡಿ ಹಿಂದೆ ಸರ್ಕಾರ ನಡೆಸುತ್ತಿದ್ದಾಗ ತಾವು ಹಿಂದೆ Home Minister ಆಗಿದ್ದಿರಿ, ಇದಕ್ಕಿಂತ ದೊಡ್ಡ ದೊಡ್ಡ ವಿಷಯಗಳು ಪ್ರಸ್ತಾಪವಾದಾಗ CBI enquiry ಗೆ ಕಳುಹಿಸಿರತಕ್ಕಂಥ ಯಾವುದಾದರೂ ಒಂದೋ, ಎರಡೋ ಉದಾಹರಣೆ ಇದ್ದರೆ ದಯವಿಟ್ಟು reference ಮಾಡಿಬಿಡಿ

ಶ್ರೀ ಡಿ ಕೆ ಶಿವಕುಮಾರ್ – ನೀವೇ ಮಂತ್ರಿಯಾಗಿದ್ದಾಗ ಇದೇ ಸರ್ಕಾರವಿದ್ದಾಗ ಹತ್ತಾರು ಜನರು ಹುಡುಗರ ಮೇಲೆ CBI enquiry ಮಾಡಲು ರಾಜೀವ್‌ಗಾಂಧಿ ಯುನಿವರ್ಸಿಟಿ ವಿಷಯದಲ್ಲಿ ತಾವೇ ಆರ್ಡರ್ ಮಾಡಲಿಲ್ಲವೆ? ಆಗ ನಿಮಗೆ ನಂಬಿಕೆ ಇರಲಿಲ್ಲವೇ?

(ಗೊಂದಲ)

ಶ್ರೀ ಎನ್ ಚೆಲುವರಾಯಸ್ವಾಮಿ – 250 ಕೋಟಿ ರೂ ಗಳ ನಗರಸಭೆಯ ಹಗರಣವನ್ನು ಬಹಳ ಎಳೆ ಎಳೆಯಾಗಿ ನಮ್ಮ ಬಿಜೆಪಿಯ ಸದಸ್ಯರು ಶ್ರೀ ಸುರೇಶ್ ಕುಮಾರ್‌ರವರು ಬಿಡಿಸಿಟ್ಟಿದ್ದರು ಅವರು ಇವತ್ತು ಸದನದಲ್ಲಿ ಇಲ್ಲ ಆವತ್ತು CBI ಗೆ ಒಪ್ಪಿಸುವುದಕ್ಕೆ ಮರೆತುಹೋಗಿದ್ದೀರಲ್ಲಾ ಸ್ವಾಮಿ? ದಯಮಾಡಿ ಲೋಕಾಯುಕ್ತಕ್ಕೆ ಕೊಟ್ಟು ಏನೇನಾಯಿತೆಂದು ಹೇಳಿ, ನಾನು ಹೇಳುವುದಕ್ಕೆ ಆಗುತ್ತದೆಯೇ? ಹೇಳಬೇಕಾ ಸ್ವಾಮಿ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಲೋಕಾಯುಕ್ತಕ್ಕೆ ಕೊಟ್ಟಿದ್ದು ಯಾವ parties ಮೇಲೆಯೂ action ಆಗಿಲ್ಲ ಯಾರನ್ನೂ ಜೈಲಿಗೆ ಕಳುಹಿಸಿಲ್ಲ ಈಗ ನಿಮ್ಮ ಕೈಯಲ್ಲಿ ಅಧಿಕಾರವಿದೆ ನಾವೇನಾದರೂ ತಪ್ಪು ಮಾಡಿದ್ದರೆ ಬೇಕಾದರೆ CBI ಗೆ refer ಮಾಡಿ ನಮಗೂ ಗಲ್ಲಿಗೇರಿಸಿ ನಮ್ಮ ಜೊತೆಯಲ್ಲಿ ನೀವೂ ಸಹ ಬನ್ನಿ ಈಗ ಏನಾಗುತ್ತದೆಂದರೆ ಯಡಿಯೂರಪ್ಪನವರ ಬಜೆಟ್ ನೋಡಿದರೆ ಅದಕ್ಕೂ competition ಬರಬಹುದು ಸರ್ ಏಕೆಂದರೆ, ಹೊಳೆನರಸೀಪುರಕ್ಕೆ ಶಿಕಾರಿಪುರದವರು compete ಮಾಡಬಹುದು ಜೈಲಿನಲ್ಲಿ ನೇಣು ಹಾಕುವುದಕ್ಕೆ ನೂರು ಹಗ್ಗಗಳನ್ನು ಖರೀದಿ ಮಾಡಬೇಕೆಂದ ಕೂಡಲೇ ಬಹುಶಃ

ಯಡಿಯೂರಪ್ಪನವರು ಮತ್ತು ಹೊಳೆನರಸೀಪುರದ ರೇವಣ್ಣನವರು ಇಬ್ಬರಿಗೂ competition ಆಗಬಹುದು ಅಯ್ಯೋ ನನಗೊಂದು 50 ಕೊಡು, ಬೇರೆಯವರಿಗೆ ಬೇಡವೆಂದು ಹೇಳಬಹುದು ಹಗ್ಗ ಸರ್, ನೇಣು ಹಾಕಿಕೊಳ್ಳುವುದಕ್ಕೆ ಅದಕ್ಕೇನಾದರೂ competition ಬಂದರೆ ಅವರಿಬ್ಬರೇ compete ಮಾಡುತ್ತಾರೆ ಬೇರೆಯವರಿಗೆ ಯಾರಿಗೂ ಬೇಡ ಎಂದು ಅಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ

ಶ್ರೀ ಎನ್ ಚೆಲುವರಾಯಸ್ವಾಮಿ – ಈಗ ಯಾರೋ ಹೇಳುತ್ತಿದ್ದರು ನೀವೇ ಹೇಳಿದರೇನೋ ಗೊತ್ತಿಲ್ಲ ನಮಗೆ ನೀವು ಹೇಳುತ್ತಿರುವುದು ನೋಡಿದರೆ ನಿಮ್ಮಿಂದಲೇ ಬಂದಿರಬೇಕು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಅಲ್ಲರೀ, ನಿಮಗೂ ಕೊಡೋಲ್ಲ ರೀ ನೀವೇನಾದರೂ ಅಪ್ಪಿತಪ್ಪಿ ನಾನೂ ಹಾಕಿಕೊಳ್ಳುತ್ತೇನೆಂದು ಹೇಳಿದರೆ ಒಂದೂ ಕೊಡುವುದಕ್ಕೆ ತಯಾರಿಲ್ಲ ಅವರವರೇ ಹಂಚಿಕೊಳ್ಳುತ್ತಾರೆ ಅದಕ್ಕಾಗಿ ಇಂಥ ಒಂದು ಸರ್ಕಾರ ಇವತ್ತು ಅಸ್ತಿತ್ವದಲ್ಲಿದೆ ಅದಕ್ಕೇ ನೀವೇನಾದರೂ ನಿಷ್ಪಕ್ಷಪಾತವಾಗಿ enquiry ಆಗಬೇಕಾದರೆ, CBI ಕಡೆಯಿಂದಲೇ enquiry ಆಗಬೇಕು ಇದನ್ನು ನಾವು ಹೇಳಿದ್ದಲ್ಲ ಜನಾರ್ಧನ ರೆಡ್ಡಿಯ ಮಾತು ಬಿಡಿ ಇವತ್ತು ಒಬ್ಬ ಮಂತ್ರಿಯೇ February 3ನೇ ತಾರೀಖು ಇವರು oath ತೆಗೆದುಕೊಂಡಾದ ಮೇಲೆ ಅವರು 22, 23ನೇ ತಾರೀಖಿಗೆ tour ಪ್ರಾರಂಭ ಮಾಡುತ್ತಾರೆ ಅಲ್ಲಿಂದ 6th March ಗೆ ಚನ್ನಿಗಪ್ಪರವರು ಒಂದು ದೀರ್ಘ report ಕಳುಹಿಸಿದರು ಅದರಲ್ಲಿ ಕೋಟಿಗಟ್ಟಲೆ loss ಆಗುತ್ತಿದೆ ಕೋಟಿಗಟ್ಟಲೆ ಲಾಸ್ ಆಗುತ್ತದೆ, ಈ ರೀತಿ ಆ ರೀತಿ ಎಂದು ಒಂದು ದೀರ್ಘವಾದ ವರದಿಯನ್ನು ಕೊಟ್ಟರು ಇದನ್ನು ಅವರು ಹೇಳಿದ ಮೇಲೆ, ಇವರ ಮಾತಿಗೆ ಉತ್ತರವಾಗಿ ಒಬ್ಬ ಎಂಎಲ್‌ಸಿ ಹೇಳಿದ ಮೇಲೆ, ಇದಕ್ಕೆ ನಾವು ಸಿಬಿಐ ತನಿಖೆಯಾಗಲಿ ಎಂದು ಕೇಳಿದ್ದು ತಪ್ಪೇ? ಅಥವಾ ಇದನ್ನು ಬಹಿರಂಬಪಡಿಸಿ ಎಂದು ಸಿಬಿಐಗೆ ರೆಫರ್ ಮಾಡಿ ಎಂದು ಹೇಳಿದ್ದು ತಪ್ಪೇ? ನಾವು ಎಲ್ಲರೂ ಕೂಡ ಇದರ ಬಗ್ಗೆ ಚಿಂತನೆ ಮಾಡಬೇಕು ಇದು ಕೇವಲ brush aside ಮಾಡುವುದಕ್ಕೆ, ನೀವು ಹೀಗೆ ಮಾಡಿದಿರೇನು? ಅವರು ಹೀಗೆ

ಮಾಡಿದಿರೇನು? ನಿಮಗೆ ಯಾರು ಹೇಳಿದರು? ಏಕೆ ಇಷ್ಟು ಆತುರ? ನೀವು ಇವತ್ತು ಒಂದು ಒಳ್ಳೆಯ ಕೆಲಸ ಮಾಡಿದ್ದರೆ ಜನ ಶಹಭಾಷಗಿರಿ ಕೊಡುತ್ತಿದ್ದರು ಆದರೆ, ಒಳ್ಳೆಯ ಕೆಲಸ ಮಾಡುವುದು ಬಿಟ್ಟು ಒಂದು ವರ್ಷದಲ್ಲಿ scandal ಮೇಲೆ scandal ನೀವೇ create ಮಾಡುವುದು ನಮ್ಮ ಕಡೆ ಒಂದು ಗಾದೆ ಮಾತಿದೆ ಅದನ್ನು ಇಲ್ಲಿ ಹೇಳಬೇಕೋ ಬೇಡವೊ?

ಶ್ರೀ ಎನ್ ಚೆಲುವರಾಯಸ್ವಾಮಿ – ಇವತ್ತು ಏನೇನು ಒಳ್ಳೆಯ ಕೆಲಸವಾಗುತ್ತಿದೆ ಅದರ ಬಗ್ಗೆ ನಿಮ್ಮ ಬಾಯಿನಲ್ಲಿ appreciate ಮಾಡಿದರೆ ಖಂಡಿತವಾಗಿ ಜನ ಜಾಸ್ತಿ ವಿಶ್ವಾಸ ಇಟ್ಟುಕೊಳ್ಳುತ್ತಾರೆ ಏಕೆಂದರೆ, ಒಳ್ಳೆಯ ಕೆಲಸ ಮಾಡಿದಾಗ ನೀವು ಒಳ್ಳೆಯದು ಎಂದು ಹೇಳದೇ ಇದ್ದರೆ ನಿಮಗೆ ಜನ ಹೇಗೆ ಸಾರ್ ನೀವು ವಿರೋಧ ಪಕ್ಷದ ನಾಯಕರಾಗಿ ಮಾತನಾಡುವುದು ಎಂದು ಕೇಳುತ್ತಾರೆ ಇಷ್ಟೊಂದು ಒಳ್ಳೆಯ ಬಜೆಟ್ ಕೊಟ್ಟು, ಅಭಿವೃದ್ಧಿ ಕೆಲಸ ಕೊಟ್ಟು, ಇಷ್ಟೆಲ್ಲಾ ಆರ್ಥಿಕವಾಗಿ ಅಭಿವೃದ್ಧಿಯಾಗಿರತಕ್ಕಂಥ ಒಳ್ಳೆಯ ಸರ್ಕಾರವನ್ನು ನೀವು appreciate ಮಾಡದಿದ್ದರೆ ಹೇಗೆ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – ಅಭಿವೃದ್ಧಿ ಎಂದರೆ, ಬರಿ ರಾಮನಗರ, ಹೊಳೆನರಸೀಪುರ, ಶಿವಮೊಗ್ಗ, ಶಿಕಾರಿಪುರ, ಮಾತ್ರ ಬೇರೆಕಡೆ ನೀವು ಅಭಿವೃದ್ಧಿ ಮಾಡಿಲ್ಲ ನೀವು ಕೇವಲ ನಿಮ್ಮ ಮಂತ್ರಿಗಳ ಊರಿನಲ್ಲಿ ಮಾಡಿದ್ದೀರಿ

ಶ್ರೀ ಆರ್ ಬಿ ತಿಮ್ಮಾಪುರ – ಸರ್ಕಾರ ನಿಮ್ಮ ಕಡೆಗೇ ಇತ್ತು, ಅವರು ಮಾಡಿಕೊಂಡರು, ನೀವು ಏಕೆ ಮಾಡಿಕೊಂಡಿಲ್ಲ? ಅವರು ಮಾಡಿದ ಹಾಗೆ ನೀವೂ ಮಾಡಬೇಕಾಗಿತ್ತು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಇವರು ಬಜೆಟ್ ಬಹಳ ಒಳ್ಳೆಯದು ಎಂದು ಹೇಳುತ್ತಾರೆ ನಾವೇನೂ ರೈತರಿಗೆ ಮಾಡಿಲ್ಲ ಅದನ್ನು ನೀವು ಹೇಗೆ ಸಹಿಸಿಕೊಳ್ಳುತ್ತೀರೋ ಗೊತ್ತಿಲ್ಲ ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಯಾರಾದರೂ ರೈತರಿಗೆ ಒಳ್ಳೆಯದು ಮಾಡಿದ್ದರೆ ಈ ಯಡಿಯೂರಪ್ಪ ಎಂದು ಬಡಿದುಕೊಂಡು ಹೇಳಿದರು ನೀವು ಜನತಾ ಪಾರ್ಟಿಯಲ್ಲಿದ್ದು ಒಂಬತ್ತು ವರ್ಷ ರಾಜ್ಯ ಆಳಿದಿರಿ,

ಈ ದೇಶಕ್ಕೆ ಮತ್ತು ರಾಜ್ಯಕ್ಕೆ ನೀವು ಏನೂ ಮಾಡಿಲ್ಲವೆ? ಅಂದರೆ, ನೀವು ಸುಮ್ಮನೆ ಇರಬೇಕಾದರೆ ನಿಮ್ಮ ಮೂಗು ಅವರ ಕೈಯಲ್ಲಿ ಇದೆ ಎಂದು ಅದರ ಅರ್ಥ ಅವರು ನಿಮ್ಮ ಮೂಗುದಾರ ಹಿಡಿದಿದ್ದಾರೆ ಅವರು ಕೂಡ ಹೀಗೆ ಹೇಳುತ್ತಾರೆ ಏನಾಗಿದೆ ಎಂದರೆ, ಧರ್ಮಸಿಂಗ್ ರವರು ಮುಖ್ಯಮಂತ್ರಿಯಾಗಿದ್ದಾಗ 11% ಬಡ್ಡಿ ಇದ್ದದ್ದನ್ನು 6% ಗೆ ತಂದರು ಕೇಂದ್ರ ಸರ್ಕಾರ, ಕೃಷಿ ಸಚಿವರು, ಇವರೆಲ್ಲರೂ ಕೂಡ ಕೃಷಿ ಚಟುವಟಿಕೆಗಳಲ್ಲಿ ಮತ್ತು ಕೋ–ಆಪರೇಟಿವ್ ಸೊಸೈಟಿಯ ದರಲ್ಲಿ 7% ಎಂದು ಮಾಡಿದಾಗ ಇವರು ಮಾಡಿದ್ದು ಎಷ್ಟು? ಕೇವಲ 4% ಅಂದರೆ 3% ಮಾತ್ರ ಇಳಿಸಿದ್ದು ನಾವು ಕೊಟ್ಟಿದ್ದು ಕನ್‌ಸೇಷನ್ 5% ರೈತರಿಗೆ ನಾವು ಜಾಸ್ತಿ ಕೊಟ್ಟೇವೋ ಇವರು ಜಾಸ್ತಿ ಕೊಟ್ಟರೂ ಇವರೇ ಹೇಳಿಕೊಳ್ಳಬೇಕು ಆದರೆ, ಏನಾಗಿದೆ ಎಂದರೆ, ಯಡಿಯೂರಪ್ಪನವರು ಇವತ್ತು ಹೇಳತಕ್ಕಂಥದ್ದು ನೋಡಿದರೆ, ನಿಮ್ಮದು ಏನೂ ನಡೆಯಲ್ಲವೆಂದು ಅದರ ಅರ್ಥ ಏಕೆಂದರೆ, ಸಮರ್ಥನೆ ಮಾಡಿಕೊಳ್ಳುವುದಕ್ಕೆ ನಿಮ್ಮಲ್ಲಿ ಇಲ್ಲ

ಶ್ರೀ ಎನ್ ಚೆಲುವರಾಯಸ್ವಾಮಿ – ನಾವು ಜಗಳ ಆಡುವುದಿಲ್ಲ ಬಿಡಿ

ನಿಲುವುಗಳು ಅವರ ಮೂಲ ನಿಲುವುಗಳಿಗೆ ಬದ್ಧರಾಗಿರುವುದಿಲ್ಲ ಅವರು ಸಹಕಾರವನ್ನು ಕೊಡಬೇಕಾಗಿತ್ತು, ಅವರು ಸಹಕಾರವನ್ನು ಕೊಡಲಿಲ್ಲವೆನ್ನುವಂತಹ ಸಂದರ್ಭದಲ್ಲಿ ನಾವು ಅಂದುಕೊಂಡೆವು, ಒಂದು ವೇಳೆ ನಾವು ಮಾಡುವುದಿಲ್ಲ ವೆಂಬುದು ಒಂದೇ ಅಲ್ಲ, ಮರುದಿವಸದ ಒಂದು ಪತ್ರಿಕಾ ಹೇಳಿಕೆಯನ್ನು ಸಹ ಓದಬಹುದು ಅವರು ಹೇಳಿದರು ಒಂದು ವೇಳೆ ಸರ್ಕಾರ ಅವಧಿಯನ್ನು ವಿಸ್ತರಿಸಿ ನನ್ನನ್ನೆ ಅಧ್ಯಕ್ಷರನ್ನಾಗಿ ಮುಂದುವರಿಯಬೇಕು ಎಂದು ಹೇಳಿದರೂ ಕೂಡ ನಾನು ಆ ಪದವಿಯನ್ನು ನಿರಾಕರಿಸುತ್ತೇನೆಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು ಆ ಅನಿವಾರ್ಯ ಸ್ಥಿತಿಯಲ್ಲಿ ಸರ್ಕಾರ ತಯಾರಾಗಿ ಆ ನಿರ್ಧಾರವನ್ನು ತೆಗೆದುಕೊಂಡೆವು ಅದರಲ್ಲಿ ಸೆಕ್ಷನ್ 7 ಹೇಳುತ್ತದೆ "Whenever it feels necessary it is not necessary" ಎನ್ನುವುದು ಬಂದಾಗ ಅದನ್ನು ಮಾಡಬಹುದು ಎಂಬುದರ ಕೆಳಗಡೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ ಅದರ ಜೊತೆಗೆ ಲೋಕಾಯುಕ್ತಕ್ಕೆ ಈ ಜವಾಬ್ದಾರಿಯನ್ನು ವಹಿಸಿಕೊಟ್ಟೆವು Investigation ಅನ್ನೇ ಮಾಡಲಿಲ್ಲ ಎನ್ನುವುದಾಗಿದ್ದರೆ ಏನು ಮುಚ್ಚಿಕೊಳ್ಳುವಂತಹದ್ದು ಇದೆ, ಅದನ್ನು ಕಣ್ಣೋರೆಸುವ ತಂತ್ರಗಾರಿಕೆಯನ್ನು ಮಾಡಿ ಆಯೋಗವನ್ನು ರಚನೆ ಮಾಡಿದರು ಅದನ್ನು ಮುಕ್ತಾಯಗೊಳಿಸಿದರು ಈಗ ಏನೂ ಮಾಡಲಿಲ್ಲವೆನ್ನುವಂತಹ ಅಪವಾದಕ್ಕೆ ನಾವು ಗುರಿಯಾಗಬಾರದು, ಅದು ಯಾವ ತರಹದ ಪರೀಕ್ಷೆ ಇದ್ದರೂ ಕೂಡ ನಾವು ತಯಾರಿದ್ದೇವೆನ್ನುವಂತಹ ಕಾರಣಕ್ಕಾಗಿಯೇ ಲೋಕಾಯುಕ್ತಕ್ಕೆ ಈ ಜವಾಬ್ದಾರಿಯನ್ನು ಕೊಟ್ಟಿದ್ದೇವೆ ಅವರು ಹೇಳಿದಂತೆ ಆಯೋಗಕ್ಕೆ ಕ್ರಮ ಕೈಗೊಳ್ಳುವಂತಹ charge sheet ಹಾಕುವಂತಹ ಅಧಿಕಾರವಿಲ್ಲ, ಅದು ಸರ್ಕಾರಕ್ಕೆ ಹೋಗಬಹುದು ಎಂದು ಆದರೆ ಈಗ ಆಯೋಗಕ್ಕೆ ಲೋಕಾಯುಕ್ತಕ್ಕೆ ಕೊಟ್ಟಿರುವುದರಿಂದ ನೇರವಾಗಿ charge sheet ನ್ನು ಹಾಕಬಹುದು ನಾನು ಆಗಲೆ ಮಾನ್ಯ ರಮೇಶ್ ಕುಮಾರ್‌ರವರಿಗೆ ಹೇಳಿದಂತೆ ಆ ಸಂದರ್ಭದಲ್ಲಿ ಇತ್ತೀಚೆಗೆ ಸಬರ್‌ವಾಲ್‌ರವರು Supreme Court judgement ನಲ್ಲಿ ಈ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಿರುವುದು ಏನಿದೆ, ಅಧಿಕಾರದ ವ್ಯಾಪ್ತಿಯನ್ನು ಮೀರಿರುವಂತಹ ಕೆಲಸವಾಗಿರುವುದರಿಂದ ಸರ್ಕಾರದ ಒಪ್ಪಿಗೆಯನ್ನು ಪಡೆಯುವಂತಹ ಅವಶ್ಯಕತೆ

ಇಲ್ಲವೆಂದು ಹೇಳಿ ಈಗಾಗಲೆ ಅನೇಕ ಕೇಸುಗಳನ್ನು ಅವರು ಕೋರ್ಟಿನಲ್ಲಿ ದಾಖಲು ಮಾಡಿದ್ದಾರೆ ಈ ಹಿನ್ನೆಲೆಯಲ್ಲಿ ಅವರಿಗೆ ಸಂಪೂರ್ಣವಾದ ಅಧಿಕಾರವಿದೆ ಅವರಿಗೆ ನಾವು ಸಂಪೂರ್ಣವಾದ ಅಧಿಕಾರವನ್ನು ಕೊಡುವುದಕ್ಕೆ ನಾವು ತಯಾರು ಇದ್ದೇವೆ ಅವರೆಲ್ಲರಿಗಿಂತಲೂ ಹೆಚ್ಚಾಗಿ ನಾವು ಇದರಿಂದ ಮುಕ್ತರಾಗಬೇಕೆನ್ನುವಂತಹ ಬಯಕೆ ನಮಗೆಲ್ಲರಿಗೂ ಹೆಚ್ಚು ಕಾತುರವಾಗಿದೆ ಅಪವಾದದಿಂದ ಮುಕ್ತವಾದಷ್ಟು ಒಳ್ಳೆಯುದು ನನ್ನ ಮಟ್ಟಿಗೆ ಹೇಳುವುದಾಗಿದ್ದರೆ ವಿರೋಧಪಕ್ಷದ ನಾಯಕರಾಗಿರಬಹುದು, ಆಪಾದನೆಯನ್ನು ಮಾಡಿರುವಂತಹ ಜನಾರ್ಧನ ರೆಡ್ಡಿಯವರಾಗಿರಬಹುದು, ಯಾವುದೇ ತರಹವಾಗಿರುವಂತಹ ತನಿಖೆಯನ್ನು ಕೂಡ ಮಾಡಿಸಬಹುದು ನಾನು ಅದಕ್ಕೆ ತಯಾರಾಗಿದ್ದೇನೆ

ಶ್ರೀ ಎ ಟಿ ರಾಮಸ್ವಾಮಿ – ಒಂದು clarification ನಾವು ಕೇಳಬೇಕು ಈಗ ಯು ಎಲ್ ಭಟ್‌ರವರು ಒಂದು ಆಯೋಗದ ನ್ಯಾಯಾಧೀಶರಾಗಿ ಕೆಲವು ಖಾಸಗಿ ಮೊಕದ್ದಮೆಗಳಲ್ಲಿ ಹೈಕೋರ್ಟಿನಲ್ಲಿ ಭಾಗವಹಿಸುತ್ತಿದ್ದರು ಆ ರೀತಿಯಾಗಿ ಭಾಗವಹಿಸುವುದಕ್ಕೆ ಅವರಿಗೆ ಅಧಿಕಾರವಿದೆಯೇ? ಅಷ್ಟೊಂದು ಮಹತ್ತರವಾದಂತಹ ಜವಾಬ್ದಾರಿಕೆ ಹೊತ್ತಿರುವಂತಹ ಸಂದರ್ಭದಲ್ಲಿ ಆ ಸಮಯವನ್ನು ಬದಿಗೊತ್ತಿ ವರದಿಯನ್ನು ತಯಾರು ಮಾಡುವುದರಲ್ಲಿ, ವಿಚಾರಣೆಯನ್ನು ಮಾಡುವುದನ್ನು ಬಿಟ್ಟು ಖಾಸಗಿ ಮೊಕದ್ದಮೆಗಳನ್ನು ತೆಗೆದುಕೊಂಡು ಅಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶವಿತ್ತಾ? ಅದಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟಿದೆಯೇ? ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದರೆ ಹೇಗೆ ಕೊಟ್ಟಿದ್ದೀರಿ? ಹಾಗಾದರೆ ಕೊಟ್ಟುಬಿಡಿ Law Secretary, Advocate General, Public Prosecutor, ಅವರುಗಳು ಹೋಗಿ private practice ಮಾಡಲಿ ಮತ್ತೇ ನೀವು ಇದನ್ನು ಏಕೆ ಕೊಟ್ಟಿದ್ದೀರಿ? ಕೊಡದೆ ಇದ್ದರೆ ಹೋಗಿ ಅವರು ಯಾವಾಗ practice ಮಾಡಿದ್ದರು, ಅವರಿಗೆ ಮೊದಲು ಆಸಕ್ತಿ ಇರಲಿಲ್ಲವೇ? ಅದರ ಬಗ್ಗೆ ಸ್ವಲ್ಪ ಸ್ಪಷ್ಟತೆಯನ್ನು ಕೊಡಬೇಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ರಾಮಸ್ವಾಮಿಯವರು ಹೇಳಿದಂತಹ ವಿಚಾರದಲ್ಲಿ ಸರ್ಕಾರಕ್ಕೆ ಈ ವಿಷಯದಲ್ಲಿ ಯಾವುದೇ ಪತ್ರವ್ಯವಹಾರವಾಗಿಲ್ಲ

ಸರ್ಕಾರ ಇಂತಹ ಪರವಾನಗಿಯನ್ನು ಕೊಟ್ಟಿರುವುದಿಲ್ಲ ಆಯೋಗ ಪೂರ್ಣಾವಧಿಯ ಕೆಲಸ ಆ ಸಂದರ್ಭದಲ್ಲಿ ತಮ್ಮ ಹಿಂದೆ ಇರತಕ್ಕಂಥ ಕೆಲವು ವ್ಯಾಜ್ಯಗಳ ಬಗ್ಗೆ ಸುಮಾರು ಐದಾರು ದಿವಸಗಳ ಕಾಲ ವಾದ ಮಂಡಿಸಿರುವ ಮಾಹಿತಿ ಗೊತ್ತಿದೆ, ಅಷ್ಟು ಮಾತ್ರ ನಮಗೆ ಆ ಮಾಹಿತಿಯ ಸತ್ಯಾಸತ್ಯತೆಗಳು ನಮಗೆ ಗೊತ್ತಿಲ್ಲ, ಮತ್ತು ತಾವು ಹೇಳಿದಂತೆ ಒಂದು ಕಾನೂನು ಇಲ್ಲದಿದ್ದರೆ ಕೂಡ the probity requires that they are not supposed to argue an to take up any other person

6 ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಅಭಾವ

272 (1957) ಶ್ರೀ ಮೋಹನ್ ಪಿ ಸಿ, ಎಂಎಲ್ಎ (ಚಿಕ್ಕಪೇಟೆ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳು ಸೇರಿದಂತೆ ಪಾಲಿಕೆ ವ್ಯಾಪ್ತಿಯಲ್ಲಿ ಬರಲಿರುವ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ,

ಆ) ಹಾಗಿದ್ದಲ್ಲಿ, ಯೋಜನೆಯ ಅಂದಾಜು ವೆಚ್ಚ ಎಷ್ಟು,

ಇ) ಈ ಯೋಜನೆಯಡಿ ಈಗಾಗಲೇ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳೇನು,

ಈ) ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಪ್ರದೇಶಗಳನ್ನು ಗುರುತಿಸಲಾಗಿದೆಯೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳು ಸೇರಿದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರಲಿರುವ

ಬೇಸಿಗೆಯ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವ ಸಲುವಾಗಿ ತಾತ್ಕಾಲಿಕ ಮತ್ತು ದೀರ್ಘಕಾಲಿಕ ಕ್ರಿಯಾ ಯೋಜನೆಗಳನ್ನು ತಯಾರಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ

ಆ) **ಈ ಯೋಜನೆಯ ಅಂದಾಜು ವೆಚ್ಚ**

ರೂ ಲಕ್ಷಗಳಲ್ಲಿ

ಬ್ಯಾಟರಾಯನಪುರ ವಲಯ	–	ರೂ 75 00
ರಾಜರಾಜೇಶ್ವರಿನಗರ ವಲಯ	–	ರೂ 220 42
ದಾಸರಹಳ್ಳಿ ವಲಯ	–	ರೂ 195 00
ಮಹದೇವಪುರ	–	ರೂ 200 00
ಬೊಮ್ಮನಹಳ್ಳಿ	–	ರೂ 150 00

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2007ರ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವ ಸಲುವಾಗಿ ತಾತ್ಕಾಲಿಕ ಮತ್ತು ದೀರ್ಘಕಾಲಿಕ ಕ್ರಿಯಾ ಯೋಜನೆಗಳನ್ನು ತಯಾರಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ ಪ್ರಸ್ತುತ ತಾತ್ಕಾಲಿಕ ಕ್ರಿಯಾ ಯೋಜನೆಗಳೆಂದರೆ,

1 ಹೊಸದಾಗಿ ಕೊಳವೆ ಬಾವಿ ಕೊರೆಯುವುದು

2 ಹಾಲಿ ಇರುವ ಕೊಳವೆ ಬಾವಿಗಳನ್ನು ಸ್ವಚ್ಛಗೊಳಿಸುವುದು

3 ಹಾಲಿ ಕೊರೆದಿರುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಮತ್ತು ಜೋಡಣೆ ಸಾಮಗ್ರಿಗಳನ್ನು ಅಳವಡಿಸಿ, ವಿದ್ಯುದೀಕರಣ ಮಾಡುವುದು

4 ಹಾಲಿ ಇರುವ ಕೊಳವೆ ಬಾವಿಗಳಿಗೆ ಹೆಚ್ಚುವರಿಯಾಗಿ ಜಿ ಐ ಪೈಪ್ ಕೇಬಲ್ ವೈರ್ ಅಳವಡಿಸುವುದು

5 ಹಾಲಿ ಇರುವ ಕೊಳವೆ ಬಾವಿಗಳ ಸಬ್‌ಮರ್ಸಿಬಲ್ ಪಂಪ್‌ಸೆಟ್ ಮತ್ತು ಕೈ ಪಂಪ್‌ಗಳನ್ನು ಸುಸ್ಥಿತಿಯಲ್ಲಿಡುವುದು

6 ಪೈಪ್ ಲೈನ್‌ಗಳ ವಿಸ್ತರಣೆ, ದುರಸ್ತಿ ಮತ್ತು ನಿರ್ವಹಣೆ

7 ಹಾಳಾದ/ಶಿಥಿಲಗೊಂಡ ಪಂಪ್‌ಸೆಟ್ ಮತ್ತು ಇತರ ಜೋಡಣೆ ಸಾಮಗ್ರಿಗಳನ್ನು ಬದಲಿಸಿ, ಹೊಸದಾಗಿ ಅಳವಡಿಸುವುದು

8 ನೀರಿನ ತೀವ್ರ ಅಭಾವವಿರುವ ಪ್ರದೇಶಗಳನ್ನು ಗುರುತಿಸಿ, ಟ್ಯಾಂಕರ್ ಮುಖಾಂತರ ಕುಡಿಯುವ ನೀರಿನ ಸರಬರಾಜು ಮಾಡುವುದು

9 ಕೆಲವು ಭಾಗಗಳಿಗೆ ಬೆಂಗಳೂರು ಜಲಮಂಡಳಿವತಿಯಿಂದ ಸಗಟು ಜಲ ಪೂರೈಕೆ ಪಡೆಯಲಾಗುವುದು

ಈ) ಕುಡಿಯುವ ನೀರಿನ ಸಮಸ್ಯೆ ತಲೆದೋರಬಹುದಾದ ಪ್ರದೇಶಗಳನ್ನು ಗುರುತಿಸಲಾಗಿದ್ದು, ಈ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ

(ಸದರಿ ಪ್ರಶ್ನೆಗೆ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಗೃಹ ಸಚಿವರು ಉತ್ತರಿಸಿದರು)

ಶ್ರೀ ಪಿ ಸಿ ಮೋಹನ್ – ಮಾನ್ಯ ಅಧ್ಯಕ್ಷರೇ, ಉತ್ತರವನ್ನೇನೋ ಒದಗಿಸಿದ್ದಾರೆ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು short term ಮತ್ತು long term plan ಅನ್ನು ಸಿದ್ಧಪಡಿಸಿದ್ದೇವೆಂದು ಹೇಳುತ್ತಾರೆ ಆದರೆ ಅದು ಯಾವುದು ಇನ್ನೂ implement ಆಗಿಲ್ಲ, ಈಗಾಗಲೇ ಬೆಂಗಳೂರು ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ ಏನಾಗಿದೆ ಎಂದರೆ ಇವತ್ತು ಪ್ಲಾನ್ ಸಿದ್ಧಪಡಿಸಿ ಇಂಪ್ಲಿಮೆಂಟ್ ಮಾಡುವುದು ಯಾವಾಗ? ನಮಗೆ ಸಮಸ್ಯೆಯಿರುವುದೇ ಮಾರ್ಚ್, ಏಪ್ರಿಲ್, ಮೇನಲ್ಲಿ ಇವರು ಮಳೆಗಾಲದಲ್ಲಿ ಮಾಡುತ್ತಾರೆಯೇ ಏನು ಎಂಬುದನ್ನು ನಾನು ಕೇಳಬಯಸುತ್ತೇನೆ ಏಕೆಂದರೆ ಈಗ ಸಿದ್ಧಪಡಿಸಿರುವುದನ್ನು war footing basis ನಲ್ಲಿ ಈಗಲೇ ಅವರು ಇಂಪ್ಲಿಮೆಂಟ್ ಮಾಡಿದರೆ ಒಳ್ಳೆಯದು ಎಂದು ಹೇಳುತ್ತಾ, ಮತ್ತು ಇನ್ನೊಂದು ಏನು ಹೇಳಿದ್ದಾರೆಂದರೆ ಇಂಪ್ಲಿಮೆಂಟ್ ಮಾಡುವುದರಲ್ಲಿ ಹೊಸದಾಗಿ ಕೊಳವೆಬಾವಿಗಳನ್ನು ನಿರ್ಮಿಸುತ್ತೇವೆಂದು ಹೇಳುತ್ತಾರೆ ಈಗಾಗಲೇ existing ಇರುವಂಥ ಕೊಳವೆಬಾವಿಗಳಿಗೆ ಬಿಲ್ ಕೂಡ ಕಟ್ಟುತ್ತಿಲ್ಲ BWSSB ಅವರನ್ನು

ಕೇಳಿದರೆ Corporation ನವರ ಮೇಲೆ ಹೇಳುತ್ತಾರೆ, Corporation ನವರನ್ನು ಕೇಳಿದರೆ BWSSB ಯವರ ಮೇಲೆ ಹೇಳುತ್ತಾರೆ ಈ ರೀತಿ ಒಬ್ಬರ ಮೇಲೆ ಇನ್ನೊಬ್ಬರು ಹಾಕಿ ಬಹಳಷ್ಟು ತೊಂದರೆಗಳಾಗುತ್ತಿವೆ ಇದನ್ನು ಯಾವಾಗ ಬಗೆಹರಿಸುತ್ತಾರೆಂದು ಕೂಡ ಹೇಳಬೇಕು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ಬೃಹತ್ ಬೆಂಗಳೂರಿನ ಈ ಒಂದು ಸಂದರ್ಭ ಬಂದಾಗ ಪಾಲಿಕೆಯ ವ್ಯಾಪ್ತಿಗೆ ಇವೆಲ್ಲಾ ಸೇರ್ಪಡೆಗಳಾಗುತ್ತವೆ, ತಮಗೂ ಕೂಡ ಗೊತ್ತಿದೆ, ಬ್ಯಾಟರಾಯನಪುರ ವಲಯಕ್ಕೆ 75 ಲಕ್ಷ ರೂ ರಾಜರಾಜೇಶ್ವರಿ ನಗರದ ವಲಯಕ್ಕೆ 220 ಲಕ್ಷ, ದಾಸರಹಳ್ಳಿ ವಲಯಕ್ಕೆ 195 ಲಕ್ಷ ರೂ ಮಹದೇವಪುರ ವಲಯಕ್ಕೆ 200 ಲಕ್ಷ, ರೂ ಬೊಮ್ಮನಹಳ್ಳಿ ವಲಯಕ್ಕೆ 150 ಲಕ್ಷ ರೂ ಗಳನ್ನು ಕೊಡುವುದಲ್ಲದೆ ಕ್ರಿಯಾ ಯೋಜನೆಯನ್ನು ತಯಾರು ಮಾಡಿದ್ದೇವೆ ಅದರ ಜೊತೆಗೆ 5 00 ಕೋಟಿ ರೂ ಗಳನ್ನು ಬರಗಾಲದ ಕಾಮಗಾರಿಯ ಕೆಳಗೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಿಕ್ಕೆ ಬಿಡುಗಡೆ ಮಾಡಿದ್ದೇವೆ ಈಗಾಗಲೇ ನೀರಿನ ತೀವ್ರ ಅಭಾವವಿರುವಂಧದ್ದರ ಕಡೆಗೆ 50 ಟ್ಯಾಂಕರ್‌ಗಳ ಮೂಲಕ ಪ್ರತಿ ದಿವಸ ಒಂದೊಂದು ಟ್ಯಾಂಕರ್ ಐದಾರು ಬಾರಿ ಆ ನೀರನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತಿದೆ, ಪ್ರತಿಯೊಂದು ಟ್ಯಾಂಕರ್ ಕೂಡ 6,000 ಲೀಟರ್ ಕೆಪಾಸಿಟಿ ಇರತಕ್ಕಂಧದ್ದು ಇದೆ, ಕನಿಷ್ಠ ದಿನವೊಂದಕ್ಕೆ 100 ಲೀಟರ್‌ನಷ್ಟು FVCD ಪ್ರಕಾರ ಕೊಡಬೇಕೆಂಬ ಗುರಿ 055 ಆಗಿದ್ದರೂ ಕೂಡ ಅದರ ಪ್ರಯತ್ನ ಮಾಡುತ್ತಿದ್ದೇವೆ ಆ ಕಾರಣಕ್ಕಾಗಿ ಈಗ ಕುಡಿಯುವ ನೀರಿನ ದುಸ್ಥಿತಿ ಇದೆ, ಖಂಡಿತವಾಗಿ ಸರ್ಕಾರ ತೀವ್ರವಾದ ಗಮನ ಕೊಟ್ಟಿದೆ, ತಿಪ್ಪಗೊಂಡನಹಳ್ಳಿ ಜಲಾಶಯ ಅದನ್ನು ಪಂಪ್ ಮಾಡತಕ್ಕಂಧದ್ದು ಕಡಿಮೆಯಾಗಿ ನಿಲ್ಲಿಸಿದ್ದೇವೆ ಮತ್ತೆ ಇನ್ನೊಂದು, ಮಾನ್ಯ ಮಾಧುಸ್ವಾಮಿಗಳು ಸಹ ಪ್ರಸ್ತಾಪ ಮಾಡಿದರು, ಕಾವೇರಿ ಜಲವಿವಾದದ ಸಂದರ್ಭದಲ್ಲಿ transient valley zones ವಿಷಯದಲ್ಲಿ ಮಾತನಾಡಿ ಬೆಂಗಳೂರು ನಗರ 1/3ನೇ ಅಂಶದ ಭಾಗ ಈ ಕಣಿವೆಯಲ್ಲಿ ಬರುತ್ತಿದೆ, ಕೃಷ್ಣಾ ಕಣಿವೆಯನ್ನು ಬಿಟ್ಟು ಉಳಿದ ಕಣಿವೆಗೆ ಬರುತ್ತದೆ, ಕಾವೇರಿ ಕಣಿವೆಗೆ ಬರುವುದಿಲ್ಲ, ಆದ್ದರಿಂದ ನೀವು ಅಷ್ಟು ನೀರು ಕೊಡುವ ಅವಶ್ಯಕತೆ ಇಲ್ಲವೆಂದು ತಿರಸ್ಕಾರ ಮಾಡಿದ್ದು

ಕೂಡಿದೆ, ಈ ಎಲ್ಲಾ ಹಿನ್ನೆಲೆಯಲ್ಲಿ ಸರ್ಕಾರ ಪೂರ್ವ ಸಿದ್ಧತೆಯನ್ನು ಎಲ್ಲಾ ಮಾಡಿಕೊಂಡಿದೆ, ಖಂಡಿತವಾಗಿಯೂ ತಾವು ವ್ಯಕ್ತ ಮಾಡಿರುವ ಆತಂಕದ ಕಡೆಗೆ ಸರ್ಕಾರ ಸಂಪೂರ್ಣ ಗಮನ ಕೊಟ್ಟು ಕ್ರಮ ತೆಗೆದುಕೊಳ್ಳುತ್ತದೆ

ಶ್ರೀ ಪಿ ಸಿ ಮೋಹನ್ – ನನಗೆ ಬಂದಿರುವ ಮಾಹಿತಿ ಪ್ರಕಾರ ತೆರೆಕಾಡನಹಳ್ಳಿ ಪಂಪಿಂಗ್ ಸ್ಟೇಷನ್‌ಗೆ ಪವರ್ ಸಪ್ಲೈ ಪ್ರಾಬ್ಲಮ್ ಇದೆಯೆಂದು ಹೇಳುತ್ತಾರೆ ಇದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವಾಗ ಪರಿಹಾರ ಮಾಡುತ್ತೀರಿ? uninterrupted power ಕೊಡಲಿಕ್ಕಾಗುತ್ತದೆಯೇ ಎಂದು ಕೇಳಲಿಚ್ಛಿಸುತ್ತೇನೆ ಇನ್ನೊಂದು ಪ್ರಶ್ನೆ, ಈಗ ಬ್ಯಾಟರಾಯನಪುರಕ್ಕೆ 75 00 ಲಕ್ಷ ಹಣವನ್ನು ಕೊಟ್ಟಿದ್ದೀರಿ, ಇದು short term ಇರುವುದನ್ನು ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ? ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂದು ಕೇಳಬಯಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ – ಈಗಾಗಲೇ ಕ್ರಿಯಾ ಯೋಜನೆಯನ್ನು ತಯಾರು ಮಾಡಿರುವುದರಲ್ಲಿ ದೀರ್ಘಾವಧಿಯಾಗಿರತಕ್ಕಂಥ ಕಾರ್ಯಕ್ರಮ, ತತ್‌ಕ್ಷಣದಲ್ಲಿ ಮಾಡಬೇಕಾದಂಥ ಕಾರ್ಯಕ್ರಮ ಎರಡೂ ಇಟ್ಟುಕೊಂಡಿದ್ದೇವೆ ಅದರ ಪ್ರಕಾರ energisation ಆಗದೇ ಇರುವಂಥ ಪ್ರದೇಶಗಳಿಗೆ ಹಣ ಕಟ್ಟದಿದ್ದರೆ ಹಣ ಪಡೆದು ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕೆಂದು ಮಾಡಿದ್ದೇವೆ ತಾವು ಹೇಳಿದಂಥ ಗ್ರಾಮದ ವಿಚಾರವನ್ನು ಅಧಿಕಾರಿಗಳು ಈಗಾಗಲೇ ನಿರ್ಧಾರ ಪಡಿಸಿದ್ದಾರೆ, ಖಂಡಿತವಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಹಣವನ್ನು ಸಹ ಬಿಡುಗಡೆ ಮಾಡುತ್ತೇವೆ

ಉಪಾಧ್ಯಕ್ಷರು – ಶ್ರೀಮತಿ ಟಿ ಭಾಗೀರಥಿಯವರ ಪ್ರಶ್ನೆ 273ಕ್ಕೆ ಮಂತ್ರಿಗಳು 15 ದಿವಸಗಳ ಸಮಯಾವಕಾಶ ಕೇಳಿದ್ದಾರೆ

ಶ್ರೀಮತಿ ಟಿ ಭಾಗೀರಥಿ – ಸನ್ಮಾನ್ಯ ಉಪಾಧ್ಯಕ್ಷರೇ, ನಾನೀಗ ಸರ್ಕಾರ ಇದೆಯೇ, ಇಲ್ಲವೇ ಎಂದು ಕೇಳಬೇಕಾಗುತ್ತದೆ, ಗೊತ್ತಾಗಬೇಕು ಏಕೆಂದರೆ ಈ ಯೋಜನೆ ಬಗ್ಗೆ ಸುಮಾರು ಎರಡೂವರೆ ವರ್ಷಗಳಿಂದ

ಶ್ರೀ ಧರ್ಮಸಿಂಗ್ – ಸಚಿವರು ಕಾಲಾವಕಾಶ ಕೇಳಿದ್ದಾರೆ, ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿದ್ದಾರೆ, ಅವರು ಉತ್ತರಿಸಲಿ 15 ದಿವಸಗಳ ಕಾಲಾವಕಾಶ ಕೇಳಿದ್ದಾರಂತೆ ಅದು ಅಷ್ಟು ಸರಿಯಲ್ಲ, ತಾವೇ ಉತ್ತರ ಕೊಡಬಹುದು

ಶ್ರೀ ಎಂ ಪಿ ಪ್ರಕಾಶ್(ಗೃಹ ಸಚಿವರು) – ಲೋಕೋಪಯೋಗಿ ಇಲಾಖೆಯವರಿಗೆ ಇಲ್ಲಿ ಬಹಳ ವಿವರಗಳನ್ನು ಕೇಳಿರುವ ಕಾರಣಕ್ಕೆ ಉತ್ತರ ಕೊಡಲಾಗುತ್ತಿಲ್ಲ ಉದಾಹರಣೆಗೆ (ಅ) ಕೂಡ್ಲಿಗಿ ತಾಲ್ಲೂಕಿನಲ್ಲಿ ಬಳ್ಳಾರಿ ಜಿಲ್ಲಾ ವಿಶೇಷ ಪ್ಯಾಕೇಜಿನಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಯಾವುವು? (ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ, ಇದರಲ್ಲಿ ಮುಗಿದಿರುವ ಹಾಗೂ ಬಾಕಿಯಿರುವ ಕಾಮಗಾರಿಗಳ ಸಂಖ್ಯೆ ಎಷ್ಟು, (ಇ) ಈ ಕಾಮಗಾರಿಗಳಿಗಾಗಿ ಇದುವರೆಗೂ ಖರ್ಚು ಮಾಡಲಾಗಿರುವ ಹಣವೆಷ್ಟು ? ಎಂದು ಕೇಳಿದ್ದೀರಿ, ಇದಕ್ಕೆ ವಿವರಗಳನ್ನು ಕೊಡಬೇಕು ತಮಗೂ ಗೊತ್ತಿದ್ದು ಅವರಿಗೂ ಕೂಡ ಗೊತ್ತಿದೆ, ನಮ್ಮಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿದ್ದು ಹಾಗೇ ಉಳಿದಿದೆ ಜಿಲ್ಲಾ ಪಂಚಾಯತ್‌ನಲ್ಲಿ ಕಳೆದ ಬಾರಿ ಧರಂಸಿಂಗ್‌ರವರು ಮುಖ್ಯಮಂತ್ರಿಗಳಿದ್ದಾಗ 10 50 ಕೋಟಿ ರೂ ಬಿಡುಗಡೆಯಾಗಿತ್ತು ಲೋಕೋಪಯೋಗಿ ಇಲಾಖೆಯಿಂದ ಇವತ್ತಿನವರೆಗೂ ನಮ್ಮ ಡಿವಿಷನ್‌ಗೆ ಬಿಡುಗಡೆಯಾಗಬೇಕಾದದ್ದು ಮೂರುವರೆ ಕೋಟಿ ರೂ ಗಳಿವೆ ಬಳ್ಳಾರಿ ಡಿವಿಷನ್‌ಗೆ ಏಳೂವರೆ ಕೋಟಿ ಕೊಡಬೇಕಾಗಿದೆ, ಆ ವಿವರಗಳು ಕರಾರುವಕ್ಕಾಗಿ ಇರಬೇಕೆನ್ನುವ ದೃಷ್ಟಿಯಿಂದ ಟೈಮ್ ಕೇಳಿದ್ದಾರೆ, ಅವತ್ತು ಅಧಿವೇಶನ ಇರುವುದಿಲ್ಲ, ಪತ್ರ ಬರೆದು ಕಳುಹಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ :– ಈ ಪ್ರಶ್ನೆ ಏನಿದೆ, ಮುದ್ದತ್ ಕೇಳುವಂಥಾದ್ದೇನಿದೆ, ದಯವಿಟ್ಟು ಹೇಳಿ, ಸರಳ ಪ್ರಶ್ನೆಯಿದೆ ಇದು (ಅ) ಕೂಡ್ಲಿಗಿ ತಾಲ್ಲೂಕಿನಲ್ಲಿ ಬಳ್ಳಾರಿ ಜಿಲ್ಲಾ ವಿಶೇಷ ಪ್ಯಾಕೇಜಿನಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಯಾವುವು? ನಿಮ್ಮ ಕೈಯಲ್ಲಿ ಅಂಕಿ ಇವೆ, (ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ, ಇದರಲ್ಲಿ ಮುಗಿದಿರುವ ಹಾಗೂ ಬಾಕಿಯಿರುವ ಕಾಮಗಾರಿಗಳ ಸಂಖ್ಯೆ ಎಷ್ಟು, (ಇ) ಈ ಕಾಮಗಾರಿಗಳಿಗಾಗಿ ಇದುವರೆಗೂ ಖರ್ಚು ಮಾಡಲಾಗಿರುವ ಹಣವೆಷ್ಟು ? ಏನು ಭಾರಿ ಮಾಹಿತಿ ಇದೆ, ಇಡೀ ರಾಜ್ಯದ್ದು

ಕೇಳಿದ್ದಾರೆಯೇ ಅವರು, ಒಂದು ತಾಲ್ಲೂಕಿನದು ಕೇಳಿದ್ದಾರೆ ದಯವಿಟ್ಟು ಹೇಳಿ ಇದರಲ್ಲಿ ಮುದ್ದತ್ ಕೇಳುವುದೇನಿದೆ, ನಿಮ್ಮ ಅಧಿಕಾರಿಗಳು ಇದಕ್ಕೆ 15 ದಿವಸಗಳು ಬೇಕು ಎಂದು ಕೇಳುತ್ತಾರೆ ಇದು ಸರಿಯೇ?

ಶ್ರೀ ಡಿ ಆರ್ ಪಾಟೀಲ್ – ಈಗ ನಿಮ್ಮ ಹತ್ತಿರ ಮಾಹಿತಿ ಇರಲಿಕ್ಕಿಲ್ಲ, 2ನೇ ತಾರೀಖು ಉತ್ತರ ಕೊಡುತ್ತೇವೆಂದು ಹೇಳಿಬಿಡಿ

ಶ್ರೀ ಎಸ್ ಎಸ್ ಪಾಟೀಲ್ – ಹೇಳಿ, ಈ ಪ್ರಶ್ನೆ ಉಳಿಯಲಿ,

ಶ್ರೀಮತಿ ಟಿ ಭಾಗೀರಥಿ – ಇದಕ್ಕೆ ನಾನು ಒಪ್ಪುವುದಿಲ್ಲ, ಎರಡೂವರೆ ವರ್ಷಗಳಿಂದ ಈ ವರದಿಗಳು ಬಂದು ಸರ್ಕಾರದ ಮಟ್ಟದಲ್ಲಿ ಕೊಳೆಯುತ್ತಿದೆ, ಹಾಕಿರತಕ್ಕಂಥ ಕಟ್ಟಡಗಳೆಲ್ಲಾ ಬಿದ್ದು ಹೋಗಿ ರಸ್ತೆಗಳೆಲ್ಲಾ ಹಾಳಾಗಿ ಎಲ್ಲಾ ಮುಗಿದು ಹೋಗಿ ಜಿಲ್ಲಾ ಪಂಚಾಯತಿ, ಶಾಸಕರು ಪ್ರತಿಯೊಬ್ಬರು ಸರ್ಕಾರದ ಗಮನಕ್ಕೆ ತಂದರೂ ಕೂಡ ಈ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ 15 ದಿವಸ ಬೇಕೆಂದು ಕೇಳಿದರೆ ಇದಕ್ಕೆ ನಾನೇನು ಉತ್ತರ ಹೇಳಲಿ, ತಮಗೂ ಗೊತ್ತಿದೆ, ತಾವು ನಮ್ಮ ಜಿಲ್ಲೆಯ ಪಕ್ಕದವರು ಇದು ಬಹಳ ವಿಷಾದನೀಯ

ಶ್ರೀ ಪಿ ಟಿ ಪರಮೇಶ್ವರ ನಾಯಕ್ (ಹರಪನಹಳ್ಳಿ) – ಮಾನ್ಯ ಉಪಾಧ್ಯಕ್ಷರೇ, ಈ ವಿಚಾರ ಕೇವಲ ಆ ಕೂಡ್ಲಿಗಿ ತಾಲ್ಲೂಕಿಗೆ ಸಂಬಂಧಪಟ್ಟಿದ್ದಲ್ಲ, ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟಿರುವ ವಿಚಾರ, ಇದರ ಬಗ್ಗೆ ಗೃಹ ಮಂತ್ರಿಗಳಿಗೆ ಸಂಪೂರ್ಣವಾದ ಮಾಹಿತಿ ಇದೆ, ಈಗಾಗಲೇ ನಮ್ಮಲ್ಲಿ ಶಾಲಾ ಕೊರಡಿಗಳು, ಆರೋಗ್ಯ ಕಟ್ಟಡಗಳು ಮತ್ತು ರಸ್ತೆಗಳು ಇವೆಲ್ಲವೂ ಕೂಡ ಟೆಂಡರಾಗಿ ಕಾಮಗಾರಿ ಮುಗಿದು ಕೆಲವು ಅರ್ಧ ಆಗಿ ನಮ್ಮ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿತ್ತೆಂದರೆ ಬೇರೆ ಯೋಜನೆಯೊಳಗೆ ಆ ರೂಮು ಪೂರ್ಣ ಮಾಡಲಿಕ್ಕೆ ಬರುವುದಿಲ್ಲ, ಆ ರಸ್ತೆಯನ್ನು ಬಾಕಿ ಹಣ ಪಾವತಿ ಮಾಡಲಿಕ್ಕೆ ಬರುವುದಿಲ್ಲ, ಟೆಂಡರ್‌ನಲ್ಲಿ ಕಾಮಗಾರಿ ಹಿಡಿದಿರತಕ್ಕಂಥ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೆ ಬಂದಿದ್ದಾರೆ, ಇದು ಎಂ ಪಿ ಪ್ರಕಾಶ್‌ರವರಿಗೆ ಗೊತ್ತಿದೆ, ಅವರ ಗಮನದಲ್ಲಿಯೂ ಇದೆ, ನಮ್ಮಲ್ಲೇನಾದರು ಆ ಸ್ಪೆಷಲ್ ಡೆವಲಪ್‌ಮೆಂಟ್ ಪ್ಯಾಕೇಜ್ ಘೋಷಣೆ ಆಗದೇ ಹೋಗಿದ್ದರೆ ಬಳ್ಳಾರಿ

ಜಿಲ್ಲೆಯ ರಸ್ತೆಗಳು ನರಕ ಯಾತನೆಯನ್ನು ಅನುಭವಿಸುತ್ತಿದ್ದವು ಈ ವ್ಯವಸ್ಥೆ ಶೋಚನೀಯ ಪರಿಸ್ಥಿತಿಗೆ ಹೋಗಿತ್ತು ಹಿಂದಿನ ಸರ್ಕಾರದಲ್ಲಿ ಇದಕ್ಕೆ ಒಂದು ಕಾಯಕಲ್ಪ ಕೊಟ್ಟು ಆ ರಸ್ತೆ ಸುಧಾರಣೆ, ಶಾಲಾ ಕೊರಡಿಗಳನ್ನು ಕಟ್ಟುವಂಧಾದ್ದು, ಆರೋಗ್ಯ ಕೇಂದ್ರಗಳನ್ನು ಕಟ್ಟುವಂಧ ಒಂದು ಒಳ್ಳೆಯ ಕೆಲಸಕ್ಕಾಗಿ ಅದಕ್ಕೆ ಒಂದು ಸ್ಪೆಷಲ್ ಪ್ಯಾಕೇಜನ್ನು ಆ ಹಿಂದುಳಿದ ಪ್ರದೇಶಕ್ಕೆ ಕೊಡುವುದರ ಮೂಲಕ ಆ ಪ್ರದೇಶ ಅಭಿವೃದ್ಧಿಯಾಗಲಿ ಎಂದು ಕೊಡಲಾಗಿದೆ ಒಂದು ಮತ್ತು ಎರಡನೇ ಕಂತಿನ ಹಣ ಬಿಡುಗಡೆ ಮಾಡಿ ಮೂರನೆ ಕಂತಿಗೆ ಇದನ್ನು ಅಡ್ಡ ಇಟ್ಟು ಸರ್ಕಾರ ಬದಲಿಯಾದ ತಕ್ಷಣ ಇವೆಲ್ಲವೂ ನಿಂತು ನಮ್ಮ ಪರಿಸ್ಥಿತಿ ಅಧೋಗತಿಯ ಶೋಚನೀಯ ಪರಿಸ್ಥಿತಿಯಾಗಿದೆ ದಯಮಾಡಿ ಇದಕ್ಕೆ ಸನ್ಮಾನ್ಯ ಎಂ ಪಿ ಪ್ರಕಾಶ್‌ರವರು ದೊಡ್ಡ ಮನಸ್ಸು ಮಾಡಬೇಕು ನಿಮ್ಮ ಕ್ಷೇತ್ರ ಕೂಡ ಈ ವ್ಯಾಪ್ತಿಗೆ ಸೇರಿದೆ, ನಾನು ದಾವಣಗೆರೆ ಜಿಲ್ಲೆಗೆ ಸೇರಿದ್ದರೂ ಕೂಡ ನನ್ನ ಕ್ಷೇತ್ರ ಕೂಡ ಈ ಒಂದು ಪ್ಯಾಕೇಜಿನಲ್ಲಿ ಸೇರಿದೆ, ದಯಮಾಡಿ ಆ ಹಣವನ್ನು ಜಿಲ್ಲಾ ಪಂಚಾಯತ್ ಇರಬಹುದು, ಲೋಕೋಪಯೋಗಿ, ಆರೋಗ್ಯ ಇಲಾಖೆ ಇರಬಹುದು ಆ ವ್ಯಾಪ್ತಿಗೆ ಬರುವಂಧ ಎಲ್ಲಾ ಇಲಾಖೆಗಳ ಹಣವನ್ನು ಈಗೇನು ಕೆಲವು ಕಾಮಗಾರಿ ಮುಗಿದಿವೆ, ಕೆಲವು ಅರ್ಧ ಮುಗಿದಿವೆ ಅದನ್ನು ಪೂರ್ಣಗೊಳಿಸಲಿಕ್ಕೆ ತಾವು ದಯಮಾಡಿ ಬಿಡುಗಡೆ ಮಾಡಿಸಬೇಕು ನಮ್ಮ ಎಸ್ ಎಸ್ ಪಾಟೀಲರು ಹೇಳಿದ ಹಾಗೆ 15 ದಿವಸಗಳ ಕಾಲಾವಕಾಶ ಖಂಡಿತವಾಗಿಯೂ ಅವರಿಗೆ ಬೇಕಾಗಿಲ್ಲ ಇದನ್ನು ಬೇಕಾಗಿಯೇ ಈ ಅಸೆಂಬ್ಲಿ ಮುಂದೂಡಬೇಕೆಂಬ ಉದ್ದೇಶದಿಂದ ಹೀಗೆ ಮಾಡುತ್ತಿದ್ದೀರಿ ಎಂದು ನಮ್ಮ ಭಾವನೆ, ದಯಮಾಡಿ ಬಹಳ ಶೋಚನೀಯ ಪರಿಸ್ಥಿತಿ ಇದೆ, ಅದನ್ನು ತ್ವರಿತವಾಗಿ ನಮ್ಮ ಎಸ್ ಎಸ್ ಪಾಟೀಲ್ ಹೇಳಿದ ಹಾಗೆ ಮುಂದಿನ ವಾರದಲ್ಲಿ ಅಧಿವೇಶನ ಮುಗಿಯುವುದರೊಳಗೆ ಸ್ಪಷ್ಟ ಉತ್ತರವನ್ನು ಇಡೀ ಜಿಲ್ಲೆಗೆ ಸಂಬಂಧಿಸಿದಂತೆ ತಾವು ಕೊಡಿಸಬೇಕು ಎಂದು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಉಪಾಧ್ಯಕ್ಷರೇ, 15 ಪ್ರಶ್ನೆಗಳಲ್ಲಿ 7 ಪ್ರಶ್ನೆಗಳು ಲೋಕೋಪಯೋಗಿ ಸಚಿವರದ್ದು ಇದೆ ಇದೊಂದು ಗುರುತರವಾದ

ವಿಷಯ ಅವರು ಏಕಿಲ್ಲ ಈ ಸಭೆಯಲ್ಲಿ, ಇವತ್ತಿನ ದಿವಸ ಯಾವ್ಯಾವ ಮಂತ್ರಿಗಳು ಉತ್ತರ ಹೇಳಬೇಕೆಂದು ಅವರಿಗೆ ಗೊತ್ತಿರಲಿಲ್ಲವೇ? ನಿಮ್ಮ ಆಫೀಸಿನಿಂದ ಅವರಿಗೇನು ಮಾಹಿತಿ ಕೊಟ್ಟಿಲ್ಲವೇ, ಇಲ್ಲವೇ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆಯೇ? ಇದು ಸನ್ಮಾನ್ಯ ಪ್ರಕಾಶ್‌ರವರು ಹೇಳುವಂಥ ಉತ್ತರವಲ್ಲ ಇಡೀ ಅಸೆಂಬ್ಲಿಯಲ್ಲಿ ಕುಳಿತಿರುವವರಿಗೆ PWD ಹಣ ಎಲ್ಲೆಲ್ಲಿ ಹೇಗೆ ಖರ್ಚು ಆಗುತ್ತಿದೆ ಎಂದು ಕೇಳಬೇಕೆಂದು ಆಸಕ್ತಿ ಇದೆ, ನಿಮ್ಮನ್ನು grill ಮಾಡಿಕೊಂಡು ಕುಳಿತುಕೊಂಡು ನಾವೇನು ಮಾಡುವುದು ಇಲ್ಲಿ 7–8 ಪ್ರಶ್ನೆಗಳು ಒಬ್ಬ ಮಂತ್ರಿಯವರದಾಗದ್ದು ಆ ಮಂತ್ರಿಗಳು ಅಸೆಂಬ್ಲಿಯಲ್ಲಿಲ್ಲವೆಂದರೆ ಗತಿಯೇನು? No, no, ನೀವು ಬೇರೆ statement ಮಾಡಿ, ಬೇರೆ written questions ಅನ್ನು ನಾನು ಟೇಬಲ್ ಮಾಡುತ್ತೇನೆಂದು ಹೇಳಿ ಎಲ್ಲಾ ಸರಿ, ಇಲಾಖೆ ಮಂತ್ರಿಗೆ ಉತ್ತರ ಹೇಳುವಷ್ಟು, ಇಲ್ಲಿಗೆ ಬರುವಷ್ಟು ಸೌಜನ್ಯವಿಲ್ಲವೆಂದರೆ ಏನು ಗತಿ ಸರ್ ? ಆಗದಿದ್ದಲ್ಲಿ ಮುಂದಕ್ಕೆ ಹಾಕಿ ಬಿಡಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ದಯವಿಟ್ಟು ಮುಂದಕ್ಕೆ ಹಾಕಿ

ಉಪಾಧ್ಯಕ್ಷರು – ಮಾಧುಸ್ವಾಮಿಯವರೇ, ರೇವಣ್ಣನವರು ಪತ್ರ ಬರೆದಿದ್ದಾರೆ ಪರ್ಮಿಷನ್ ತೆಗೆದುಕೊಂಡಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ – ಲೋಕೋಪಯೋಗಿ ಸಚಿವರು ಪರ್ಮಿಷನ್ ತೆಗೆದುಕೊಂಡು ಅವರು ಪತ್ರವೊಂದನ್ನು ಬರೆದು ಅವರ ಪರವಾಗಿ

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ ಸಿ ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ – ಉಪಾಧ್ಯಕ್ಷರೆ, ಲೋಕೋಪಯೋಗಿ ಸಚಿವರಿಲ್ಲ, ಮುಖ್ಯಮಂತ್ರಿಗಳಿಲ್ಲ, ಏನಿದು, ಪ್ರಶ್ನೋತ್ತರದ ಗಾಂಭೀರ್ಯ ಹೊರಟು ಹೋಯಿತು, ಏನು ಪರಿಸ್ಥಿತಿ? ಈ ರೀತಿ ಸದನ ನಡೆಸುವುದು ಸಭೆಗೆ ಅಗೌರವವಿದು ಇದೇನಿದು ಅರಳಿ ಮರದ ಕೆಳಗಿನ ಸಭೆಯೆಂದು ತಿಳಿದುಕೊಂಡಿರೇನು?

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ ಪಿ ಪ್ರಕಾಶ್ – ತಾವು ಹೇಳುವಂಥಾದ್ದು ಆಯಾಯಾ ಇಲಾಖೆ ಮಂತ್ರಿಗಳು ಇರಬೇಕೆನ್ನತಕ್ಕಂಥಾದ್ದು ನಿಜವೇ ಅದು ಅಪೇಕ್ಷಣೀಯ ಆದರೂ ಕೆಲವು ಅನಿವಾರ್ಯ ಪರಿಸ್ಥಿತಿಗಳು ಬರುತ್ತವೆ ಎನ್ನುವ ಕಾರಣಕ್ಕಾಗಿಯೇ ಅವರು ಅಧ್ಯಕ್ಷರ ಒಪ್ಪಿಗೆಯನ್ನು ಪಡೆದುಕೊಂಡು ಬೇರೊಬ್ಬ ಸಚಿವರು ನನ್ನ ಪರವಾಗಿ ಉತ್ತರವನ್ನು ಕೊಡುತ್ತಾರೆಂದು ಹೇಳಿದ್ದಾರೆ ತಾವು ಈಗಾಗಲೇ ಸಜೆಸ್ಟ್ ಮಾಡಿದ್ದೀರಿ, ಮಾನ್ಯ ಎಸ್ ಎಸ್ ಪಾಟೀಲರು ಮತ್ತು ಮಾನ್ಯ ಡಿ ಆರ್ ಪಾಟೀಲರು, ಮಾನ್ಯ ಇಬ್ಬರು ಸದಸ್ಯರು ಎತ್ತಿರತಕ್ಕಂತಹ ಪ್ರಶ್ನೆಗೆ ಉತ್ತರ ಹೇಳುವುದಾದರೆ, ಅವರು ಎತ್ತಿರತಕ್ಕಂತಹ ವಿಷಯ ನಿಜ ನಮಗೆ ಬೇಕಾದಷ್ಟು ಹಣ ಬರಬೇಕಾಗಿರುವಂತಹ ಪರಸ್ಥಿತಿ ಇದೆ ಬಳ್ಳಾರಿ ಪ್ಯಾಕೇಜನ್ನು ನಿಲ್ಲಿಸಿದ್ದೇವೆಂದು ನಿರ್ಧಾರ ಮಾಡಿದ್ದು ಹಿಂದಿನ ಸರ್ಕಾರದಲ್ಲಿ ಈ ಸರ್ಕಾರ ಆ ನಿರ್ಧಾರ ಮಾಡಿಲ್ಲ ಆದರೆ ಆ ಕಾಲದಲ್ಲಿಯೂ ಕೂಡ ಹಣವನ್ನು ಕೊಟ್ಟಿದ್ದೇವೆ ಈ ಕಾಲದಲ್ಲಿಯೂ ಸಹ ಹಣ ಕೊಡಬೇಕಾಗಿದ್ದು ಇದೆ ಖಂಡಿತವಾಗಿಯೋ ತಾವು ಹೇಳಿದಂತೆ ಅಧಿವೇಶನ ಮುಗಿಯುವುದರೊಳಗೆ 2ನೇ ತಾರೀಖು ಅಥವಾ 3ನೇ ತಾರೀಖು, ಇದರ ವಿಚಾರದಲ್ಲಿ ನಾವು ಉತ್ತರವನ್ನು ಕೊಡುತ್ತೇವೆ

ಉಪಾಧ್ಯಕ್ಷರು .– ಅವರು permission ಅನ್ನು ತೆಗೆದುಕೊಂಡಿದ್ದಾರೆ ಈಗ ಮಾನ್ಯ ಬಾಲರಾಜ್ ತಾವು ಪ್ರಶ್ನೆ ಕೇಳಿ

ಶ್ರೀಮತಿ ಭಾಗೀರಥಿ ಮರಳಸಿದ್ದನಗೌಡ – ನಾನು ತಮ್ಮ ಗಮನಕ್ಕೆ ತಂದಿದ್ದು ಮಾನ್ಯ ಮಂತ್ರಿಗಳು ಇಲ್ಲ ಅಂತ ಅಲ್ಲ ಏತಕ್ಕೆ ಈ ಪ್ರಶ್ನೆಗೆ ಉತ್ತರ ಕೊಡುತ್ತಿಲ್ಲವೆಂದು

ಶ್ರೀ ವಾಟಾಳ್ ನಾಗರಾಜ್ – ರಾತ್ರಿ 12 ಗಂಟೆಯವರೆಗೂ ಚರ್ಚೆ ಮಾಡಿದರೆ ಹೇಗೆ?

ಉಪಾಧ್ಯಕ್ಷರು – B A C ಯಲ್ಲಿ ಚರ್ಚೆಯಾಗಿ ತೀರ್ಮಾನ ಮಾಡಿರುವುದು ನೀವು ಏನು ಅಲ್ಲಿ ಮಾತನಾಡಿದ್ದೀರಿ ಅದರಂತೆಯೇ ಇಲ್ಲಿ ಅಜೆಂಡಾದಲ್ಲಿ ಬಂದಿರುವುದು ನಿಮ್ಮ ಪ್ರಕಾರವೇ ಬಂದಿರುವುದು 5ನೇ ತಾರೀಖಿನವರೆಗೂ ಈ ಸದನ ನಡೆಯುತ್ತದೆ ನಿಮಗೆ ಉತ್ತರವನ್ನು ಅವರು ನಾಳೆ ಅಥವಾ ನಾಳಿದ್ದರಲ್ಲಿ ಬಂದು ಕೊಡುತ್ತಾರೆ

ಶ್ರೀಮತಿ ಟಿ ಭಾಗೀರಥಿ .– ನಾನು ಹೇಳುತ್ತಿರುವುದು ನಾನು ಭರವಸೆಗಳ ಸಮಿತಿ ಸದಸ್ಯೆಯಾಗಿ ಯಾವ ಯಾವ ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರ ಕೊಡುತ್ತಾರೋ ಆ ಭರವಸೆಗಳು ಅಲ್ಲಿ ಬಂದು ಉತ್ತರ ಸರ್ಕಾರ ಕೊಡುತ್ತದೆ ಎಷ್ಟೆಷ್ಟು ವರ್ಷಗಳಿಂದ ಉತ್ತರ ಬಂದಿದೆಯೆಂದು ನೋಡಿದ್ದೇನೆ ಮುಂದೆ ಒಂದು ದಿನ ಉತ್ತರ ಕೊಡುವಂಥ ಕಾಲದಲ್ಲಿ ಇದೇ ರೀತಿ ಉತ್ತರ ಕೊಡಬಾರದು ಏನಾದರೂ ಒಂದು ದಿಕ್ಕು ಕಾಣಿಸಬೇಕು

ಶ್ರೀ ಎನ್ ಧರಂಸಿಂಗ್ – ಮಾನ್ಯ ಪ್ರಕಾಶ್‌ರವರು ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರು ಅವರು ಪ್ರತಿ ತಿಂಗಳೂ review meeting ಮಾಡುತ್ತಾರೆ ತಾವು review ಮಾಡತಕ್ಕಂಥ ಸಮಯದಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ಕೆಲಸ ಮಾಡಬೇಕಾಗುತ್ತದೆ

ಉಪಾಧ್ಯಕ್ಷರು – ಮಾನ್ಯ ಮಂತ್ರಿಗಳು ಬಂದ ತಕ್ಷಣ ಮಾನ್ಯ ಸದಸ್ಯರ ಸಮಸ್ಯೆಯನ್ನು ಬಗೆಹರಿಸೋಣ

ಶ್ರೀ ಎಂ ಪಿ ಪ್ರಕಾಶ್ – ಇದು ಮಾನ್ಯ ಸದಸ್ಯರೊಬ್ಬರ ಪ್ರಶ್ನೆಯೇ ಅಲ್ಲ ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಸಕರ ಪ್ರಶ್ನೆಯಿದೆ

ಉಪಾಧ್ಯಕ್ಷರು – ಬಳ್ಳಾರಿ ಜಿಲ್ಲೆ ಒಂದೇ ಅಲ್ಲ, ಚಿತ್ರದುರ್ಗ ಜಿಲ್ಲೆಯೂ ಸೇರಿದೆ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಅಧ್ಯಕ್ಷರೇ, 2ನೇ ತಾರೀಖು ಅಥವಾ 3ನೇ ತಾರೀಖು ಉತ್ತರ ಕೊಡಿಸುವುದರ ಜೊತೆಗೆ ಹಣ ಬಿಡುಗಡೆ ಮಾಡುವುದಕ್ಕೂ ನಾನು ಪ್ರಯತ್ನ ಮಾಡುತ್ತೇನೆ

ಮಕ್ಕಳು ಕಾಣೆಯಾಗುತ್ತಿರುವುದು

277 (1781) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) – ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಣೆಯಾಗುತ್ತಿರುವ ಮಕ್ಕಳ ಸಂಖ್ಯೆ ಅಧಿಕವಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು),

ಇ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಬಂದಿರುತ್ತದೆ

ಆ) ಕಳೆದ ಮೂರು ವರ್ಷಗಳಲ್ಲಿ ಕಾಣೆಯಾಗಿರುವ ಮತ್ತು ಪತ್ತೆಯಾಗಿರುವ ಮಕ್ಕಳ ವಿವರಗಳು ಈ ಕೆಳಗಿನಂತಿವೆ

ವರ್ಷ	ಕಾಣೆಯಾದ ಮಕ್ಕಳು	ಪತ್ತೆಯಾದ ಮಕ್ಕಳು
2004	4707	4304
2005	4952	4531
2006	5099	4432
2007 (ಫೆಬ್ರವರಿ 28ರವರೆಗೆ)	562	325

ಮಕ್ಕಳು ಕಾಣೆಯಾಗುತ್ತಿರುವುದಕ್ಕೆ ಕಾರಣಗಳು ಈ ಕೆಳಕಂಡಿರುತ್ತದೆ

1 ಬುದ್ಧಿ ಮಾಂದ್ಯತೆ

2 ಅಪಹರಣಕಾರರ ದುಷ್ಕೃತ್ಯದಿಂದ

3 ಪೋಷಕರಿಂದ ಒತ್ತಡ, ಹಿಂಸೆ ಕಿರುಕುಳ ಅನುಭವಿಸಿದಾಗ

4 ಶಾಲೆಗಳಲ್ಲಿ ಶಿಕ್ಷಕರ ಭಯದಿಂದ

5 ದುಶ್ಚಟಗಳಿಗೆ ಒಳಗಾದಾಗ

6 ಬಡತನದಿಂದ ಬೇಸತ್ತು ಉದ್ಯೋಗಕ್ಕಾಗಿ ಬೇರೆ ಕಡೆ ಹೋದಾಗ

7 ಪರೀಕ್ಷೆ ಬರೆಯುವುದನ್ನು ತಪ್ಪಿಸಿಕೊಳ್ಳಲು

8 ಪ್ರೀತಿಸಿ ಓಡಿ ಹೋಗುವುದು

ಇ) ಮಕ್ಕಳು ಕಾಣೆಯಾದ ಪ್ರಕರಣಗಳಲ್ಲಿ ಆದ್ಯತೆಯ ಮೇರೆಗೆ ತನಿಖೆಯನ್ನು ನಡೆಸಲಾಗುತ್ತಿದೆ ಕಾಣೆಯಾದ ಮಕ್ಕಳ ಭಾವ ಚಿತ್ರವನ್ನು ದೂರದರ್ಶನ, ಮತ್ತು ದಿನಪತ್ರಿಕೆಗಳಲ್ಲಿ ಮತ್ತು ಕ್ರಿಮಿನಲ್ ಗೆಜೆಟ್‌ನಲ್ಲಿ ಪ್ರದರ್ಶಿಸಲಾಗುತ್ತಿದೆ ಹಾಗೂ ರೆಡಿಯೋ ಮೂಲಕ ಸಹ ಪ್ರಕಟಣೆಯನ್ನು ಹೊರಡಿಸಲಾಗುತ್ತಿದೆ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಲಾಗುತ್ತಿದೆ ವಿವಿಧ ರಿಮ್ಯಾಂಡ್ ಹೋಂಗಳಲ್ಲಿ ಪರಿಶೀಲಿಸುವ ಕಾರ್ಯ ಮಾಡಲಾಗುತ್ತಿದೆ ಕಾಣೆಯಾದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ಶಾಲೆಯ ಉಪಾಧ್ಯಾಯರನ್ನು ಮಕ್ಕಳನ್ನು ಮತ್ತು ಮಗುವಿನ ಸಂಬಂಧಿಕರ ಅಕ್ಕಪಕ್ಕದವರ ಮನೆಯವರನ್ನು ವಿಚಾರಿಸಲಾಗುತ್ತಿದೆ ಮಕ್ಕಳ ಭಾವಚಿತ್ರವನ್ನು ರಾಣೆಯ ಎಲ್ಲಾ ಸಿಬ್ಬಂದಿಯವರಿಗೆ ಚಹರೆ ಬಗ್ಗೆ ತಿಳಿಸಿ ಇತರೇ ಕಾರ್ಯಗಳಿಗೆ ನೆರೆ ಜಿಲ್ಲೆಗಳಿಗೆ ಭೇಟಿ ನೀಡುವ ಸಂದರ್ಭಗಳಲ್ಲಿ ಹೋಟೆಲ್, ಪಾರ್ಕ್, ಬಸ್ ನಿಲ್ದಾಣ ಮುಂತಾದ ಸ್ಥಳಗಳಲ್ಲಿ ಪತ್ತೆ ಕಾರ್ಯಕ್ಕೆ ನೇಮಕ ಮಾಡಲಾಗುತ್ತಿದೆ

ಶ್ರೀ ಎಸ್ ಬಾಲರಾಜ್ – ಮಾನ್ಯ ಅಧ್ಯಕ್ಷರೇ, ಸರ್ಕಾರದಲ್ಲಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಉತ್ತರ ಕೊಟ್ಟಿದ್ದಾರೆ ಆದರೆ ಇವತ್ತು ಒಂದು ಆತಂಕಕಾರಿ ವಿಷಯವೆಂದು ಹೇಳಿದರೆ ಮಕ್ಕಳು ಕಾಣೆಯಾಗುತ್ತಿದ್ದಾರೆ ಕಾಣೆಯಾಗಿರುವ ಬಗ್ಗೆ ಅನೇಕ ಕಾರಣಗಳಿರಬಹುದು ಸುಮಾರು 8 ಕಾರಣಗಳನ್ನು ಸರ್ಕಾರದ ಉತ್ತರದಲ್ಲಿ ಒದಗಿಸಿದ್ದಾರೆ ಆದರೆ ಇದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೆ ಆದರೆ ಉತ್ತರದಲ್ಲಿ ಯಾವ ಠಾಣೆಯಲ್ಲಿ ಮೊಕದ್ದಮೆ ಹೂಡಿರುತ್ತಾರೆ ಅದಕ್ಕೆ ಸಂಬಂಧಿಸಿದಂತೆ ಮಾತ್ರ ಉತ್ತರಗಳು ಬಂದಿವೆ ಆದರೆ ದೂರದರ್ಶನದಲ್ಲಿ ತೋರಿಸತಕ್ಕಂಥಾದ್ದು, ಪ್ರತಿನಿತ್ಯ ಪತ್ರಿಕೆಗಳಲ್ಲಿ ಪ್ರದರ್ಶನ ಮಾಡುವಂಥಾದ್ದು, ರೇಡಿಯೋ ಮೂಲಕ ಹೇಳುವಂಥಾದ್ದು, ಮತ್ತು

ಅವರ ವಿದ್ಯಾಭ್ಯಾಸ ಶಾಲೆಯಲ್ಲಿ ವಿಚಾರಿಸತಕ್ಕಂಧಾದ್ದು, ಅಕ್ಕಪಕ್ಕದಲ್ಲಿ ವಿಚಾರಿಸತಕ್ಕಂಧಾದ್ದು, ಇತ್ಯಾದಿ ವಿಚಾರಗಳನ್ನು ತಿಳಿಸಿದ್ದಾರೆ ಆದರೆ ನನ್ನ ಪ್ರಶ್ನೆ ಏನೆಂದರೆ ಇಂತಹ ಒಂದು ಅಮಾನವೀಯ ಅಪಾಯಕಾರಿ ಬೆಳವಣಿಗೆಯನ್ನು ತಡೆಗಟ್ಟುವುದಕ್ಕೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ ಎನ್ನುವುದನ್ನು ನಾನು ಕೇಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಮಾನವೀಯತೆ ದೃಷ್ಟಿಯಿಂದ ಕೇಳಿದ್ದಾರೆ ಅದರಲ್ಲಿ ಮಕ್ಕಳ ಅಪಹರಣ ಮಾಡತಕ್ಕಂಧಾದ್ದು, ಕಾಣೆಯಾಗಿರುವಂಧಾದ್ದು, ದೆಹಲಿಯಲ್ಲಿ ಆದಂಧ ಪ್ರಕರಣವನ್ನು ನೋಡಿದ ಮೇಲೆ ಏನೆಲ್ಲಾ ಅನಾಹುತಗಳು ಆಗುತ್ತವೆನ್ನುವುದು ಗೊತ್ತಿದೆ ಇಲ್ಲಿ 15,320 ಮಕ್ಕಳು ಕಾಣೆಯಾಗಿದ್ದಾರೆಂದು ನಮ್ಮಲ್ಲಿ ದೂರುಗಳು ಬಂದವು ಅದರಲ್ಲಿ 13,592 ಮಕ್ಕಳನ್ನು ವಾಪಸ್ಸು ಅವರವರ ಪಾಲಕ ಪೋಷಕರಿಗೆ ಒಪ್ಪಿಸಿದ್ದೇವೆ ಅಂದರೆ ಶೇ 80 ಕ್ಕಿಂತ ಹೆಚ್ಚು ಮಕ್ಕಳು ಕಾಣೆಯಾಗಿರುವವರನ್ನು ನಾವು ಹುಡುಕಿದ್ದೇವೆ ಅದಕ್ಕಾಗಿಯೇ ನಾವು ಪೊಲೀಸ್ ಇಲಾಖೆಯನ್ನು ಅಭಿನಂದಿಸುತ್ತೇನೆ ಇನ್ನೂ 20% ಬಿಟ್ಟಿದ್ದೀರಿ ಎನ್ನುವುದಾದರೂ ಕೂಡ ಅನೇಕ ಬಾರಿ ವಾಪಸ್ಸು ಬಂದಿರತಕ್ಕಂಧ ಮಕ್ಕಳ ಮಾಹಿತಿಯನ್ನು ಅವರ ತಂದೆತಾಯಿಗಳು ಕೊಡುವುದಿಲ್ಲ ಆ ಸಂದರ್ಭದಲ್ಲಿಯೂ ಕೂಡ ನಮಗೆ ಮಾಹಿತಿ ಪೂರ್ಣ ವಾಗಿರುವುದಿಲ್ಲ ನಿಮಗೆ ಗೊತ್ತಿದ್ದಂತೆ ನಮ್ಮ ಕ್ರಿಮಿನಲ್ ಗೆಜೆಟ್‌ನಲ್ಲಿ ಅವರ ಭಾವಚಿತ್ರವನ್ನು ಅಂಟಿಸುವುದರ ಜೊತೆಗೆ ನಮ್ಮ ಇಲಾಖೆಯ ಹೊರಗಡೆಗೆ ಎಲ್ಲಿಯಾದರೂ ಮಕ್ಕಳು ಕಂಡರೆ ಅವರನ್ನು ಹಿಡಿಯಬೇಕು ಎನ್ನತಕ್ಕಂಧಾದ್ದರ ಬಗ್ಗೆ ಬಸ್ ನಿಲ್ದಾಣಗಳಲ್ಲಿ, ರೈಲ್ವೇ ಸ್ಟೇಷನ್‌ಗಳಲ್ಲಿ ಜನಸಂದಣಿ ಇರತಕ್ಕಂಧ ಪ್ರದೇಶಗಳಲ್ಲಿಯೂ ಕೂಡ ಈ ಬಗ್ಗೆ ಏರ್ಪಾಡನ್ನು ಮಾಡಿದ್ದೇವೆ ಮಕ್ಕಳು ಎಳೆ ವಯಸ್ಸಿನಲ್ಲಿ ಅದು ಒಂದು formative years ಎಂದು ಏನು ಹೇಳುತ್ತೇವೆ, ಆ ಒಂದು ಸಂದರ್ಭದಲ್ಲಿ ಅವರ ಮೇಲೆ ಶಿಕ್ಷಣದ ಕಾರಣಕ್ಕಾಗಿ ಒತ್ತಡಗಳು ಬಂದಾಗ, ತಂದೆತಾಯಿಗಳ ನಡುವೆ ಇರತಕ್ಕಂಧ ವೈ ಮನಸ್ಸಿನಿಂದ, ಒಡೆದು ಹೋದ ಕುಟುಂಬಗಳ ಮಕ್ಕಳ ಮೇಲೆ ಹಾಗೆಯೇ ಬಡತನದಿಂದ ಬೇಸತ್ತು ಉದ್ಯೋಗಕ್ಕಾಗಿ

ಬಂದಿರತಕ್ಕಂಥವರು, ಅಪಕರಣಕಾರರ ದುಷ್ಕೃತ್ಯದಿಂದಾಗಿ ಪೋಷಕರ ಒತ್ತಡ, ಹಿಂಸೆ, ಕಿರುಕುಳ ಇವೆಲ್ಲವೂ ಕೂಡ ಇದೆ ತಮಗೂ ಕೂಡ ಗೊತ್ತಿದೆ, ತಾವು ಕಲಾವಿದರು ನಮ್ಮ ಕಾಸರವಳ್ಳಿಯವರು ಕ್ರೌರ್ಯ ಎನ್ನುವ ಒಂದು ಚಿತ್ರ ಮಾಡಿದ್ದಾರೆ ಅದಕ್ಕೆ ದೊಡ್ಡ ಸಹ ಬಂತು, ಅದು ಬಹಳ ಅದ್ಭುತವಾದಂಥ ಸಿನಿಮಾ ತಂದೆತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಅವರನ್ನು ಓದಿಸುವುದು, ಅವರು marks ತೆಗೆದುಕೊಳ್ಳುವಂಥ ವಿಚಾರದಲ್ಲಿ ಎಷ್ಟು ಒತ್ತಡವನ್ನು ಅವರ ಮೇಲೆ ಕೊಡುತ್ತಾರೆ ಎನ್ನುವಂಥಾದ್ದು ಮತ್ತೊಂದು ತರಹದ ಕ್ರೌರ್ಯ ಎಂದು ಹೇಳಿ ಅದು ಬಹಳ ಅದ್ಭುತವಾದಂಥ ಚಿತ್ರ. ಮಕ್ಕಳಿಗೆ ಅಜ್ಜಿ ಕಥೆ ಹೇಳುವಾಗ ಅವರ ಹತ್ತಿರ ಬಂದು ಕುಳಿತುಕೊಳ್ಳುವಂಥ ಸಂತೋಷ, ತಂದೆ ಬೆತ್ತ ಹಿಡಿದುಕೊಂಡು ಓಡಾಡುವಾಗ ಮಕ್ಕಳಿಗೆ ಬಹಳ ಕಷ್ಟವಾಗುತ್ತದೆ ಅಂಥ ಸಂದರ್ಭದಲ್ಲಿ ಅವರು ತಪ್ಪಿಸಿಕೊಂಡು ಹೋಗುತ್ತಾರೆ ನೀವು ಹೇಳಿದಂತೆ ನಾವು ಇನ್ನೂ ಚುರುಕಾಗಿ ಕೆಲಸ ಮಾಡಬೇಕಾಗಿದೆ ಆ ಕೆಲಸವನ್ನು ನಾವು ಮಾಡುತ್ತೇವೆ

ಶ್ರೀ ಎಸ್ ಬಾಲರಾಜ್ – ಇನ್ನೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ ನಮ್ಮಲ್ಲಿ ಏನಾಗಿದೆಯೆಂದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರ ಕಾರ್ಯವೈಖರಿ ಮತ್ತು ಗೃಹ ಇಲಾಖೆಯಲ್ಲಿ ಯಾವ ಕೇಸ್ ರಿಜಿಸ್ಟರ್ ಆಗುತ್ತದೆ ಅದಕ್ಕೆ ಸಂಬಂಧಪಟ್ಟಂತೆ FIR ತಯಾರು ಮಾಡಿ ಕೊಡುವಂತಹ ಪ್ರಯತ್ನ ಆಗುತ್ತದೆ ಮತ್ತು ಈ ವಿದ್ಯಾ ಇಲಾಖೆಯಲ್ಲಿಯೂ ಕೂಡ ಶಾಲೆಗೆ ಮಕ್ಕಳು ಇಷ್ಟು ದಿನ ಬರಲಿಲ್ಲವೆಂದ ಮೇಲೆ ಏತಕ್ಕೆ ಬರಲಿಲ್ಲವೆನ್ನುವಂಥ ಪತ್ತೆಯನ್ನೂ ಸಹ ಅವರು ಮಾಡಬೇಕು ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಇವೆಲ್ಲವನ್ನೂ ಹೊರತುಪಡಿಸಿರತಕ್ಕಂಥ ಮಕ್ಕಳು ಏನಿದ್ದಾರೆ, ಅವರೆಲ್ಲರನ್ನೂ ಕೂಡ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಅವರನ್ನೂ ಕೂಡ ಒಂದು ರಿಜಿಸ್ಟ್ರೇಷನ್ ಮಾಡಿಸುವ ಮುಖಾಂತರ ಅಥವಾ information centre ಮಾಡುವ ಮೂಲಕ ವಿಶೇಷ ಗ್ರಾಮಸಭೆಗಳನ್ನು ಮಾಡುವ ಮುಖಾಂತರ ಸಮಗ್ರವಾಗಿ ಈ ನಾಲ್ಕು ಇಲಾಖೆಗಳ ಮೂಲಕ ಒಂದು ಇಲಾಖೆಯನ್ನಾಗಿ ಮಾಡಿ ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ನನಗೆ ಬಂದಿರತಕ್ಕಂಥ ಮಾಹಿತಿ

ಮತ್ತು ಮಾಧ್ಯಮಗಳ ಮೂಲಕ ಒಂದು ದಿವಸಕ್ಕೆ ಕನಿಷ್ಠ ಬೆಂಗಳೂರಿನಂಥ ನಗರದಲ್ಲಿ 35 ಜನ ಮಕ್ಕಳು ಕಾಣೆಯಾಗುತ್ತಿದ್ದಾರೆ ಬಹುಶಃ ಈ ರಾಜ್ಯದಲ್ಲಿ ರಿಜಿಸ್ಟರ್ ಆಗದಿರುವಂಥ ಕೇಸ್‌ಗಳು ಎಷ್ಟು ಇರಬಹುದು? ಈ ದೇಶದ ಅಂಕಿ ಅಂಶಗಳ ಪ್ರಕಾರ 42% ಮಕ್ಕಳು ಇದ್ದಾರೆ ನಾವು ಮಕ್ಕಳು ಎಂದು ಗುರುತಿಸುತ್ತೇವೆ ಹುಟ್ಟಿದಾಗಿನಿಂದಲೂ ಹಿಡಿದು 18 ವರ್ಷದೊಳಗೆ ಇರುವಂಥ ಎಲ್ಲರನ್ನೂ ನಾವು ಮಕ್ಕಳೆಂದು ಗುರುತಿಸುತ್ತೇವೆ ಆದರೆ ಇಷ್ಟು ಸಂಖ್ಯೆಯಲ್ಲಿರತಕ್ಕಂಥ ಮಕ್ಕಳಿಗೆ ನಾವು ಸಂವಿಧಾನಾತ್ಮಕ ಹಕ್ಕನ್ನು ಏನು ಕೊಟ್ಟಿದ್ದೇವೆ, ಅವರ ಬೆಳವಣಿಗೆಯನ್ನು ಪೂರಕವಾಗಿ ನಾವು ಉಳಿಸಿಕೊಂಡಿದ್ದೇವೆ ಮಕ್ಕಳಿಗೆ ಮಾನಸಿಕ ಒತ್ತಡ ಇದೆ ಅಥವಾ ಊಟದ ಕಷ್ಟದಲ್ಲಿಯೋ ಅಥವಾ ಇನ್ನಾವುದೋ ಸಮಸ್ಯೆಗಳನ್ನೆಲ್ಲಾ ಮಾನ್ಯ ಸಚಿವರು ತಿಳಿಸಿದ್ದಾರೆ ಇಷ್ಟೆಲ್ಲಾ ಸಮಸ್ಯೆಗಳಿಂದ ಅವರು ಊರು ಬಿಟ್ಟು ಹೊರಗಡೆ ಬಂದಿದ್ದಾರೆಂದರೆ, ಮುಂದೆ ಏನು ಆಗುತ್ತಾರೆ ಆ ಮಕ್ಕಳು? ಗಂಡು ಮಗವಾಗಿದ್ದರೆ ಅವನು criminal ಆಗಿ ರೂಪುಗೊಂಡು ಹೋಗುತ್ತಾನೆ ಇದು ಬಹಳ ಗಹನವಾದ ವಿಚಾರವಾಗಿರುವುದರಿಂದ ಇದಕ್ಕೆ ಬೇರೆ ಒಂದು ಸಮಯವನ್ನು ಕೊಟ್ಟರೆ ಅನುಕೂಲವಾಗುತ್ತದೆ ಇದರಲ್ಲಿ ಬಹಳಷ್ಟು ವಿಚಾರಗಳನ್ನು ಮಾತನಾಡಬಹುದು

ಉಪಾಧ್ಯಕ್ಷರು – ನೀವು ಇದನ್ನು ಪ್ರಶ್ನೆ ತರಹ ಕೇಳಬೇಕು

ಶ್ರೀ ಎಸ್ ಬಾಲರಾಜ್ – ನಾನು ಕೆಲವು ಸಲಹೆಗಳನ್ನು ಈ ಸಂದರ್ಭದಲ್ಲಿ ಕೂಡಲೇ ಬೇಕಾಗುತ್ತದೆ ಅದಕ್ಕಾಗಿ ಇದೆಲ್ಲವನ್ನು ಒಟ್ಟು ಮಾಡಿ, ಒಂದು ಕಡೆ ಸೇರಿಸಿ, ನಮಗೆ ಕಾನೂನು ಬದ್ಧವಾಗಿ ಮಕ್ಕಳ ಪಾಲನೆಯನ್ನು ಮಾಡುವುದಕ್ಕೆ ಯಾವ ರೀತಿ ಸಾಧನೆ ಮಾಡಬಹುದು, ನಾವು ಏನು ಹಕ್ಕನ್ನು ಕೊಡಬೇಕು ಎನ್ನುವುದನ್ನು ತೀರ್ಮಾನ ಮಾಡಿ, ಈ J J Act ನ್ನು implement ಮಾಡುವುದರ ಮುಖಾಂತರ ಮಕ್ಕಳನ್ನು ಪಾಲನೆ ಮಾಡುವಂಥ ಒಂದು ಶಿಕ್ಷಣವನ್ನು ಮತ್ತು ಒಂದು ಕಾನೂನನ್ನು ಜಾರಿಗೆ ತಂದರೆ ಖಂಡಿತವಾಗಿ ಸಮಾಜದಲ್ಲಿ ಒಂದು ಸ್ಥಾನವನ್ನು ಕೊಟ್ಟಂತಾಗುತ್ತದೆ ನಾವೂ ಕೂಡ ಮಕ್ಕಳ ಬಗ್ಗೆ ಒಂದು ಕಾಳಜಿಯನ್ನು ವಹಿಸಿ, ನಾವು ಏನೇನೋ ಯೋಜನೆಗಳನ್ನು ತಯಾರು ಮಾಡುತ್ತೇವೆ, ಮಕ್ಕಳನ್ನು ಬಹಳ ಕಿರಿಯ ವಯಸ್ಸಿನಲ್ಲಿ ತಯಾರು ಮಾಡಿದರೆ ಒಳ್ಳೆಯದಾಗುತ್ತದೆನ್ನುವ

ಅಭಿಪ್ರಾಯವನ್ನು ವ್ಯಕ್ತಪಡಿಸಿ ಆ ಬಗ್ಗೆ ಮಾನ್ಯ ಸಚಿವರು ಏನಾದರೊಂದು ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ ಆ ಬಗ್ಗೆ ಮಾನ್ಯ ಸಚಿವರು ಏನಾದರೊಂದು ವ್ಯವಸ್ಥೆ ಮಾಡುವುದಕ್ಕೆ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಪರವಾಗಿ) – ಮಾನ್ಯ ಉಪಾಧ್ಯಕ್ಷರೆ, ಬಹಳ ಉತ್ತಮವಾದ ಸಲಹೆಯನ್ನು ಮಾನ್ಯ ಬಾಲರಾಜ್‌ರವರು ಕೊಟ್ಟಿರುತ್ತಾರೆ ನಿಜವಾಗಲೂ ಇದೊಂದು ದುರಂತ, ನಿಮ್ಮ ಮಾಹಿತಿ ನಿಜ ಇರಬಹುದು, ಇಂತಹ ದೊಡ್ಡ ಊರಿನಲ್ಲಿ ದಿನಕ್ಕೆ 35 ಜನ ಮಕ್ಕಳು ಕಾಣೆಯಾಗುತ್ತಾರೆಂದರೆ, ಈ ಸಮಾಜ ಎಷ್ಟು ನಿರ್ಲಕ್ಷ್ಯ ತೋರಿಸುತ್ತಿದೆ ಎಂದರೆ child is the father of the man ಎನ್ನುವ ರೀತಿಯಾಗುತ್ತಿದೆ ಮಕ್ಕಳು ದುರಂತಕ್ಕೆ ಒಳಗಾಗುವುದು ಬಹಳ ಹಿಂಸೆಯಾಗತಕ್ಕಂಥಾದ್ದು ಈ ವಿಚಾರದಲ್ಲಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ H K ಕುಮಾರಸ್ವಾಮಿಯವರ ಜೊತೆಯಲ್ಲಿ ಮಾತನಾಡಿ ಈ ಬಗ್ಗೆ ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇನೆಂದು ಹೇಳಿ, ನಾನು ತಮಗೆ ಭರವಸೆಯನ್ನು ಕೊಡುತ್ತೇನೆ

ಕೆ ಆರ ಡಿ ಸಿ ಎಲ್ ಹಾಗೂ ಕೆ ಸಿಪಿ

278 (1687) ಶ್ರೀ ಪಾಟೀಲ್ ಡಿ ಆರ್ (ಗದಗ್) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ನದಿಗೆ ಕೂರ್ಲಹಳ್ಳಿ ಸೇತುವೆ ನಿರ್ಮಾಣವಾದುದರಿಂದ ಆ ಭಾಗಕ್ಕೆ ಪೂರ್ಣ ಪ್ರಯೋಜನವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಸೇತುವೆ ನಿರ್ಮಾಣದಿಂದ ಕಾರವಾರ ಗುತ್ತಿ ರಾಷ್ಟ್ರೀಯ ಹೆದ್ದಾರಿ–63 ಹಾಗೂ ಸೋಲಾಪುರ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ–13ನ್ನು ಹಡಗಲಿ–ಜಗಳೂರು ಮೂಲಕ ಜೋಡಿಸುವುದರಿಂದ ಬೆಂಗಳೂರು–ಗದಗ ರಸ್ತೆ ಅಂತರ ಎಷ್ಟು ಕಡಿಮೆಯಾಗುವುದು,

ಇ) ರಸ್ತೆ ಪ್ರಯಾಣ ಕಡಿಮೆಯಾಗುವುದರಿಂದ ಇಂಧನ ಉಳಿತಾಯ, ಸಮಯ ಉಳಿತಾಯ, ಪರಿಸರ ಹಾನಿ ತಪ್ಪುವುದನ್ನು ಸರ್ಕಾರ ಗಮನಿಸಿ, ಈ ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡಿ ಕಾಲಮಿತಿಗೊಳಪಟ್ಟು ಈ ಸಂಪರ್ಕ ರಸ್ತೆಯನ್ನು ಕೆ ಆರ್ ಡಿ ಸಿ ಎಲ್ ಅಥವಾ ಕೆಸಿಪ್ ಮೂಲಕ ಪೂರ್ಣಗೊಳಿಸಲು ತ್ವರಿತ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿದೆ

ಆ) ಈ ರೀತಿ ರಸ್ತೆಗಳನ್ನು ಜೋಡಿಸುವುದರಿಂದ ಗದಗ–ಬೆಂಗಳೂರು ರಸ್ತೆ ಅಂತರ ಸುಮಾರು 50 00 ಕಿಮೀ ನಷ್ಟು ಕಡಿಮೆಯಾಗಲಿದೆ

ಇ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅನುದಾನದ ಲಭ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು

ಶ್ರೀ ಡಿ ಆರ್ ಪಾಟೀಲ್ – ಮಾನ್ಯ ಉಪಾಧ್ಯಕ್ಷರೆ, ನಮ್ಮ ಪುಣ್ಯ, ಪರಿಸ್ಥಿತಿಯ ಅರಿವು ಇದ್ದಂಥ ನೀವು ಉತ್ತರವನ್ನು ಕೊಡುವಂಥ ಪ್ರಸಂಗ ಬಂದಿದೆ ನನಗೆ ಏನು ಉತ್ತರವನ್ನು ಕೊಟ್ಟಿದ್ದಾರೆ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅನುದಾನದ ಲಭ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು ಅದರ ಬದಲಾಗಿ, ಮುಂದಿನ 2007–08ನೇ ಹಣಕಾಸು ವರ್ಷದಲ್ಲಿ ಕೈಗೆತ್ತಿಕೊಳ್ಳುತ್ತೇವೆನ್ನುವ ಭರವಸೆಯನ್ನು ಕೊಟ್ಟರೆ, ನಮಗೆ ಹಾಗೂ ನಿಮಗೆ ಸಮಾಧಾನವಾಗುತ್ತದೆ ಮುಂದಿನ ಹಣಕಾಸು ವರ್ಷದಲ್ಲಿ ಈ ರಸ್ತೆ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುವುದು ಎನ್ನುವ ಭರವಸೆ ತಮ್ಮಿಂದ ಬರಬೇಕು ಮತ್ತು ಅದನ್ನು ಅನುಷ್ಠಾನಗೊಳಿಸುವಂಥ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕು

ಶ್ರೀ ಎಸ್ ಎಸ್ ಪಾಟೀಲ್ :– ನಾನು ಒಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ

ಉಪಾಧ್ಯಕ್ಷರೆ – ಪಾಟೀಲ್‌ರೆ, ನಿಮ್ಮ ಪ್ರಶ್ನೆ ಕೂಡ ಅದೇ ರೀತಿ ಇದೆ

ಶ್ರೀ ಎಸ್ ಎಸ್ ಪಾಟೀಲ್ – same, ನನ್ನ ಪ್ರಶ್ನೆ ಕೂಡ ಇದೆ

ಉಪಾಧ್ಯಕ್ಷರು – ಅದನ್ನು ಈಗಲೇ ಕೇಳಿ ಬಿಡುತ್ತೀರಾ?

ಶ್ರೀ ಎಸ್ ಎಸ್ ಪಾಟೀಲ್ – ನನ್ನ ಪ್ರಶ್ನೆ ಕೂಡ ಹಿಂದೆ ಒಂದು ಇತ್ತು ಅದು ಅನ್‌ಸ್ಟಾರ್ಡ್ ಆಗಿದೆ

ಉಪಾಧ್ಯಕ್ಷರು – ಇಲ್ಲಾ ಅದು ಸ್ಟಾರ್ಡ್ ಆಗಿದೆ ನಿಮ್ಮ ಪ್ರಶ್ನೆ ಕೂಡ ರಸ್ತೆ ಸಮಸ್ಯೆ ಬಗ್ಗೆ

ಶ್ರೀ ಎಸ್ ಎಸ್ ಪಾಟೀಲ್ – ಇಲ್ಲಾ ಮತ್ತೊಂದು ಇದೆ

ಶ್ರೀ ಡಿ ಆರ್ ಪಾಟೀಲ್ – ಇದು ಮೂರು ಜನ ಶಾಸಕರಿಗೆ ಸಂಬಂಧಪಟ್ಟಿದ್ದು ಇದೆ

ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) – ಮಾನ್ಯ ಪ್ರಕಾಶ್‌ರವರೆ, ನಮ್ಮ ಅಡವಿಸೋಮಾಪುರದ ಹತ್ತಿರದಿಂದ ಹೈವೆ 63 ರಿಂದ ಹೈವೆ 13 ರವರೆಗೆ, ಬಹುಶಃ ಮುಂಡರಗಿ, ಹಡಗಲಿ, ಕೊಟ್ಟೂರು ಮೇಲೆ ಹಾದು 3–4 ಜಿಲ್ಲೆಗೆ ಇದು ಸಂಪರ್ಕವಾಗುತ್ತದೆ ಸುಮಾರು 120 ಕಿ ಮೀ ವರೆಗೆ ಕೂಡಿಸಿ ಬಿಟ್ಟರೆ, ಅದು ಹೈವೆ ಆಗುತ್ತದೆ ಅದನ್ನು ನಾನು ಈಗಾಗಲೇ Central Minister ಆದ ಮಾನ್ಯ ಮುನಿಯಪ್ಪನವರನ್ನು ಆ ರಸ್ತೆಯಲ್ಲಿ ಕರೆದುಕೊಂಡು ಹೋಗಿದ್ದೆ ಇದನ್ನು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಮಾಡಿ ಕಳುಹಿಸಿ ಕೊಡಿ, ನಾನು ಖಂಡಿತವಾಗಿ ಮಂಜೂರು ಮಾಡುತ್ತೇನೆಂದು ಅವರು ಹೇಳಿದ್ದಾರೆ ಅದನ್ನು ಕೆಸಿಫ್‌ದೊಳಗೆ ತೆಗೆದುಕೊಂಡು ಈಗ ಕೆಲಸವನ್ನು ಮುಗಿಸಿ ಆಮೇಲೆ ಅದನ್ನು ಹೈವೆ ಆಗಿ ಪರಿವರ್ತನೆ ಮಾಡೋಣವೆಂದು ಹೇಳಿರುತ್ತಾರೆ ಬಳ್ಳಾರಿ ಪ್ಯಾಕೇಜಿನಲ್ಲಿ ನೀವು ಆ ಕಡೆ ಮಾಡಿದ್ದೀರಿ, ಆದರೆ ಅದು ಚೆನ್ನಾಗಿ ಆಗಲಿಲ್ಲ ಅದು ಒಡೆದು ಕಿತ್ತಿ ಹೋಗಿದೆ ಅದಕ್ಕಾಗಿ ಇದನ್ನು ಹೈವೆ ಮಾಡಲಿಕ್ಕೂ ಕೂಡ ದಯವಿಟ್ಟು ಕ್ರಮ ತೆಗೆದುಕೊಳ್ಳುತ್ತೇವೆನ್ನುವ ಬಗ್ಗೆ ಹೇಳಬೇಕು ಹೈವೆ ಆಗುವವರೆಗೆ ಮಾನ್ಯ ಡಿ ಆರ್ ಪಾಟೀಲ್‌ರು ಹೇಳಿದ ಹಾಗೆ, ಮುಂದಿನ ಹಣಕಾಸು ವರ್ಷದಲ್ಲಿ ಕೆಸಿಫ್

ದಲ್ಲಿ ಹಾಕಿ ಅದನ್ನು ಸಂಪೂರ್ಣ ರಸ್ತೆ ಮಾಡಿಕೊಡಬೇಕೆಂದು ನಾನು ಕೂಡ ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ ಮಾನ್ಯ ಉಪಾಧ್ಯಕ್ಷರೇ, ಹಿರಿಯರಾದ ಉಭಯ ಸದಸ್ಯರುಗಳು ಹೇಳುವಂಥಾದ್ದು ವಾಸ್ತವಾಂಶ, ಆಗ ಬೆಂಗಳೂರು ತೀರ ಹತ್ತಿರವಾಗುತ್ತದೆ ಒಳ್ಳೆಯ ರಸ್ತೆಯ ಸೌಕರ್ಯ ಹಿಂದುಳಿದ ತಾಲ್ಲೂಕುಗಳಿಗೆ ಲಭ್ಯವಾಗುತ್ತದೆ ನಾನು ಕೂಡ ಅವರ ಜೊತೆಗೆ ಸೇರಿ, ಮಾನ್ಯ ಉಪ ಮುಖ್ಯಮಂತ್ರಿಗಳು ಆಯವ್ಯಯದ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಅಥವಾ ಪೂರಕ ಅಂದಾಜು ಮಂಡಿಸುವ ಸಂದರ್ಭದಲ್ಲಿಯಾಗಲಿ ಇದನ್ನು ತೆಗೆದುಕೊಳ್ಳಬೇಕೆಂದು ಹೇಳಿ ಮನವರಿಕೆ ಮಾಡಕೊಡಲಿಕ್ಕೆ ಪ್ರಯತ್ನವನ್ನು ಮಾಡಿಕೊಡುತ್ತೇನೆ ಅದರ ಜೊತೆಗೆ ತಾವು ಹೇಳಿದಂತೆ, ಕನಿಷ್ಟಪಕ್ಷ ನಾವು ಅಂತರರಾಜ್ಯ ರಸ್ತೆಗಳಿಗೆ ಸಂಬಂಧಪಡುವಂಥ ಶೀರ್ಷಿಕೆ ಅಡಿಯಲ್ಲಿ ಮಾನ್ಯ ಮುನಿಯಪ್ಪನವರ ಮೂಲಕ ಅರ್ಧ ದುಡ್ಡನ್ನು, ನಾವು ಅರ್ಧ ದುಡ್ಡನ್ನು ಅವರು ಹಾಕಿ ರಸ್ತೆಯನ್ನು ತೆಗೆದುಕೊಳ್ಳುವ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತೇವೆ

ಶ್ರೀ ಡಿ ಆರ್ ಪಾಟೀಲ್ – ನಿಮ್ಮಿಂದ ನಮಗೆ ಭರವಸೆ ಬೇಕು ಸರ್ ಅವರಿಗೆ ಹೇಳಿ, ಇವರಿಗೆ ಹೇಳಿ, ಪ್ರಯತ್ನ ಮಾಡುತ್ತೇನೆ ಎನ್ನುವುದು ಬೇಕಾಗಿಲ್ಲ ಇದು ಎಲ್ಲರಿಗೂ ಅನುಕೂಲವಾಗುವಂಥ ರಸ್ತೆ, ಅದಕ್ಕೆ ದಯವಿಟ್ಟು ಈ ಮುಂದಿನ ಹಣಕಾಸು ವರ್ಷದಲ್ಲಿ ಅದನ್ನು ಕೆಆರ್‌ಡಿಸಿಎಲ್ ಮುಖಾಂತರ ಅಥವಾ ಕೆಸಿಫ್ ಮುಖಾಂತರ ಕೈಗೆತ್ತಿಕೊಳ್ಳುತ್ತೇವೆ ಎನ್ನುವ ಭರವಸೆ ತಮ್ಮಿಂದ ಬರಬೇಕು ನಿಮ್ಮ ಭರವಸೆ ಬಂದರೆ ಮಾನ್ಯ ರೇವಣ್ಣನವರು ಹಾಗೂ ಯಡಿಯೂರಪ್ಪನವರು ಅನುಕೂಲ ಮಾಡುತ್ತಾರೆ ಜನರಿಗೆ ಅನುಕೂಲವಾಗುತ್ತದೆ ದಯವಿಟ್ಟು ಅದಕ್ಕಾಗಿ ತಾವು ಆ ಭರವಸೆಯನ್ನು ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ – ಎಲ್ಲರೂ ಇನ್‌ವಾಲ್ವ್ ಆಗಿ ಪ್ರಯತ್ನ ಮಾಡೋಣ

1127

ಗ್ರಾಮೀಣ ಪ್ರದೇಶಗಳಲ್ಲಿ ಈಜುಕೊಳ ನಿರ್ಮಾಣ

279 (2080) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕೆರೆ ಕುಂಟೆಗಳು ಬತ್ತಿ ಹೋಗಿ ಅಲ್ಲಿನ ಯುವಕರಿಗೆ ಈಜು ಕಲಿಯಲು ಇದ್ದ ಅವಕಾಶದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ನಗರ ಪ್ರದೇಶಗಳಲ್ಲಿ ಪ್ರತಿಷ್ಟಿತ ಜನರಿಗೆ ಈಜು ಕಲಿಯಲು ಸುವ್ಯವಸ್ಥಿತ ಈಜು ಕೊಳಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ತಾರತಮ್ಯವನ್ನು ಹೋಗಲಾಡಿಸಲು ಗ್ರಾಮೀಣ ಪ್ರದೇಶದಲ್ಲಿ ಕನಿಷ್ಟ ಪ್ರತಿ ಪಂಚಾಯಿತಿ ಕೇಂದ್ರಗಳಲ್ಲಿ ಈಜು ಕೊಳಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಸಾಧ್ಯವಿದೆಯೇ,

ಇ) ಹಾಗಿದ್ದಲ್ಲಿ, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಬೇಕಾಗಿರುವ ಕಾಲಾವಕಾಶ ಎಷ್ಟು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು) –

ಅ) ಹೌದು

ಆ) ಈ ಕೆಳಕಂಡ ಸಂಕ್ಷಿಪ್ತ ವಿವರಗಳಂತೆ ನಗರ ಪ್ರದೇಶಗಳಲ್ಲಿ ಈಜುಕೊಳಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ ನಗರ ಪ್ರದೇಶಗಳಲ್ಲಿ ರಾಜ್ಯದ 10 ನಗರಗಳಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ನಗರ ಪಾಲಿಕೆಗಳು/ನಗರ ಸಭೆಗಳು, ವಿಶ್ವವಿದ್ಯಾನಿಲಯಗಳು, ಮುಂತಾದ ವಿದ್ಯಾ ಸಂಸ್ಥೆಗಳು ಇವರುಗಳಿಂದ ನಿರ್ಮಿಸಿ ನಿರ್ವಹಿಸಲ್ಪಡುತ್ತಿರುವ ಈಜುಕೊಳಗಳಿವೆ ಈಜುಕೊಳಗಳಿಗೆ ಅವುಗಳ ನಿರ್ವಹಣೆಗಾಗಿ ಪ್ರವೇಶ ಶುಲ್ಕವನ್ನು ಪಡೆದು ಸಂಬಂಧಿಸಿದ ಪ್ರಾಧಿಕಾರಗಳು ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಿರುತ್ತವೆ ಆದ್ದರಿಂದ, ನಗರ ಪ್ರದೇಶಗಳಲ್ಲಿ ಪ್ರತಿಷ್ಟಿತ ಜನರಿಗೆ ಮಾತ್ರ ಈ ಈಜುಕೊಳಗಳು ಸೀಮಿತವಾಗಿರುವುದಿಲ್ಲ

ಪ್ರತಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಈಜುಕೊಳವನ್ನು ನಿರ್ಮಿಸುವುದು ಪ್ರಸ್ತುತ ಇರುವ ಸೀಮಿತ ಆಯವ್ಯಯದಲ್ಲಿ ಕಷ್ಟಸಾಧ್ಯವಾಗಿರುತ್ತದೆ

ಇ) ಮೇಲೆ ವಿವರಿಸಿದ ಕಾರಣಗಳಿಂದ ಸದ್ಯಕ್ಕೆ ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಈಜುಕೊಳ ನಿರ್ಮಾಣದ ಅನುಷ್ಠಾನಕ್ಕೆ ಕಾಲಾವಕಾಶ ನಿಗಧಿಗೊಳಿಸುವುದು ಸಾಧ್ಯವಾಗುವುದಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ – ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿರುತ್ತಾರೆ ಪ್ರಶ್ನೆಯನ್ನು ಪೂರ್ಣವಾಗಿ ಗಮನಿಸಿದ ಹಾಗೇ ಇಲ್ಲ ನಗರ ಪ್ರದೇಶಗಳಲ್ಲಿ ಪ್ರತಿಷ್ಠಿತ ಜನರಿಗೆ ಈಜು ಕಲಿಯಲು ಸುವ್ಯವಸ್ಥಿತ ಈಜು ಕೊಳಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುತ್ತೇನೆ ಸೆಂಚ್ಯೂರಿ ಕ್ಲಬ್, ಪ್ರೆಸ್ ಕ್ಲಬ್, ವೆಸ್ಟೆಂಡ್ ಹೋಟೆಲ್, ಅಶೋಕ ಹೋಟೆಲ್, ವಿಂಡ್ಸರ್ ಮ್ಯಾನರ್ ಬಗ್ಗೆ ನಾನು ಹೇಳುವುದಿಲ್ಲ ನಗರದ ಪ್ರತಿಷ್ಠಿತ ಜನರು ಯಾರಿದ್ದಾರೆ ಅವರಿಗೆ ಅನುಕೂಲವಿದೆ ಕಾರ್ಪೊರೇಶನ್‌ದ್ದು ಬೇರೆ ಅಲ್ಲೊಂದು ಇಲ್ಲೊಂದು ಇವೆ ಅಲ್ಲಿಗೆ ಬಡವರ ಮಕ್ಕಳು ಹೋಗುತ್ತಾರೆ, ಹಳ್ಳಿಗಳಲ್ಲಿ ಶೂನ್ಯ ಹಳ್ಳಿಗಳಲ್ಲಿ ಕೆರೆ ಮತ್ತು ಕುಂಟೆಗಳು ಬತ್ತಿ ಹೋದವು, ನಾವು ಎಲ್ಲರೂ ಕೆರೆಯಲ್ಲಿ ಈಜು ಕಲಿತವರು ಕನಿಷ್ಟ ಪಂಚಾಯಿತಿ ಹೆಡ್‌ಕ್ವಾರ್ಟರ್ಸ್‌ನಲ್ಲಿಯಾದರೂ ಒಂದು ಈಜುಕೊಳವನ್ನು ಪ್ರಾರಂಭ ಮಾಡುವುದಕ್ಕೆ ಆಗುತ್ತದೆಯೇ ಎಂದು ನಾನು ಪ್ರಶ್ನೆಯನ್ನು ಕೇಳಿದೆ ನೀವು ಮಂತ್ರಿಗಳಾಗಿದ್ದವರು, ನಿಮ್ಮ ಅಧಿಕಾರಗಳು ಕೊಟ್ಟಿರುವ ಉತ್ತರವನ್ನು ನೀವು ಕೊಟ್ಟರೆ, ನಾನು ಏನು ಹೇಳಬೇಕು? ಇದು ಮಂತ್ರಿಗಳ ಉತ್ತರವೇ? ಹನುಮಂತಪ್ಪ ಆಲ್ಕೋಡ್‌ರವರ ಉತ್ತರವೇ? ನಾವು ಏಕೆ ತಮ್ಮಿಂದ ನಿರೀಕ್ಷೆಯೆನ್ನು ಮಾಡುತ್ತೇವೆಂದರೆ, ಪ್ರತಿಯೊಬ್ಬ ಮನುಷ್ಯನಿಗೆ ತನ್ನದೆ ಆದ ಹಿನ್ನೆಲೆ ಇರುತ್ತದೆ ನಿಮ್ಮಂಥವರು ಅಧಿಕಾರದ ಚುಕ್ಕಾಣೆಯನ್ನು ಹಿಡಿದಾಗ, ಒಂದು ಬದಲಾವಣೆಯನ್ನು ತರುತ್ತೀರಿ ಎನ್ನುವ ಆಶೆ ನಮಗೆ ಇರುತ್ತದೆ ನೀವು ಹೀಗೆ ಉತ್ತರವನ್ನು ಕೊಟ್ಟರೆ ಏನು ಪ್ರಯೋಜನ

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಕ್ರೀಡಾ ಸಚಿವರು) – ಮಾನ್ಯ ಉಪಾಧ್ಯಕ್ಷರೆ, ನಾನು ಉತ್ತರವನ್ನು ಕೊಟ್ಟಿರುತ್ತೇನೆ ಮಾನ್ಯ ಹಿರಿಯರಾದ

ರಮೇಶ್‌ಕುಮಾರ್‌ರವರು ಪ್ರತಿ ಗ್ರಾಮ ಪಂಚಾಯಿತಿಗೊಂದು ಈಜುಕೊಳವನ್ನು ಮಾಡಬೇಕೆಂದು ಕೇಳಿದ್ದಾರೆ ಒಂದು ಸಂದರ್ಭದಲ್ಲಿ ಅವರೇ ಹೇಳಿದ್ದಾರೆ ಕೆರೆ, ಕುಂಟೆಗಳೆಲ್ಲಾ ಬತ್ತಿ ಹೋಗಿವೆ ಇವತ್ತು ಹಳ್ಳಿಗಾಡಿನಲ್ಲಿರತಕ್ಕಂಥವರ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎನ್ನತಕ್ಕಂಥದ್ದನ್ನು ಕೂಡ ಅವರು ಹೇಳಿದ್ದಾರೆ ಅದೇ ರೀತಿಯಲ್ಲಿ ನಾವು ಈಗಾಗಲೇ ಜಿಲ್ಲಾ ಕೇಂದ್ರಗಳಲ್ಲಿಯೇ ಮಾಡುವುದಕ್ಕೆ ನಮ್ಮಿಂದ ಆಗಿಲ್ಲ ರಾಜ್ಯದಲ್ಲಿ ಮೂರು ಕಡೆ ಮಾತ್ರ ನಾವು ನಮ್ಮ ಇಲಾಖೆಯಿಂದ ಮಾಡಿದ್ದೇವೆ ಇನ್ನೂ 17 ಜಿಲ್ಲೆಗಳಲ್ಲಿ ಮಾಡಬೇಕಾಗಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ – ಮಾನ್ಯ ಉಪಾಧ್ಯಕ್ಷರೆ, ಮಲ್ಯ ಹಾಸ್ಪಿಟಲ್, ವೋಕಾರ್ಡ್ ಆಸ್ಪತ್ರೆಗಳು ಶ್ರೀಮಂತರದ್ದು ಒಳ್ಳೆಯ ಹೋಟೆಲ್ ಅಂದರೆ ವಿಂಡ್ಸರ್ ಮ್ಯಾನರ್, ವೆಸ್ಟೆಂಡ್ ಇವು ಶ್ರೀಮಂತರದ್ದು ಬಡವರಿಗೆ ಬದುಕುವುದಕ್ಕೆ ಏನು ಅವಕಾಶವಿಲ್ಲ, ಅವರಿಗೆ ಏನೂ ಆಟವಿಲ್ಲ, ಪಾರವಿಲ್ಲ, ಸ್ವೀಮಿಂಗ್‌ಪೂಲ್ ಇಲ್ಲ, ಹೋಟೆಲ್ ಇಲ್ಲ, ಅವರು ಏಕೆ ಬದುಕಿರಬೇಕು, ನಮಗೆ ಓಟು ಹಾಕುವುದಕ್ಕೆಯೇ? ಸ್ವಲ್ಪ ಯೋಚನೆಯನ್ನು ಮಾಡಿ ನಮ್ಮಲ್ಲಿ ಕೆಲವು ಪ್ರಯಾರಿಟೀಸ್‌ಗಳನ್ನು ಮಾಡಿಕೊಳ್ಳಬಹುದು ನಾವು ಏನು ಸೌಭಾಗ್ಯವನ್ನು ಕೇಳಿದೆವು ಕುಡಿಯುವ ನೀರು ಬೇಕು, ಅದು ಬೇರೆ ಪ್ರಶ್ನೆ ಆ ವಿಷಯ ಬಂದಾಗ ಮಾತನಾಡೋಣ ಅವರು ಕಬಡ್ಡಿ ಅಥವಾ ಬೇರೆ ಆಟ ಆಡಿಕೊಳ್ಳುತ್ತಾರೆ, ಅವರು ಆಡುತ್ತಾರೆ, ಬೀಳುತ್ತಾರೆ, ಸಾಯುತ್ತಾರೆ ಈಜುಕೊಳ ಕೊಡುವುದಕ್ಕೆ ಯಾವುದೇ ಒಂದು ಫಂಡ್ಸ್‌ನ್ನು ನೀವು ಅಡ್ಜಸ್ಟ್ ಮಾಡಿ ಪಂಚಾಯಿತಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಪ್ರಾರಂಭ ಮಾಡಿದರೆ, ಅಮೇಲೆ ಗ್ರಾಮಗಳಿಗೆಲ್ಲಾ ಅಗತ್ಯವಿದೆಯೋ ಇಲ್ಲವೋ ಎನ್ನುವುದನ್ನು ಆಲೋಚನೆ ಮಾಡೋಣ ಎಲ್ಲೋ ಒಂದು ಕಡೆ ನಮ್ಮ ಹೃದಯ ಅವರ ಬಗ್ಗೆ ಕಾಳಜಿ ಮಾಡದೆ ಹೋದರೆ ಹೇಗೆ? ಜಿಲ್ಲಾ ಹೆಡ್‌ಕ್ವಾರ್ಟರ್ಸ್ ನಲ್ಲಿಯೇ ಮಾಡಿಲ್ಲ ಎಂದು ಹೇಳುವುದು ಮಾಮೂಲು, ಅಧಿಕಾರಿಗಳು ಹೇಳಿಕೊಟ್ಟಿರುವ ಉತ್ತರ ಹೇಳುವುದು ಬೇಡ ನೀವು ಮಂತ್ರಿಗಳಾಗಿ, ನಿಮ್ಮ ಪ್ರಭಾವವನ್ನು ಸರ್ಕಾರದ ಮೇಲೆ ಬೀರಿ, ಸರ್ಕಾರದ ಆಲೋಚನೆಯನ್ನು ಪುನರ್‌ವಿಮರ್ಶೆ ಒಳಪಡಿಸಿ, ಹೌದು ಸರ್ ನೀವು ಹೇಳುವುದು ನಿಜ ನಮ್ಮ ಮಕ್ಕಳಿಗೆ ಅಷ್ಟು ಬೇಡವೇ? ನಾವು ಆ

ಸಮೂಹದಿಂದ ಬಂದವರು ನಮ್ಮ ಮಕ್ಕಳಿಗೆ ಕನಿಷ್ಠ ಅದಕ್ಕಾದರೂ ಅವಕಾಶವನ್ನು ಮಾಡಿಕೊಡಬೇಕು ಅದನ್ನು ಮಾಡುತ್ತೇನೆಂದು ಹೇಳಿದರೆ ನಮಗೆ ಸಮಾಧಾನವಾಗುತ್ತದೆ ಇಲ್ಲದೇ ಹೋದರೆ ನಾನೇನು ನಿಮಗೆ ಮುಜುಗರ ಮಾಡುವುದಿಲ್ಲ ನನ್ನ ಪಾಡಿಗೆ ನಾನು ಕುಳಿತುಕೊಳ್ಳುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ (ಮುಂಡಗಿ) -- ರಮೇಶ್ ಕುಮಾರ್‌ರವರು ಕೇಳಿದ ಪ್ರಶ್ನೆ ನಿಜವಾಗಿ ನಾವೆಲ್ಲರೂ ಚಿಂತನೆ ಮಾಡತಕ್ಕ ಪ್ರಶ್ನೆ ಹಿಂದೆ ಹಳ್ಳಿಗಾಡಿನಲ್ಲಿ ನಮ್ಮದು ಬಾವಿಗಳು ಇರುತ್ತಿದ್ದವು ಆಗ ನಾವೆಲ್ಲ ಈಜು ಕಲಿಯುತ್ತಿದ್ದೆವು ಇವತ್ತು ಬಾವಿಗಳೆಲ್ಲ ಒಣಗಿ ಹೋಗಿದೆ ಬೋರ್ ಹಾಕಿ ಕುಳಿತಿದ್ದೇವೆ ಹೀಗಾಗಿ ಹಳ್ಳಿಗಾಡಿನ ಮಕ್ಕಳಿಗೆ ಈಗ ಈಜೇ ಬರುವುದಿಲ್ಲ ಬಹುಶಃ ನನ್ನದೇ ಉದಾಹರಣೆಯನ್ನು ಹೇಳುತ್ತೇನೆ, ನಾನು ಹೊಳೆಯಲ್ಲಿ ಹೊರಟು ಹೋಗಿದ್ದೆ ಈಜು ಕಲಿತಿದ್ದರಿಂದ ಅದರಿಂದ ಪಾರಾಗಿ ಬಂದು ಇವತ್ತು ಎಂಎಲ್‌ಎ ಆಗಿದ್ದೇನೆ ಆ ಕಾರಣದಿಂದ ಹಳ್ಳಿಯಲ್ಲಿ ಯಾವ ವ್ಯವಸ್ಥೆಯೂ ಇಲ್ಲ ಆದ್ದರಿಂದ ದಯವಿಟ್ಟು ನೀವು ದೊಡ್ಡ ಊರಿನಲ್ಲಿ ಮಾಡಿದಂತೆ ಕೋಟಿಗಟ್ಟಲೆ ಖರ್ಚು ಮಾಡಿ ಹಳ್ಳಿಗಳಲ್ಲಿ ಮಾಡಬೇಕಾಗಿಲ್ಲ ನಮಗೆ ಅಲ್ಲಿ ಬಹಳ ರೊಕ್ಕವೇನೂ ಬೇಕಾಗುವುದಿಲ್ಲ ಕನಿಷ್ಟ ಒಂದು ಸಣ್ಣ ಬಾವಿ ರೀತಿ ಮಾಡಿ ಅದನ್ನು ಸ್ವಚ್ಛ ಮಾಡುವ ರೀತಿ ಮತ್ತು ಅದನ್ನು ತುಂಬುವ ಹಾಗೆ ಮಾಡಿಕೊಡಿ ಸಾಕು ಬಹುಶಃ ಅದನ್ನು ಒಂದೊಂದು ಲಕ್ಷ ರೂ ನಲ್ಲಿ ಮಾಡಬಹುದು ಎರಡು ಲಕ್ಷದಲ್ಲಿ ಮಾಡಬಹುದು ಸಾಕು ಅಷ್ಟೇ ಒಂದು ಕೋಟಿ ಖರ್ಚು ಮಾಡಿದರೆ ಎರಡು ಜಿಲ್ಲೆಗಳಲ್ಲಿಯೇ ಮಾಡಬಹುದು ಆ ರೀತ ಸಣ್ಣ ಬಾವಿಯನ್ನು ಮಾಡಿ ಮಕ್ಕಳಿಗೆ ಈಜಲು ಕಲಿಸಿದರೆ ಒಳ್ಳೆಯದು ಬಹಳ ಮಕ್ಕಳಿಗೆ ಈಜು ಬರುವುದಿಲ್ಲ ನೀವು ಹಳ್ಳಿಯಿಂದ ಬಂದಿರುವವರು ನಿಮಗೂ ಇದರ ಬಗ್ಗೆ ಗೊತ್ತಿದೆ ಆ ಕಾರಣದಿಂದ ಆ ರೀತಿಯಾಗಿ ಮಾಡುತ್ತೀರಾ ಎಂದು ಹೇಳಬೇಕು

ಶ್ರೀ ಎನ್ ಎಸ್ ಭೋಸರಾಜು (ಮಾನ್ವಿ) -- ಈಗಾಗಲೇ ಹಿರಿಯರು ಹೇಳಿದಂತೆ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಸಾಕಷ್ಟು hoteliers ಗಳು ಬಂದು ಖಾಸಗಿಯವರು ಬಂದು ಸಾಕಷ್ಟು ಈಜುಕೊಳಗಳನ್ನು ಮಾಡಿದ್ದಾರೆ ನಮ್ಮ ಮಂತ್ರಿಗಳು ಕ್ರೀಡಾಪಟುಗಳೂ ಕೂಡ ಆಗಿದ್ದಾರೆ ಈಗಾಗಲೇ ತಾಲ್ಲೂಕು ಮಟ್ಟದಲ್ಲಾದರೂ

ಪ್ರಾರಂಭ ಮಾಡಿ ಎಂದು ಅವರನ್ನು ನಾವು ಕೇಳಿಕೊಂಡಿದ್ದೇವೆ ಆದರೆ ಗ್ರಾಮಾಂತರ ಪ್ರದೇಶದಲ್ಲಿ ಯುವಕರಿಗೆ ಅವಕಾಶ ಕಲ್ಪಿಸತಕ್ಕ ಈಜುಕೊಳಗಳನ್ನು ತಕ್ಷಣ ತಾವು ಪ್ರಾರಂಭಿಸಬೇಕು ಈ ವರ್ಷದ ಬಜೆಟ್‌ನಲ್ಲಿ ಕೇವಲ ನೀವು ಜಿಲ್ಲಾ ಮಟ್ಟದಲ್ಲಿ ಏಳು ಜಿಲ್ಲೆಗಳಲ್ಲಿ ಮಾಡಿದ್ದೇವೆ, ಇನ್ನು 13 ಜಿಲ್ಲೆಗಳಲ್ಲಿ ಮಾಡಬೇಕೆಂದು ಇದ್ದೀರಿ ನಮ್ಮ ರಾಯಚೂರಿನಲ್ಲಿ ಸಹಿತ ಇವತ್ತಿನ ತನಕ ಈಜುಕೊಳಗಳನ್ನು ಪ್ರಾರಂಭಿಸಲು ಆಗಲಿಲ್ಲ ಆದರೂ head quarters ನಲ್ಲಿ hoteliers ರವರು ಕಟ್ಟಿಸಿದ್ದಾರೆ ನೀವು ಕನಿಷ್ಟ ನಮ್ಮ ಜಿಲ್ಲೆಗಾದರೂ ತಾವು ಮಂತ್ರಿಯಾಗಿದ್ದೀರಿ, ಅದನ್ನು ತಾಲ್ಲೂಕು ಪ್ರದೇಶದಿಂದ ಪ್ರಾರಂಭಿಸಲಿ ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ ಮತ್ತು ಹಿರಿಯರಾಗಿರತಕ್ಕ ಪ್ರಕಾಶ್‌ರವರು ಇದ್ದಾರೆ ಈಗ ನಾವೆಲ್ಲರೂ ಕ್ರೀಡಾ ಸಚಿವರ ಒಂದು ಚಟುವಟಿಕೆಗಳ ಬಗ್ಗೆ ಹೇಳುತ್ತಿದ್ದೇವೆ, ಈಜುಕೊಳಗಳನ್ನು ಪ್ರಾರಂಭ ಮಾಡುವುದಕ್ಕೆ ಮತ್ತು ಕ್ರೀಡಂಗಣವನ್ನು ಪ್ರಾರಂಭ ಮಾಡಲು ಹೇಳುತ್ತಿದ್ದೇವೆ ಅವರಿಗೆ ಈ ವರ್ಷ ಬಹಳಷ್ಟು ಕಡಿಮೆ ಬಜೆಟ್‌ನ್ನು ಕೊಟ್ಟಿದ್ದರೆ ಅವರಿಗೆ ಅಗೌರವ ಮಾಡತಕ್ಕ ರೀತಿಯಲ್ಲಿ ಆ ಒಂದು ಇಲಾಖೆಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ ಹಾಗಾಗಿ ಕನಿಷ್ಟ ಒಂದು ನೂರು ಕೋಟಿಯಾದರೂ ಆ ಇಲಾಖೆಗೆ ಕೊಡಿಸುವ ಕೆಲಸವನ್ನು ಮಾಡಬೇಕಾಗಿದೆ ಎಲ್ಲ ಕಡೆ ಸಾಕಷ್ಟು ಜನರು ಕೇಳುತ್ತಿದ್ದಾರೆ, ಬೇಡಿಕೆ ಇದೆ, ಮಕ್ಕಳಿಗೆ ನಾವೆಲ್ಲಾ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತೀರಿ, ಹೊರಟ್ಟಿ ಸಾಹೇಬರು ಇದ್ದಾರೆ, ಅವರು ಸಹ ಪ್ರೌಢ ಶಾಲೆಗಳಿಗೆ ಅನುಕೂಲವನ್ನು ಮಾಡಿಕೊಡುತ್ತಿದ್ದಾರೆ ಪ್ರಾಥಮಿಕ ಶಾಲೆಗಳಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ ಜೂನಿಯರ್ ಕಾಲೇಜಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ, ಇಷ್ಟು ಕೆಲಸ ಆಗಬೇಕಾಗಿರುವಾಗ ಕೇವಲ ನಾಲ್ಕೂವರೆ ಕೋಟಿ ಹಣವನ್ನು ಕೊಟ್ಟರೆ ಅವರು ಯಾವ ರೀತಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆ? ರಾಯಚೂರು ಜಿಲ್ಲೆ ಹಿಂದುಳಿದ 27 ನೇ ಜಿಲ್ಲೆಯಾಗಿದೆ ಆ ಜಿಲ್ಲೆಗೆ ಅಗೌರವ ತರುವ ರೀತಿ ಇವತ್ತು ಬಜೆಟ್ ಅಲೊಕೇಷನ್ ಅನ್ನು ಮಾಡಿದ್ದಾರೆ ಹಾಗಾಗಿ ನಮ್ಮ ಜಿಲ್ಲೆಯ ಎಲ್ಲ ಜನತೆ ನಮ್ಮ ಮಂತ್ರಿಗಳಿಗೆ, ಆ ಇಲಾಖೆಗೆ ಕೊಟ್ಟಿರುವ ಹಣದ ಬಗ್ಗೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ ಆದ್ದರಿಂದ ತಾವು ಈ ಮಾತನ್ನು ಗಮನದಲ್ಲಿಟಡ್ಟುಕೊಂಡು ರಾಯಚೂರು ಜಿಲ್ಲೆಯಿಂದ ನಾವು ಸಾಕಷ್ಟು ಅನ್ನವನ್ನು ಕೊಡುತ್ತಿದ್ದೇವೆ, ಹಟ್ಟಿ

ಗೋಲ್ಡ್‌ಮೈನ್ಸ್‌ನಿಂದ ಸಾಕಷ್ಟು ಬಂಗಾರವನ್ನು ಕೊಡುತ್ತಿದ್ದೇವೆ ಕೆಪಿಸಿಎಲ್ ನಿಂದ 1400 ಮೆಗಾವ್ಯಾಟ್ ವಿದ್ಯುತ್ ಅನ್ನು ಕೊಡುತ್ತಿದ್ದೇವೆ ಈ ರೀತಿಯಾಗಿ ಅಲ್ಲಿಂದ ಇಡೀ ರಾಜ್ಯಕ್ಕೆ ಸಾಕಷ್ಟು ರೀತಿ ಅನುಕೂಲ ಆಗುವ ಸಂದರ್ಭದಲ್ಲಿ ನಮ್ಮ ಮಂತ್ರಿಗಳಿಗೆ ಮತ್ತು ಆ ಇಲಾಖೆಗೆ ಸಾಕಷ್ಟು ಕಡಿಮೆ ಹಣವನ್ನು ಕೊಟ್ಟು ಆ ಜಿಲ್ಲೆಗೆ ಅಗೌರವ ತಂದಿದ್ದಾರೆ ಎನ್ನುವ ಮಾತನ್ನು ನಾನು ನಮ್ಮ ಜಿಲ್ಲಾ ಜನತೆಯ ಭಾವನೆ ಆ ರೀತಿ ಇದೆ ಎನ್ನುವ ಮಾತನ್ನು ತಿಳಿಸುತ್ತೇನೆ

ಶ್ರೀ ಆಲ್ಕೋಡ್ ವೈ ಹನುಮಂತಪ್ಪ – ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಏನು ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ ಆದರೆ ಇವತ್ತಿನ ಏನು ಬಜೆಟ್‌ನಲ್ಲಿರತಕ್ಕ ಕೊಟ್ಟಿರುವ ಸೀಮಿತ ಹಣದಲ್ಲಿ ಇದನ್ನು ಮಾಡುವುದಕ್ಕಾಗುವುದಿಲ್ಲ ಸ್ವಲ್ಪ ಕಷ್ಟವಾಗುತ್ತದೆ ಅದಕ್ಕೆ ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ಏನು ಹೇಳಬಯಸುತ್ತೇನೆಂದರೆ ಒಂದು ಈಜುಕೊಳವನ್ನು ಮಾಡಬೇಕಾದರೆ ಕನಿಷ್ಟ ಒಂದು ಕೋಟಿ ರೂ ಬೇಕಾಗುತ್ತದೆ ಒಂದು ಈಜುಕೊಳ ಮಾಡಬೇಕೆಂದರೆ ತಾವು ಹೇಳಿದಂತೆ ಒಂದು ಲಕ್ಷದಲ್ಲಿ ಆಗುತ್ತದೆ, ಎರಡು ಲಕ್ಷದಲ್ಲಿ ಆಗುತ್ತದೆ ಎಂದು ಹೇಳಿದರೆ ಅದಕ್ಕೆ ಒಂದು ಬೋರ್‌ವೆಲ್ ಅನ್ನು ಹಾಕಬೇಕಾಗುತ್ತದೆ ಅದಕ್ಕೆ 150 ಅಡಿಗಳಷ್ಟು ಬೇಕಾಗುತ್ತದೆ ಅದರ ಜೊತೆಗೆ ಅದಕ್ಕೆ ಫಿಲ್ಟರ್ ಪ್ಲಾಂಟ್ ಬೇಕಾಗುತ್ತದೆ ಬಟ್ಟೆಗಳನ್ನು ಚೆಂಜ್ ಮಾಡುವುದಕ್ಕೆ ಕನಿಷ್ಟ ಎರಡು ಖೋಲಿಗಳಾದರೂ ಬೇಕಾಗುತ್ತದೆ ಇವೆಲ್ಲಾ ಮಿನಿಮಮ್ ನೀವು ಗ್ರಾಮಾಂತರ ಪ್ರದೇಶದಿಂದ ಬಂದಿರುವವರು

ಶ್ರೀ ಎಸ್ ಎಸ್ ಪಾಟೀಲ್ – ನೀವು ಹೊರಟ್ಟಿಯವರ ಕಡೆಯಿಂದ ಟ್ರೇನಿಂಗ್‌ಅನ್ನು ತೆಗೆದುಕೊಳ್ಳಿ ಎಷ್ಟು ಬುದ್ಧಿವಂತಿಕೆಯಿಂದ ಮಾಡಿ Un-aided ಶಾಲೆಗಳವರು ಇವತ್ತು Aided ಆಗಿ ಮಾಡಿಸಿಕೊಂಡರು ನೀವು ಆ ರೀತಿ ಸ್ವಲ್ಪ ಮ್ಯಾನೇಜ್ ಮಾಡಬೇಕಾಗುತ್ತದೆ ಮಂತ್ರಿಗಳು ಇದನ್ನು ಜಾಣ್ಮೆಯಿಂದ ಮಾಡಿಕೊಳ್ಳಿ ನಾವೆಲ್ಲರೂ ಸಪೋರ್ಟ್ ಮಾಡುತ್ತೇವೆ ಇಲ್ಲದಿದ್ದರೆ ಹಳ್ಳಿಯ ಯುವಕರಿಗೆ ಬರೀ ಕ್ರಿಕೆಟ್ ಆಡಿಸುವುದು, ಅವರಿಗೆ ಕುಡಿಯಲು ನೀರೂ ಇಲ್ಲವೆಂದರೆ ಹೇಗಾಗುತ್ತದೆ? ನಮಗೆ ಒಂದು ಕೋಟಿ ಬೇಡ ಅದೆಲ್ಲಾ ಮಾಡಲು ಹೋದರೆ ಇನ್ನು ನೂರು

ವರ್ಷವಾದರೂ ಮಾಡುವುದಕ್ಕಾಗುವುದಿಲ್ಲ ಈ ರಾಜ್ಯದಲ್ಲಿ ಅದಕ್ಕೆ ಒಂದು ಪ್ಲಾನ್ ಅನ್ನು ಮಾಡಿಸಿ ಪ್ರಯತ್ನ ಮಾಡಿ ಅಲ್ಲಿಯೇ ಇಬ್ಬರು ಸಚಿವರು ಕುಳಿತಿದ್ದಾರೆ ಇಬ್ಬರೂ ಸೇರಿಕೊಂಡು ಸಹಾಯ ಮಾಡಿ ಅವರಿಗೆ ಹಣವನ್ನು ಕೊಡಿಸಿ ಅದಕ್ಕೆ ಹಣವನ್ನೇ ಇಟ್ಟಿಲ್ಲ ಏನು ಮಾಡಬೇಕು ಆ ಮಂತ್ರಿಗಳು? ಎಲ್ಲೆಲ್ಲಿ ಕ್ರೀಡಾಂಗಣವನ್ನು ಮಾಡುತ್ತೇವೆಂದು ಹೇಳಿದ್ದರು, ಕಡೆಗೆ ಆ ಕ್ರೀಡಾಂಗಣಕ್ಕೆ ಹಣವನ್ನೇ ಇಲ್ಲವೆಂದರೆ ಪಾಪ ಅವರೇನು ಮಾಡಬೇಕು? ಕ್ರೀಡಾಂಗಣಕ್ಕೆ ಹಣ ಬೇಕು ನಿಮ್ಮದೂ ಕೂಡ ಅದಕ್ಕೆ ಸಂಬಂಧಪಟ್ಟಿದ್ದು ಬರೀ ನೀವು ಶಾಲೆ ಕಟ್ಟುವುದಲ್ಲ ಹುಡುಗರಿಗೆ ಆಟ ಆಡಲು ಬೇಕಲ್ಲ ನಿಮಗೂ ಆಟದ ಮೈದಾನ ಇಲ್ಲ ಅವರಿಗೂ ಇಬ್ಬರೂ ಕೂಡಿ ಸ್ವಲ್ಪ ಸಹಾಯವನ್ನು ಮಾಡಿ ಇಲ್ಲವೆಂದರೆ ಅದು ಆಗುವುದಿಲ್ಲ ಅವರು ಮಾಡುವುದಿಲ್ಲವೆಂದರೆ ನೀವು ಬಿಡಬೇಡಿ ಮಡುವುದಕ್ಕೆ ಸಾಧ್ಯ ಇದೆ ಎಂದು ಹೇಳಿ ನೀವು ಉತ್ತರವನ್ನು ಕೊಡಿ

ಒಬ್ಬ ಮಾನ್ಯ ಸದಸ್ಯ – 50 ವರ್ಷದಲ್ಲಿ ಜಿಲ್ಲಾ ಲೆವೆಲ್‌ನಲ್ಲೇ ಆಗಿಲ್ಲ ಇನ್ನು ಗ್ರಾಮ ಪಂಚಾಯಿತಿಯಲ್ಲಿ ಹೇಗೆ ಆಗುತ್ತದೆ?

ಶ್ರೀ ಅಲ್ಕೋಡ್ ಹನುಮಂತಪ್ಪ – ಮಾನ್ಯ ಭೋಸರಾಜು ಅವರು ತಾಲ್ಲೂಕು ಮಟ್ಟಕ್ಕಾದರೂ ಒಂದೊಂದು ಕೊಡಿ ಎಂದು ಅವರು ತಮ್ಮ ಭಾವನೆಯನ್ನು ವ್ಯಕ್ತಮಾಡಿದ್ದಾರೆ ಇದು ಉತ್ತಮವಾದ ಸಲಹೆ ಎಂದು ನಾನು ಭಾವಿಸುತ್ತೇನೆ ಮುಂದೆ ಇದನ್ನು ಸರ್ಕಾರ ನಾವೆಲ್ಲ ಕುಳಿತುಕೊಂಡು ಯೋಚನೆ ಮಾಡುತ್ತೇವೆ ಮಾನ್ಯ ಹಿರಿಯ ಸದಸ್ಯರಾದ ರಮೇಶ್‌ಕುಮಾರ್ ಹೇಳಿದ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ ಮಾನ್ಯ ಭೋಸರಾಜು ಅವರು ಹೇಳಿದ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ ಹಿರಿಯರಾಗಿರತಕ್ಕ ಪಾಟೀಲ್‌ರು ಹೇಳಿದ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ ಮುಂದೆ ಇದನ್ನು ಸರ್ಕಾರ ಪರೀಶೀಲಿಸುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ

ಉಪಾಧ್ಯಕ್ಷರು – ಮುಂದಿನ ಪ್ರಶ್ನೆ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಅವರು

ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು –

ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳನ್ನು ದುರುಸ್ತಿ ಮಾಡುವುದು

282 (1364) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) – ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ದುರಸ್ತಿಗೆ ಸರ್ಕಾರ ನಿಗದಿಪಡಿಸಿದ ಮತ್ತು ಬಿಡುಗಡೆ ಮಾಡಿದ ಅನುದಾನವೆಷ್ಟು, (ವಿವರ ನೀಡುವುದು)

ಆ) ಮುಂಡರಗಿ ಮತದಾರಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳೆಷ್ಟು ಕಿಲೋ ಮೀಟರ್‌ಗಳಿವೆ,

ಇ) ಅವುಗಳ ರಿಪೇರಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ,

ಈ) ಮೂರು ವರ್ಷಗಳಲ್ಲಿ ರಾಜ್ಯಹೆದ್ದಾರಿ ನಿರ್ವಹಣೆಯಡಿ ಮುಂಡರಗಿ ಮತದಾರ ಕ್ಷೇತ್ರದಲ್ಲಿ ರಾಜ್ಯಹೆದ್ದಾರಿ ನಿರ್ವಹಣೆಗಾಗಿ ತೆಗೆದುಕೊಂಡ ರಸ್ತೆಗಳಾವುವು ಹಾಗೂ ಅವುಗಳ ರಿಪೇರಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು).

ಅ) 2006–07ನೇ ಸಾಲಿನಲ್ಲಿ ಲೆ ಶೀ 3054 – ರಸ್ತೆ ಮತ್ತು ಸೇತುವೆ (ಯೋಜನೆ)– ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಡಿ ರೂ 13271 00 ಲಕ್ಷಗಳ ಅನುದಾನವನ್ನು ಜಿಲ್ಲಾ ಮುಖ್ಯರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ಹಾಗೂ ಪೂರಕ ಆಯವ್ಯಯದಲ್ಲಿ ರೂ 15000 00 ಲಕ್ಷಗಳನ್ನು ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲು ನಿಗದಿಪಡಿಸಲಾಗಿದ್ದು, ಸದರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಲೆ ಶೀ 3054 – ಯೋಜನೇತರ – 12ನೇ ಹಣಕಾಸು ಆಯೋಗದಡಿಯಲ್ಲಿ ರಸ್ತೆ ಮತ್ತು ಸೇತುವೆಗಳ ನಿರ್ವಹಣೆಗಾಗಿ ರೂ 14615 00 ಲಕ್ಷಗಳನ್ನು

ನಿಗದಿಪಡಿಸಲಾಗಿದ್ದು ಸದರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿ 176 47 ಕಿ ಮೀ ಗಳಷ್ಟು ಉದ್ದದ ಲೋಕೋಪಯೋಗಿ ರಸ್ತೆಗಳಿರುತ್ತವೆ

ಇ) ಮುಂಡರಗಿ ಮತದಾರ ಕ್ಷೇತ್ರ ರಸ್ತೆಗಳ ರಿಪೇರಿಗೆ ಬಿಡುಗಡೆ ಮಾಡಿದ ಹಣ

ರೂ ಲಕ್ಷಗಳಲ್ಲಿ

ಕ್ರ.ಸಂ	ಲೆ ಶೀ	ಬಿಡುಗಡೆ ಮಾಡಿದ ಹಣ
1	3054 (ಯೋಜನೆ) ರಸ್ತೆ ಮತ್ತು ಸೇತುವೆ–ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ	419 00
2	3054 (ಯೋಜನೇತರ) – 12ನೇ ಹಣಕಾಸು	35 28

ಈ) ಮುಂಡರಗಿಯಲ್ಲಿ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ಗದಗ ಪ್ಯಾಕೇಜ್‌ನಡಿ 62 50 ಕಿ ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ರೂ 187 57 ಲಕ್ಷಗಳಲ್ಲಿ ಕೈಗೊಳ್ಳಲಾಗಿದೆ ರಾಜ್ಯ ಹೆದ್ದಾರಿಗಳ ವಿವರ ಕೆಳಕಂಡಂತಿದೆ

1 ಕಲ್ಮಲ – ಶಿಗ್ಗಾಂ ರಾಜ್ಯ ಹೆದ್ದಾರಿ – 24 90 ಕಿ ಮೀ

2 ಅರಬಾವಿ – ಚಳ್ಳಕೆರೆ ರಾಜ್ಯ ಹೆದ್ದಾರಿ – 37 60 ಕಿ ಮೀ

ಒಟ್ಟು – **62 50 ಕಿ ಮೀ**

ಈ ಕಾಮಗಾರಿಗಳು 15–07–2005 ರಲ್ಲಿ ಪ್ರಾರಂಭಗೊಂಡಿರುತ್ತವೆ

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ ಈ ಲೋಕೋಪಯೋಗಿ ಇಲಾಖೆಗೆ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಇದೆಯೇ? ಇದರಲ್ಲಿ ಅವರು ಉತ್ತರವನ್ನು ಕೊಡುತ್ತಾರೆ ಇಲ್ಲಿ ನಾನು

ಕೇಳಿರುವುದು ಲೋಕೋಪಯೋಗಿ ಇಲಾಖೆಗೆ ಎಷ್ಟು ರಸ್ತೆ ಇದೆ, ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂದು ಅದಕ್ಕೆ ನನ್ನ ಕ್ಷೇತ್ರದಲ್ಲಿ 176 ಕಿಲೋ ಮೀಟರ್ ಇದೆ ಎಂದು ಹೇಳಿದ್ದಾರೆ ಅದಕ್ಕೆ ಹಣ ಎಷ್ಟು ಬಿಡುಗಡೆ ಮಾಡಿದ್ದೀರೆಂದರೆ 3054 ರಸ್ತೆ ಮತ್ತು ಮತ್ತು ಸೇತುವೆ ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಿಂದ ಹಿಡಿದು 419 ಲಕ್ಷ ರೂ ಗಳನ್ನು ಬಿಡುಗಡೆ ಮಾಡಿದ್ದೇವೆನ್ನುತ್ತಾರೆ ಅಂದರೆ 176 ಕಿಲೋಮೀಟರ್‌ಗೆ ಇಲ್ಲಿ ಕೊನೆಯಲ್ಲಿ ಹೇಳಿದ್ದಾರೆ ಏನು ಹೇಳಿದ್ದಾರೆಂದರೆ 62 ಕಿಲೋ ಮೀಟರ್ package ನಲ್ಲಿ ಮಾಡಿದ್ದೇವೆಂದು ಹೇಳುತ್ತಾರೆ ಆದರೆ ನೂರು ಕಿಲೋ ಮೀಟರ್‌ಗೆ 4 ಕೋಟಿ ಮಾಡಿದರೆ ಒಂದೊಂದು ಕಿಲೋ ಮೀಟರ್ ಗೆ ನಾಲ್ಕು ಲಕ್ಷ ರೂ ಬೀಳುತ್ತದೆ ಇದ್ದು ಊರಿನಲ್ಲಿ ಅಲ್ಲಿ ರಸ್ತೆಯಲ್ಲಿ ಓಡಾಡಲು ಬರುವುದಿಲ್ಲ ಏನೇನೂ ಮಾಡಿಲ್ಲ ಖಂಡಿತವಾಗಿ ಹೇಳುತ್ತೇನೆ, ನನಗೆ ನಾಚಿಕೆ ಬರುತ್ತದೆ ಹಳ್ಳಿ ಜನರು ಬಯ್ಯುತ್ತಾರೆ ಈಗ ಅಲ್ಲಿ ಅಡ್ಡಾಡಲು ನನಗೆ ಕಷ್ಟವಾಗಿದೆ ಆಮೇಲೆ ಈ package ಮಾಡಿದ್ದಾರೆ, ಈ package ಅನ್ನು ಚಾಲು ಮಾಡುವುದಿಲ್ಲ ಎಲ್ಲೆಲ್ಲೊ ಅಷ್ಟಿಷ್ಟು ಮಾಡಿ ಹೋಗಿ ಬಿಡುತ್ತಾರೆ ಇದು ಮೂರು ವರ್ಷದ ಪ್ಯಾಕೇಜ್ ಎನ್ನುತ್ತಾರೆ 2005 ರಿಂದ ಚಾಲೂ ಆಗಿದೆ ಇದು ಇದು ಮುಗಿಯುವುದು ಯಾವಾಗ? ಏನು condition ಹಾಕಿದ್ದೀರಿ? 419 ಲಕ್ಷ ರೂ ಗಳನ್ನು ಬಿಡುಗಡೆ ಮಾಡಿದರೆ ಆ ರಸ್ತೆ ಏಕೆ ಸರಿಯಾಗಿ ರಿಪೇರಿಯಾಗಿಲ್ಲ? ಇದನ್ನು ಕೂಡ ತಾವು ಹೇಳಬೇಕಾಗುತ್ತದೆ ಮತ್ತು ಈ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಎಂದು ಉತ್ತರ ಕೊಟ್ಟಿದ್ದೀರಲ್ಲ, ಅದು PWD ಯಲ್ಲಿದೆಯೇ? ನಾನು ಕೇಳಿರುವುದು ಇಡೀ PWD ಬಗ್ಗೆಯೇ ಗ್ರಾಮೀಣ ರಸ್ತೆಯ ಬಗ್ಗೆ ನಾನು ಕೇಳಿಲ್ಲ ಅದು ಬೇರೆ ಅದು ಮಾನ್ಯ ಉದಾಸಿಯವರಿಗೆ ಬರುತ್ತದೆ ಉತ್ತರ ಕೊಡುವಾಗ ಗ್ರಾಮೀಣ ರಸ್ತೆ ಎಂದು ಕೂಡಿಸಿ ಕೊಟ್ಟಿದ್ದಾರೆ PWD ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? 176 ಕಿಲೋ ಮೀಟರ್ ಗೆ ರಸ್ತೆ ರಿಪೇರಿಗೆ ಎಷ್ಟು ರೊಕ್ಕ ಬಿಡುಗಡೆ ಮಾಡಿದ್ದೀರಿ ಎಂದು ತಾವು ಹೇಳಬೇಕು ಮತ್ತು ಈ 62 ಕಿಲೋಮೀಟರ್‌ನ package ಅನ್ನು ಮಾಡಿದ್ದೀರಲ್ಲ, ಈ package ಅನ್ನು ಎಷ್ಟು ವರ್ಷದಿಂದ ಮಾಡುತ್ತಿದ್ದೀರಿ? ಇದು ಎಷ್ಟು ದೊಡ್ಡ ಕಂಡೀಷನ್

ಇದೆ? ಇನ್ನೂ ಏಕೆ ಅವುಗಳು ಮುಗಿದಿಲ್ಲ? ಈ package ಅನ್ನು ಎಷ್ಟು ವರ್ಷದಿಂದ ಮಾಡುತ್ತಿದ್ದೀರಿ? ಇದಕ್ಕೆ ಎಷ್ಟು ದೊಡ್ಡ condition ಇದೆ? ಇದೇಕೆ ಇನ್ನೂ ಮುಗಿದಿಲ್ಲ? ಏಕೆ ಚಾಲೂ ಆಗಿಲ್ಲ? ಎಂಬುದನ್ನು ದಯಮಾಡಿ ಹೇಳಬೇಕು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ ಬಗ್ಗೆ ಹೇಳುತ್ತಾ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರಿರತಕ್ಕಂಥ ಗ್ರಾಮೀಣ ರಸ್ತೆಗಳ ಬಗ್ಗೆ ಕೂಡ ವಿವರಗಳನ್ನು ಕೊಟ್ಟಿದ್ದೇವೆ ಅದೊಂದು ವೇಳೆ ವಿವರಗಳು ಬೇಡವೆಂದರೂ ಕೂಡ ಪೂರಕ ಆಯವ್ಯಯದಲ್ಲಿ 15 ಸಾವಿರ ಲಕ್ಷ ರೂಪಾಯಿಗಳು ಬಂದಿದೆ ಅದರ ಬಿಲ್ಲುಗಳ ತೀರುವಳಿ ಮಾಡುವುದಕ್ಕೆ ಕೂಡ ಹಣ ನಿಗದಿ ಮಾಡಲಾಗಿದೆ ಮುಂಡರಗಿ ಮತಕ್ಷೇತ್ರಕ್ಕೆ ಸಂಬಂಧಪಡುವಂತಹ 176 47 ಕಿಲೋಮೀಟರ್ ಉದ್ದದ ಲೋಕೋಪಯೋಗಿ ರಸ್ತೆಯಲ್ಲಿ ಶೀರ್ಷಿಕೆ 3054 ರ ಶೀರ್ಷಿಕೆಯಡಿ 12ನೇ ಹಣಕಾಸು ಯೋಜನೆಯಲ್ಲಿ 35 28 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಇನ್ನು ಮುಂಡರಗಿಯಲ್ಲಿ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ಗದಗ ಪ್ಯಾಕೇಜ್ ಯೋಜನೆ ಕೆಳಗೆ ರಾಜ್ಯ ಹೆದ್ದಾರಿಯ 62 50 ಕಿಲೋಮೀಟರ್ ರಸ್ತೆ ಕಾಮಗಾರಿಯನ್ನು 187 57 ಲಕ್ಷ ರೂಪಾಯಿಗಳಲ್ಲಿ ಕೈಗೊಳ್ಳಲಾಗಿದೆ ಅದರಲ್ಲಿ ಕಲ್ಮಲ–ಶಿಗ್ಗಾಂವ್ ರಾಜ್ಯ ರಸ್ತೆಯ 24 90 ಕಿಲೋಮೀಟರ್, ಅರಬಾವಿ–ಚಳ್ಳಕೆರೆ ರಾಜ್ಯ ರಸ್ತೆಯ 37 60 ಕಿಲೋಮೀಟರ್ ಕಾಮಗಾರಿಗಳು ದಿನಾಂಕ 15 7 05 ರಂದು ಪ್ರಾರಂಭವಾಗಿದೆ ತಾವು ಹೇಳಿದಂತೆ, 187 57 ಲಕ್ಷ ರೂಪಾಯಿಗಳ ಪ್ಯಾಕೇಜ್ ಕೈಗೊಳ್ಳಲಾಗಿದೆ

ಶ್ರೀ ಎಸ್ ಎಸ್ ಪಾಟೀಲ್ – ಪ್ಯಾಕೇಜ್ ಕೊಟ್ಟಿದ್ದರೂ ಚಾಲೂ ಆಗುವುದಿಲ್ಲ ಹೀಗೇ 3 ವರ್ಷಗಳಿಂದಲೂ ಮುಗಿಯುತ್ತಾ ಬಂದಿದೆ! ಅನಂತರ ಚಾಲೂ ಮಾಡಿದ್ದೇವೆಂದು ಮುಗಿಸಿಬಿಡುವುದ! ಆ ರಸ್ತೆಗಳು ಹಾಗೇ ಇದೆ ಆ ರಸ್ತೆಯಲ್ಲಿ ಅಡ್ಡಾಡುವುದಕ್ಕಾಗುವುದಿಲ್ಲ ನೀವು ಅಲ್ಲಿಯೇ ಅಡ್ಡಾಡುತ್ತೀರಿ ಸಿಂಗಟಾಲ್ಲೂರಿಗೆ ಹೋಗುವ ರಸ್ತೆ ನೋಡಿದ್ದೀರಿ ತಾವು ಬರಲಿಲ್ಲ ತಾವು ಅಲ್ಲಿಗೆ ಬಂದರೂ ಬ್ರಿಜ್ ಮೇಲೆ ಹೋಗಿಬಿಡುತ್ತೀರಿ ಜಾತ್ರೆಗೆ ಹೋಗುವ ಜನರೆಲ್ಲರೂ ನನ್ನನ್ನು ಬೈದಿದ್ದಾರೆ ಎತ್ತಿನಗಾಡಿಗಳೂ ಹೋಗುವುದಿಲ್ಲ ಆ ರೀತಿ ರಸ್ತೆಗಳಿವೆ

ಇಲ್ಲಿ ಎಷ್ಟು ರೊಕ್ಕ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ ಹಾಗಾದರೆ, ರೊಕ್ಕ ಎಲ್ಲಿ ಹೋಯಿತು? ಅದಕ್ಕೋಸ್ಕರ, ದಯವಿಟ್ಟು ಹೇಳಬೇಕು ಆ ರಸ್ತೆಗಳನ್ನು ಕೂಡಲೇ ರಿಪೇರಿ ಮಾಡಿಕೊಡುತ್ತೇವೆಂದು ಹೇಳಬೇಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ – ಖಂಡಿತವಾಗಿಯೂ ಕೂಡ ಆ ರಸ್ತೆ ರಿಪೇರಿಗೆ ಸಂಬಂಧಿಸಿದಂತೆ ನಾನು ಕ್ರಮ ಕೈಗೊಳ್ಳುತ್ತೇನೆ ಮತ್ತು ಉತ್ತರ ವಲಯದ Chief Engineer ಗೆ ಆ ವಿಷಯ ತಿಳಿಸುತ್ತೇನೆ

ಹಲಬರ್ಗಾ ಗ್ರಾಮಕ್ಕೆ 220 ಕೆ ವಿ ವಿದ್ಯುತ್ ಘಟಕದ ಮಂಜೂರಾತಿಯ ಬಗ್ಗೆ

284 (2077) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಕ್ಷೇತ್ರದ ಹಲಬರ್ಗಾ ಗ್ರಾಮಕ್ಕೆ 220 ಕೆ ವಿ ವಿದ್ಯುತ್ ಘಟಕ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮಂಜೂರಾಗಿದ್ದಲ್ಲಿ, ಈ ವಿದ್ಯುತ್ ಘಟಕದ ಕೆಲಸ ಯಾವಾಗ ಪ್ರಾರಂಭಿಸಲಾಗುವುದು,

ಇ) ಕೆಲಸ ಪ್ರಾರಂಭಿಸಿದ್ದರೆ ಕಾಮಗಾರಿ ಯಾವ ಹಂತದಲ್ಲಿದೆ,

ಈ) ಪ್ರಾರಂಭಿಸಲ್ಪಟ್ಟ ಕೆಲಸ ಈ ವರ್ಷ ಪೂರ್ತಿಗೊಳಿಸಿ ಅಲ್ಲಿಯ ಜನರಿಗೆ ವಿದ್ಯುತ್ ಸೌಕರ್ಯ ದೊರಕಿಸಿ ಕೊಡಲಾಗುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು, ಬಂದಿದೆ

ಆ) ಈ ಉದ್ದೇಶಿತ ವಿದ್ಯುತ್ ಉಪ ಕೇಂದ್ರದ ಸ್ಥಾಪನೆಗೆ ತಾಂತ್ರಿಕ ಸಲಹಾ ಸಮಿತಿಯು ದಿನಾಂಕ 05 10 2005 ರಲ್ಲಿ ಅನುಮೋದನೆ ನೀಡಿರುತ್ತದೆ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ಕೂಡಲೇ ಇದಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಟೆಂಡರಿಂಗ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

ಇ) ಕಾಮಗಾರಿ ಪ್ರಾರಂಭವಾಗಿರುವುದಿಲ್ಲ

ಈ) (ಆ) ಭಾಗದ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಶ್ರೀ ಪ್ರಕಾಶ್ ಖಂಡ್ರೆ – ದಿನಾಂಕ 5 10 07 ರಲ್ಲಿ ಒಂದು ವಿದ್ಯುತ್ ಉಪ ಕೇಂದ್ರ ಸ್ಥಾಪನೆಗೆ ಅನುಮೋದನೆ ನೀಡಿರುತ್ತಾರೆ ಆದರೆ, 2007 ರಲ್ಲಿ ನಾವು ಕರ್ನಾಟಕದ ಗಡಿ ಭಾಗದಲ್ಲಿರುವವರು ಪಕ್ಕದ ಮಹಾರಾಷ್ಟ್ರ ರಾಜ್ಯದ ಗಡಿ ಭಾಗದಲ್ಲಿದ್ದೇವೆ ಹಾಗಾಗಿ, ನಮಗೆ ಮೊದಲು ಕರೆಂಟ್ ಸರಿಯಾಗಿ ಬರುವುದಿಲ್ಲ, ಸರಿಯಾಗಿ ಸಿಗುವುದಿಲ್ಲ ಇಂತಹ ಪರಿಸ್ಥಿತಿಯಲ್ಲಿ 2005 ರಲ್ಲಿ ಅನುಮೋದನೆ ಸಿಕ್ಕಿ, 2007 ಆದರೂ ಇನ್ನೂ administrative approval ಸಿಕ್ಕಿಲ್ಲ 'Administrative approval ಸಿಕ್ಕಿದ ನಂತರ ನಾವು ಜಮೀನು ಖರೀದಿಸುತ್ತೇವೆ ಅನಂತರ ಟೆಂಡರ್ ಕರೆಯುತ್ತೇವೆ' ಎನ್ನುತ್ತಾರೆ ಈ ಎಲ್ಲಾ ಪ್ರಕ್ರಿಯೆ ಆಗಬೇಕಾದರೆ, ಬಹಳಷ್ಟು ವರ್ಷವಾಗುತ್ತದೆ ಹಾಗಾಗಿ, ಮಾನ್ಯ ಮಂತ್ರಿಗಳಲ್ಲಿ ನಾನು ವಿಶೇಷವಾಗಿ ವಿನಂತಿಸಿಕೊಳ್ಳುತ್ತೇನೆ ತಾವು ನಿಖರವಾಗಿ ಇದಕ್ಕೆ administrative approval ಯಾವಾಗ ಕೊಡುತ್ತೀರಿ? ಮತ್ತು ಕಾಮಗಾರಿಯನ್ನು ಯಾವಾಗ ಚಾಲೂ ಮಾಡುತ್ತೀರಿ? ಇದಕ್ಕೆ ಉತ್ತರ ಸಿಕ್ಕಿದರೆ, ಮಹಾರಾಷ್ಟ್ರದ ಗಡಿ ಭಾಗ ಹಾಗೂ ಉತ್ತರ ಕರ್ನಾಟಕದ ಕೊನೆಯಲ್ಲಿ ನಮ್ಮ ತಾಲ್ಲೂಕು ಇರುವುದರಿಂದ ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ಬಹಳಷ್ಟು ಸಮಸ್ಯೆಗಳಿವೆ ಮಹಾರಾಷ್ಟ್ರ ರಾಜ್ಯಕ್ಕೆ ಸೇರಿರುವ ಗಡಿ ಭಾಗಗಳಲ್ಲಿ ಕರೆಂಟ್ ಸರಿಯಾಗಿ ಸಿಗುತ್ತದೆ ಆದರೆ, ಕರ್ನಾಟಕದ ಗಡಿ ಭಾಗದಲ್ಲಿರುವ ನಮಗೆ ಸಿಗುವುದಿಲ್ಲ ಅವರು ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ನಮಗೆ ಕುಡಿಯುವ ನೀರಿನ ಸಮಸ್ಯೆ ಇದೆ ಹಾಗಾಗಿ, ಗಡಿ ಭಾಗದಲ್ಲಿರುವ ನಮಗೆ ವಿಶೇಷವಾಗಿ, ನಿಖರವಾಗಿ ಕಾಮಗಾರಿ ಚಾಲೂ ಮಾಡುತ್ತೇವೆಂಬ ಉತ್ತರ ಕೊಟ್ಟರೆ ಒಳ್ಳೆಯದು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – **(ಲೋಕೋಪಯೋಗಿ ಪರವಾಗಿ)** ಸನ್ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಕೂಡ ಬಹಳ ಉತ್ತಮವಾಗಿ ಅಲ್ಲಿನ ಜನರ ಸಂಕಷ್ಟಗಳ ಬಗ್ಗೆ ಮಾತನಾಡಿದ್ದಾರೆ ಈಗಾಗಲೇ ತಾಂತ್ರಿಕ ಮಂಜೂರಾತಿಯನ್ನು

ತಾವು ಹೇಳಿದಂತೆ ದಿನಾಂಕ 5 10 2005 ಕ್ಕೆ ಕೊಟ್ಟು, 76 ಕೋಟಿ ರೂಪಾಯಿಗಳನ್ನು ಬರೀ ಉಪ ಕೇಂದ್ರಗಳಿಗೆ ಅಂದಾಜು ಮಾಡಲಾಗಿದೆ ಉಪ ಕೇಂದ್ರದ ನಿರ್ಮಾಣಕ್ಕಾಗಿಯೇ 3,789 ಲಕ್ಷ ರೂಪಾಯಿಗಳನ್ನು ಬೇರೆ ಇಟ್ಟಿದ್ದೇವೆ ಈ ರೀತಿ ವಿವಿಧ ಬಾಬುಗಳಲ್ಲಿ ಖರ್ಚು ಮಾಡುವುದಕ್ಕೆ 4 ಎಕರೆ 3 ಗುಂಟೆ ಜಮೀನು ಅದಕ್ಕೆ ಅಗತ್ಯವಾಗಿತ್ತು ಆ ಜಮೀನಿಗಾಗಿ 60 ಸಾವಿರ ರೂಪಾಯಿಗಳಿಗೆ ಒಂದು ಎಕರೆಯಂತೆ 3 ವರ್ಷದ ಸರಾಸರಿ ತೆಗೆದುಕೊಂಡು 20,031 ರೂಪಾಯಿಯಂತೆ ಜಿಲ್ಲಾಧಿಕಾರಿಗಳು ಅದನ್ನು ಮಾಡಿದರು ಅಲ್ಲಿಯ ರೈತರುಗಳು 20 ಸಾವಿರ ರೂಪಾಯಿಗಳಿಗೆ ನಾನು ಕೊಡುವುದಕ್ಕೆ ತಯಾರಿಲ್ಲ ನೀವು 1 ಲಕ್ಷ 25 ಸಾವಿರ ರೂಪಾಯಿಗಳನ್ನು ಕೊಟ್ಟರೆ ಮಾತ್ರ ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ನಾವು ಬರೆದುಕೊಡುತ್ತೇವೆಂಬ ಮಾತುಗಳನ್ನು ಹೇಳಿದರು ಈಗಾಗಲೇ ಈ ಇಲಾಖೆ ಒಂದು ಎಕರೆಗೆ 1 ಲಕ್ಷ 25 ಸಾವಿರ ರೂಪಾಯಿಯಂತೆ ಖರೀದಿಸುವುದಕ್ಕೆ ಅನುಮತಿಯನ್ನು ಕೂಡ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದವರು ಈಗಾಗಲೇ ಕೊಟ್ಟಿದ್ದಾರೆ ಮತ್ತು ಈಗಾಗಲೇ ಅವರು ಈ ವಿಚಾರವನ್ನು ತಿಳಿಸಿ, D C ಯವರಿಗೆ ಪತ್ರವನ್ನೂ ಬರೆದಿದ್ದಾರೆ 1 ಲಕ್ಷ 25 ಸಾವಿರ ರೂಪಾಯಿಯನ್ನು ಕೊಟ್ಟು ನೀವು ಖರೀದಿಸಿ ಎನ್ನುವ ಮಾತನ್ನು ಹೇಳಿದ್ದಾರೆ ಅದರ ಪ್ರಕ್ರಿಯೆ ಶುರುವಾಗಿದೆ ಈಗಾಗಲೇ ವಿಳಂಬವಾಗಿರತಕ್ಕಂಥಾದ್ದು ನಿಜವಾಗಿಯೂ ಆ ಗಡಿ ಪ್ರದೇಶದಲ್ಲಿ ವಿದ್ಯುತ್ ಯಾವಾಗಲೂ fluctuations ಆಗುತ್ತಿರುತ್ತದೆ ಅಲ್ಲಿ ಉತ್ತಮ ಗುಣಮಟ್ಟದಲ್ಲಿ three phases ನಲ್ಲಿ ವಿದ್ಯುತ್ ಕೊಡುವುದಕ್ಕಾಗುವುದಿಲ್ಲ ಆದ್ದರಿಂದ, ನಾನು ಕ್ರಮ ಕೈಗೊಳ್ಳುತ್ತೇನೆಂದು ಹೇಳಿ, ನಾನು ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ 1 ಲಕ್ಷ 25 ಸಾವಿರ ರೂಪಾಯಿಗಳಿಗೆ ಖರೀದಿಸುವುದಕ್ಕೆ ತಾವು ಕೂಡ D C ಯವರ ಜೊತೆಗೆ ಬಂದು ಆ 4 ಎಕರೆಯನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ

ಶ್ರೀ ಪ್ರಕಾಶ್ ಖಂಡ್ರೆ – ಜಮೀನು ಖರೀದಿ ವಿಷಯದಲ್ಲಿ ಈ ಪ್ರಸ್ತಾವನೆ ರೆವಿನ್ಯೂ ಮಂತ್ರಿಯವರ ಇಲಾಖೆಯಲ್ಲಿದೆ ಮಾನ್ಯ ಪ್ರಕಾಶ್‌ರವರು ರೆವಿನ್ಯೂ ಮಂತ್ರಿಯವರಿಗೆ ಹೇಳಲಿ ನಾನೂ request ಮಾಡುತ್ತೇನೆ ಸರ್ಕಾರದ ಮುಂದಿರುವ ಪ್ರಸ್ತಾವನೆಯನ್ನು approval ಮಾಡಿಕೊಟ್ಟರೆ ಒಳ್ಳೆಯದು

ಶ್ರೀ ಎಂ ಪಿ ಪ್ರಕಾಶ್ – ಆಗಬಹುದು

ರಾಜ್ಯದಲ್ಲಿರುವ I.F.S. ಅಧಿಕಾರಿಗಳು

149 (1254) ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) – ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಖಿಲ ಭಾರತ ಅರಣ್ಯ ಸೇವಾ ಶ್ರೇಣಿಯ (IFS) ಅಧಿಕಾರಿಗಳು ಎಷ್ಟು ಜನ ಸೇವೆ ಸಲ್ಲಿಸಿರುತ್ತಾರೆ,

ಆ) ಇವರಿಗಾಗಿ ಪ್ರತಿ ವರ್ಷ ಖರ್ಚಾಗುವ ಸಂಬಳ ಮತ್ತು ಇತರೆ ಭತ್ಯೆ ಎಷ್ಟು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯ ಮಂತ್ರಿಯವರು)

ಅ) 161

ಆ) ಸಂಬಳ (ಮೂಲ ವೇತನ)	4,84,28,550
ಇತರೆ ಭತ್ಯೆ	1,78,41,873
ಒಟ್ಟು	**6,62,70,423**

ಶ್ರೀ ಕೆ ಆರ್ ರಮೇಶ್ ಕುಮಾರ್ – 161 ಜನರಿದ್ದಾರೆಂದು ತಾವು ಹೇಳಿದ್ದೀರಿ ಒಂದು ವರ್ಷಕ್ಕೆ 6,62,70,423=00 ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದ್ದೀರಿ ನಮ್ಮ ರಾಜ್ಯಕ್ಕೆ ಈ IFS ಶ್ರೇಣಿಯ ಅಧಿಕಾರಿಗಳು ಎಷ್ಟು ಜನರು ಇರಬೇಕೆಂದು, ಇಷ್ಟು ಅಗತ್ಯವಿದೆಯೆಂದು ಹೇಳಿ, ಗುರ್ತಿಸಿ, ನಿಗದಿ ಮಾಡತಕ್ಕಂಥ ಅಧಿಕಾರ ರಾಜ್ಯ ಸರ್ಕಾರಕ್ಕಿದೆಯೇ? ಇಲ್ಲವೇ ಕೇಂದ್ರ ಸರ್ಕಾರಕ್ಕಿದೆಯೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು, ಅರಣ್ಯ ಸಚಿವರ ಪರವಾಗಿ) – ಮಾನ್ಯ ಅಧ್ಯಕ್ಷರೆ, ನನಗೆ ತಿಳಿದ ಮಟ್ಟಿಗೆ IAS, IPS, All India Services ಅಧಿಕಾರಿಗಳು ನಮಗೆ ಎಷ್ಟು ಮಂದಿ ಅಗತ್ಯತೆ ಇದೆಯೆಂದು ರಾಜ್ಯ ಸರ್ಕಾರದ ಪತ್ರದ ಮೇಲೆ ಅವರ ನಿರ್ಧಾರ ಮಾಡಿ ಕಳುಹಿಸಿಕೊಡುತ್ತಾರೆ ಆ ಪ್ರಕಾರ ಇಲ್ಲಿ IFS ಅಧಿಕಾರಿಗಳು ಸೇರಿ 2,200 ಜನರು ಒಟ್ಟು All India Cadre ನಲ್ಲಿರುವವರು

